# ಬಯಲು Bayalu

*....a space of our own*

Azim Premji Foundation

Karnataka Field Institutes | October - 2016 | Issue No.: 50


## 50ನೇ ಸುವರ್ಣ ಸಂಚಿಕೆಯ ಸಂಭ್ರಮದಲ್ಲಿ

## ಬಯಲು



# Contents


1. ಬಯಲಿನ ಸ್ವಚ್ಛಂದತೆ – ನಮ್ಮತನದ ಪ್ರತೀಕ - ಎಸ್.ವಿ ಮಂಜುನಾಥ ....... 3
2. Sharing- the only way to live –Peri ....... 5
3. चंदा मामा - शिवाजी ....... 6
4. ಚೇತೋಹಾರಿ ಜಗದ ಸಾರ್ಥಕ ಹೆಜ್ಜೆ - ಮಂಜುನಾಥ ಎ.ಆರ್ ....... 7
5. Smile- Evidence of Happiness – Sachinkumar Salakki ....... 9
6. ಅಮ್ಮಾ- ಶ್ರೀಹರಿ ಕುಲಕರ್ಣಿ ....... 10
7. ಹಳೆಯ ನೆನಪುಗಳು –ಶೌರೀಶ ....... 10
8. Navaratri – A Celebration of Woman power – Rajesh S Mahantmath ....... 11
9. ಹೀಗೇಕೆ?– ಅರವಿಂದ ರಾಠೋಡ ....... 12
10. Bathukamma the festival of Flowers: Wishing all the readers a happy festive season– Ramadevi ....... 13
11. ಎಚ್ಚರಿಸಿತು ಲೇಖನಿ– ಶ್ರೀಹರಿ ಕುಲಕರ್ಣಿ ....... 15
12. ಹುಡುಕಾಟದ ಹಾದಿಯಲಿ ನಮ್ಮ ಪಯಣ– ದಿಲೀಪಕುಮಾರ ರಾಠೋಡ ....... 15
13. ಒಂದು ಸಂಜೆ ಬಸ್ಸಿನ ಚಿತ್ರ- ಚಿಕ್ಕವೀರೇಶ್ ಎಸ್.ವ. ....... 16
14. ಅನಾಮಿಕ ಸದ್ದು– ಶಿವು ....... 17
15. ಕಳೆದು ಹೋದವರು– ರಾಘವೇಂದ್ರ ಹೇರ್ಳೆ, ಜಿ. ....... 20
16. ನನ್ನ ಬಾಲ್ಯದ ನೆನಪು– ಅಯ್ಯನಗೌಡ ಎಮ್ ಪಾಟೀಲ ....... 21
17. ಕ, ಕೆ ತಲಕಟ್ಟು ಕ. ಕ, ಕೆ ಇಳಿ ಕಾ– ಲೋಹಿತ್ ಚಾಮನೂರ ....... 21
18. ಪದೇ ಪದೇ ಕಾಡುವ ಪ್ರಸಂಗಗಳು– ಹಮೀದ ಮಂಜೇಶ್ವರ್ ....... 22
19. ನಾನು 'ಬಯಲು'– –ಶಿವಕುಮಾರ ಸಿ ಎಸ್ ....... 23
20. ಜೀವನದ ನಗು– –ದಿಲೀಪಕುಮಾರ ರಾಠೋಡ ....... 24
21. ಯಾರ ಸುಖಕ್ಕಾಗಿ ಈ ಮದುವೆ– ಶ್ರೀಲತ ಕೆ. ಎನ್. ....... 24
22. ಇದು ಬರೀ ನೀರಲ್ಲ, ಜೀವ ಜೀವಗಳ ಬೇರು, ಉಸಿರು–ರಾಘವೇಂದ್ರ. ಬಿ. ತಳಕಲ್ ....... 26
23. "ನಾನು" ಎಂಬ ವ್ಯಾಮೋಹದ ವರ್ತುಲದೊಳಗೆ– ಭವ್ಯಾ ಬಿ.. ....... 27
24. ಗೊಂದಲದ ವಿಶ್ವ ಮಾನವ– ಗಿರಿಧರ ವೈದ್ಯ ....... 28
25. ಹನಿಗವಿತೆಗಳು– ಹರೀಶ ಶೆಟ್ಟಿ ಬಂಡ್ಸಾಲ ....... 29
26. ಕತ್ತಲು ಬೆಳಕು– ಹನುಮಂತ ರಾಜು ....... 30

27. ಆಧುನಿಕತೆಯ ಆಚೆಗಿನ ಬದುಕು-ಗಣಪತಿ ಭಟ್ ....................................................................................................31

28. ನೃತ್ಯ ಮಯೂರಿ- ಗಂಗಾಧರಸ್ವಾಮಿ. ಎಸ್....................................................................................................34

29. ಮರೆಯದಿರಿ ಈ ಹಸ್ತಾಕ್ಷರ- ಸಂತೋಷಕುಮಾರ ದಿಕಸಂಗಿ ....................................................................................................34

30. **Probiotics: The technological Development of Food as a Medicine- Sachinkumar Salakki**....................................35

31. **ಮರೀಚಿಕೆ-ಸುದರ್ಶನ**....................................................................................................35

## 1. ಬಯಲಿನ ಸ್ವಚ್ಛಂದತೆ – ನಮ್ಮತನದ ಪ್ರತೀಕ

-ಎಸ್.ವಿ.ಮಂಜುನಾಥ್

ಫೌಂಡೇಶನ್ ನಲ್ಲಿರುವ ಯಾವುದೇ ವ್ಯಕ್ತಿ, ತಾನು ವೈಯಕ್ತಿಕವಾಗಿ ಮತ್ತು ವೃತ್ತಿಪರವಾಗಿ ಬೆಳೆಯಬೇಕಾದರೆ ಶೈಕ್ಷಣಿಕ ತರಬೇತಿಗಳು, ಕಾರ್ಯಾಗಾರಗಳು, ಯೋಜಿತ ಆಂತರಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸಿ ಸಂಸ್ಥೆಯ ಸಾಂಸ್ಕೃತಿಕ ಅಂಗವಾಗಿ ಬೆಸೆದುಕೊಳ್ಳುವುದು, ನಿರಂತರ ಓದು, ಮನನ, ಕ್ಷೇತ್ರ ಭೇಟಿ ಮತ್ತು ಭಾಗೀದಾರರ ಪ್ರಪಂಚವನ್ನು ಅರ್ಥೈಸಿಕೊಳ್ಳುವುದು, ಮುಂತಾದ ಔಪಚಾರಿಕ ವೇದಿಕೆಗಳ ಲಭ್ಯತೆ ಮುಖ್ಯವಾಗುತ್ತದೆ. ಇವುಗಳ ಜೊತೆಗೆ ಅನೌಪಚಾರಿಕವಾದ ಪೂರಕ ವಾತಾವರಣವನ್ನೊದಗಿಸುವ ವೇದಿಕೆಗಳೂ ಅಷ್ಟೇ ಮಹತ್ವದ ಪಾತ್ರವನ್ನು ವಹಿಸುತ್ತವೆ. ಔಪಚಾರಿಕ ಸನ್ನಿವೇಶಗಳಲ್ಲಿ ಪರಿಹಾರವಾಗದ ಎಷ್ಟೋ ಪ್ರಶ್ನೆಗಳಿಗೆ ಅನೌಪಚಾರಿಕ ನೆಲೆಗಟ್ಟಿನಲ್ಲಿ ತಾರ್ಕಿಕ ಅರ್ಥ ಪಡೆಯಲು ಸಹಾಯವಾಗುತ್ತದೆ.

ಅನೌಪಚಾರಿಕವಾಗಿ ನಡೆಯುವ ಚಟುವಟಿಕೆಗಳು ಸದಸ್ಯರ ಮಧ್ಯೆ ಪರಸ್ಪರ ಸಂಬಂಧ ಬೆಸೆಯುವುದಕ್ಕೆ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕೆ, ತಂಡ ಸ್ಫೂರ್ತಿಯನ್ನು ಬೆಳೆಸುವುದಕ್ಕೆ, ಸಹಯೋಗದಲ್ಲಿ ಒಟ್ಟಿಗೆ ಸೇರಿ ಕಾರ್ಯೋನ್ಮುಖರಾಗುವುದಕ್ಕೆ ಸಹಾಯ ಮಾಡುತ್ತವೆ. ಸದಸ್ಯರು ವಿವಿಧ ವಿಭಾಗ / ವಿಷಯಗಳಲ್ಲಿ ಕೆಲಸ ಮಾಡುತ್ತಿರುವಾಗ ತತ್ಸಂಬಂಧ ಗುರಿಗಳನ್ನು ಹೊಂದಿರುತ್ತಾರೆ. ಇಂಥ ಬಹುತ್ವದ ಧ್ಯೇಯೋದ್ದೇಶಗಳೊಂದಿಗೆ ಗುರುತಿಸಿಕೊಂಡಿರುವ ಜನರ ನಡುವೆ ಸಾಮರಸ್ಯವನ್ನು ಸಾಧಿಸಲು ಈ ರೀತಿಯ ಅನೌಪಚಾರಿಕ ಸಮ್ಮಿಳನಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ.



ಈ ಹಿನ್ನೆಲೆಯನ್ನು ಗಮನಿಸಿದಾಗ ನಮ್ಮಂಥ ಸಾಮಾಜಿಕ ಆಸ್ಥೆ ಹೊಂದಿದ ಸಂಸ್ಥೆಗಳಲ್ಲಿ ವಿವಿಧ ಹಿನ್ನೆಲೆಗಳುಳ್ಳ ಸದಸ್ಯರು ಒಟ್ಟುಗೂಡಿದ್ದು, ಪ್ರತಿಯೊಬ್ಬರೂ ವಿಶಿಷ್ಟ ಸೃಜನಶೀಲ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಕೆಲವರು ಕಥೆ–ಕವನ ಬರೆಯುವಲ್ಲಿಯೂ, ಕೆಲವರು ಲೇಖನಗಳನ್ನು ಬರೆಯುವುದರಲ್ಲಿಯೂ, ಕೆಲವರು ವಿವಿಧ ಕಲಾವಂತಿಕೆಗಳನ್ನು ಪ್ರಕಟಿಸುದರಲ್ಲಿಯೂ ಹೀಗೆ ಮುಂತಾದವುಗಳಲ್ಲಿ ಸುಪ್ತ

ಪ್ರತಿಭೆಗಳನ್ನು ಹೊಂದಿರುತ್ತಾರೆ. ಇವನ್ನು ಕ್ರಿಯಾಶೀಲವಾಗಿ ಹೊರಹಾಕಲು ನಮ್ಮ **'ಬಯಲು'** ಅತ್ಯುತ್ತಮ ವೇದಿಕೆಯನ್ನು ಕಲ್ಪಿಸಿರುವುದು ನಮ್ಮೆಲ್ಲರಿಗೆ ಹರ್ಷದಾಯಕವಾದ ಸಂಗತಿಯಾಗಿದೆ.

ಅದೇ ರೀತಿ ನಾವು ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ನಡೆಸುತ್ತಿರುವ ಶಿಕ್ಷಕರ ಕಲಿಕಾ ಕೇಂದ್ರಗಳಲ್ಲಿಯೂ ಸಹ ಮೊದಮೊದಲಿಗೆ ಶಿಕ್ಷಕರು ಟಿ.ಎಲ್.ಸಿಗಳಲ್ಲಿನ ಔಪಚಾರಿಕ ಕಾರ್ಯಕ್ರಮಗಳಿಗಿಂತಲೂ ಹೆಚ್ಚಾಗಿ ಅನೌಪಚಾರಿಕ ಕಾರ್ಯಕ್ರಮಗಲ್ಲಿ ಹೆಚ್ಚು ಸೃಜನಶೀಲವಾಗಿ ಭಾಗವಹಿಸುತ್ತಿರುವುದು, ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದನ್ನು ಕಾಣುತ್ತೇವೆ. ಇವುಗಳಿಗೆ ಉದಾಹರಣೆಗಳೆನ್ನುವಂತೆ, ಮುಸ್ಸಂಜೆ ಮಾತು, ವಾರದ ಓದು, ವಿಶೇಷ ಮಹತ್ವದ ದಿನಗಳ ಆಚರಣೆಗಳಲ್ಲಿ ಶಿಕ್ಷಕರ ಭಾಗವಹಿಸುವಿಕೆ, ಗುಣಾತ್ಮಕವಾಗಿ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಶಿಕ್ಷಕರನ್ನು ಇನ್ನೂ ಹೆಚ್ಚಾಗಿ ಟಿ.ಎಲ್.ಸಿ.ಗಳತ್ತ ಸೆಳೆಯಲು ಇನ್ನೂ ಅನೇಕ ಅನೌಪಚಾರಿಕ ಅವಕಾಶಗಳು ಸೃಷ್ಟಿಸುವಂತಾಗಬೇಕು. ಈ ಅನೌಪಚಾರಿಕ ಚರ್ಚೆಗಳಿಗೆ ವ್ಯವಸ್ಥಿತ ರೂಪ ನೀಡಿ ಪೂರಕ ವಾತಾವರಣವನ್ನು ಸೃಷ್ಟಿಸಿದಾಗ ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಇಂಬು ಕೊಟ್ಟಂತಾಗುವುದೆಂಬ ಆಶಯ ನನ್ನದು.

ಈ ಅನೌಪಚಾರಿಕ ಸಂಸ್ಕೃತಿಯ ಭಾಗವೇ ನಮ್ಮ ಸಂಸ್ಥೆಯಲ್ಲಿ 'ಹೈರಾರ್ಕಿ'ಗೆ ಅಷ್ಟು ಮಹತ್ವ ಇಲ್ಲದಿರುವುದು. ಪ್ರತಿಯೊಬ್ಬರೂ ಎಲ್ಲರೊಂದಿಗೆ ಮುಕ್ತವಾಗಿ ಬೆರೆತು ಮಾತನಾಡಲು ಅವಕಾಶ ಇರುವುದು, ಹೊರಗಡೆ ಹೋದಾಗ ಒಂದೇ ಕಡೆ ತಂಗುವುದು, ಸಮಾನ ವೇದಿಕೆಗಳಲ್ಲಿ ಹಂಚಿಕೊಳ್ಳುವುದು, ಮೊದಲನೇ ಹೆಸರಿನಿಂದಲೇ ಕರೆಸಿಕೊಳ್ಳುವುದು, ಸಹ ಪಂಕ್ತಿ, ಸಹ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಕಾಣುತ್ತೇವೆ. ಈ ಸಂಸ್ಕೃತಿಯು ನಮ್ಮೊಂದಿಗೆ ಕೈ ಜೋಡಿಸಿ ಕೆಲಸ ಮಾಡುವ ಇಲಾಖೆಯ ಅಧಿಕಾರಿಗಳ ಮೇಲೆಯೂ ಧನಾತ್ಮಕ ಪರಿಣಾಮ ಬೀರುತ್ತದೆ. ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಬೇರೆಯದೇ ರೀತಿಯ ಸೇವೆಗಳನ್ನೊದಗಿಸುವುದು, ಹಿರಿಯರು ಬಂದ ಕೂಡಲೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸುವುದನ್ನು ಅಲ್ಲಿನ ಸಂಸ್ಕೃತಿಯ ಭಾಗವಾಗಿ ಕಾಣುತ್ತೇವೆ. ನಮ್ಮ ಶಿಕ್ಷಕರ ಕಲಿಕಾ ಕೇಂದ್ರಗಳಲ್ಲಿ ನಡೆಯುವ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ ಪರಿಣಾಮವಾಗಿ ಇಲಾಖೆಯ ಅನೇಕ ಅಧಿಕಾರಿಗಳು ನಮ್ಮ ಆತ್ಮೀಯ ಅನೌಪಚಾರಿಕ ಸ್ಪಂದನದಿಂದ ಉತ್ತೇಜಿತರಾಗಿ ಧನಾತ್ಮಕ ಬದಲಾವಣೆಯ ಕಡೆಗೆ ಮುಖ ಮಾಡುತ್ತಿರುವುದನ್ನು ಗಮನಿಸಹುದು.

ಸಮಾನ ಅವಕಾಶಗಳ ಸೃಷ್ಟಿ, ಮಾನವೀಯ ಮೌಲ್ಯಗನ್ನೊಳಗೊಂಡ ಸುಸ್ಥಿರ ಸಮಾಜದ ಆಶಯದೊಂದಿಗೆ ನಾವು ಕಾರ್ಯೋನ್ಮುಖರಾಗಿದ್ದೇವೆ. ನಾವೆಲ್ಲರೂ ಪ್ರತಿಯೊಬ್ಬರೂ ಬೇರೆ ಬೇರೆ ಜಿಲ್ಲೆ ಊರು, ತಾಲೂಕಿಗೆ ಸೇರಿದ್ದರೂ ಒಂದೇ ಗುರಿ ಮುಟ್ಟುವ ಕೆಲಸಕ್ಕೆ ಕೈಜೋಡಿಸಿದ್ದೇವೆ. ಹಾಗೆ ನೋಡಿದರೆ ನಾವು ತಲುಪಬೇಕಾದ ಗುರಿ ಬಹು ಅಗಾಧವಾದದ್ದು. ಆ ಗುರಿ ತಲುಪಿ ನಿರೀಕ್ಷಿತ ಬದಲಾವಣೆ ತರುವಲ್ಲಿ ಅನೇಕ ಸವಾಲುಗಲನ್ನೆದುರಿಸಬೇಕಾಗುತ್ತದೆ. ಅಷ್ಟೇ ದೀರ್ಘ ಸಮಯವು ಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಧನಾತ್ಮಕ ಮನೋಭಾವದಿಂದ ಹಲವಾರು ಅನೌಪಚಾರಿಕ ಸನ್ನಿವೇಶಗಳನ್ನು ನಿರ್ಮಿಸಿಕೊಂಡು ಮುನ್ನಡೆಯುತ್ತಿರುವ ನಮ್ಮ ನಡೆ ಮಾತ್ರ ಎಲ್ಲರನ್ನೂ ಉತ್ಸಾಹಭರಿತರನ್ನಾಗಿ ಮುನ್ನಡೆಸುತ್ತಿದೆ.

'ಬಯಲು'ನ ಈ 50ನೆಯ ಸಂಚಿಕೆಯು ಪ್ರಕಟಗೊಳ್ಳುತ್ತಿರುವುದು ನಮ್ಮೆಲ್ಲರಿಗೂ ಖುಷಿ ನೀಡುತ್ತಿದೆ. ಈ ಪಯಣದಲ್ಲಿ ನಮ್ಮ ಸಹೋದ್ಯೋಗಿ ಮಿತ್ರರು ಮುಕ್ತವಾಗಿ ತಮ್ಮ ಅಭಿಪ್ರಾಯಗಳು, ಕಲಿಕೆಗಳು, ಒಳನೋಟಗಳನ್ನು ಹೊರಗೆಡವಿ ಅವರ ಬರವಣಿಗೆಯ ಮುಖೇನ ಸ್ಪಷ್ಟ ರೂಪ ಕೊಟ್ಟುಕೊಳ್ಳುವುದರ ಜೊತೆಗೆ ತಮ್ಮ ಈವರೆಗೆ ಪ್ರಕಟಗೊಳ್ಳದ ರೂಪವನ್ನು ಕಾಣಿಸುತ್ತಿದ್ದಾರೆ. ಹಾಗೂ ನಮ್ಮ ಇತರೆ ಸಹೃದಯಿ ಓದುಗರೊಂದಿಗೆ ಆಪ್ತವಾಗಿಯೇ ತಮ್ಮನ್ನು ತೆರೆದುಕೊಂಡಿದ್ದಾರೆ. ಈ ಎಲ್ಲ ಪ್ರಕ್ರಿಯೆಗಳನ್ನು ಅವಲೋಕಿಸಿದರೆ ನಮ್ಮ ಅಭಿವೃದ್ಧಿಗೆ, ಸಮಷ್ಟಿಯೊಂದಿಗೆ ನಮ್ಮ ಅರ್ಥಬದ್ಧ ಗುರುತಿಸಿಕೊಳ್ಳುವಿಕೆಗೆ ಅನೌಪಚಾರಿಕ ಅವಕಾಶಗಳು ಬಹು ಮುಖ್ಯ ಪಾತ್ರವಹಿಸುತ್ತವೆಂದು ನನ್ನ ಭಾವನೆ.

'ಬಯಲು' ಸಂಪಾದಕೀಯ ತಂಡ ತಮ್ಮ ಎಲ್ಲಾ ಕೆಲಸಗಳ ಮಧ್ಯದಲ್ಲೂ ಇದರ ಪ್ರಕಟನ ಕಾರ್ಯಕ್ಕೆ ಸಮಯವನ್ನೂ ಪ್ರೀತಿಯನ್ನೂ ಧಾರೆಯೆರೆದು ಅದ್ಭುತ ಕ್ರಿಯಾಶೀಲತೆಯಲ್ಲಿ ತೊಡಗಿದ್ದಾರೆ. ಲೇಖನಗಳ್ಳು ನಿಗದಿತ ದಿನಾಂಕ ದೊಳಗೆ ಸಂಗ್ರಹಿಸುವುದು, ಸಂಪಾದನೆ ಮಾಡುವುದು, ಚಿತ್ರಬಿಡಿಸುವುದು, ಲೇಔಟಿಗೆ ಹಾಕುವುದು, ಪ್ರತಿ ತಿಂಗಳಿನ 15ರೊಳಗೆ ಚಾಚೂ ತಪ್ಪದಂತೆ ನಮ್ಮ ಮೇಲ್ ಬಾಕ್ಸ್ ಸೇರುವಂತೆ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ನಮ್ಮನ್ನು ಮುದಗೊಳಿಸುತ್ತಲೇ ಈ ತಂಡವು ಸಾಂಸ್ಕೃತಿಕವಾಗಿ ನಮ್ಮನ್ನು ಶ್ರೀಮಂತಗೊಳಿಸುತ್ತಿದೆ. ಇಂತಹ ಅನೌಪಚಾರಿಕ ಕಲಿಕಾ ವಾತಾವರಣ ಸೃಷ್ಟಿಸಿ 'ಸುವರ್ಣಯಾನ'ವನ್ನು ಯಶಸ್ವಿಯಾಗಿ ಪೂರೈಸಿರುವ ತೆರೆಯ ಹಿಂದಿನ ಎಲ್ಲ ಕೈಗಳಿಗೆ, ಉಲ್ಲಾಸದಾಯಕ ಮನಸ್ಸುಗಳಿಗೆ ಅಭಿನಂದನೆಗಳನ್ನು ಹೇಳಲೇಬೇಕು. ಹಾಗೆಯೇ ಈ ಪತ್ರಿಕೆಯನ್ನು ಜೀವಂತವಾಗಿರಿಸಲು ಕಾರಣರಾಗಿರುವ ಎಲ್ಲ ಬರಹಗಾರರೂ ಸ್ತುತ್ಯಾರ್ಹರು.

'ಬಯಲು' ನಿರಂತರವಾಗಿ ಇನ್ನು ಮುಂದೆಯೂ ನಮ್ಮೆಲ್ಲರ ಮನಸ್ಸುಗಳನ್ನು ತಣಿಸುತ್ತ ನಮ್ಮೆಲ್ಲರ ನಡುವಿನ ಸಾಂಸ್ಕೃತಿಕ ಕೊಂಡಿಯಾಗಿ ತನ್ನ ಚಲನಶೀಲತೆಯನ್ನು ಉಳಿಸಿಕೊಳ್ಳಲಿ. ನಮ್ಮೆಲ್ಲರನ್ನೂ ಹೃದ್ಯಗೊಳಿಸಿ ಹೆಚ್ಚು ಭಾವನಾತ್ಮಕವಾಗಿ ಬೆಳೆಸಲಿ ಎಂದು ಹಾರೈಕೆಗಳೊಂದಿಗೆ.

## 2. Sharing- the only way to live

- ***Peri***

The most vivid instance I remember of sharing was when I was probably in my 5th or 6th class. We had all gone to the forest to cut and collect greens to lay a bed for the cattle in its shed. On our way back we found mushrooms on a huge patch of land. Small cute little sprouts out of the earth. In the dense green forest the white patch stood out invitingly. My uncle bent down to gather them. My grandfather stopped him saying, "Call others from the village". Both of us, went to the village and called out, "We have found mushrooms, come out to collect". And few of our people from the villager came and we collected mushrooms together. I remember asking my grandfather why we had to call others. He told something like this, "This is the norm, it is said that whenever mushrooms are found in the hills or in the forests we need to call others and collect it along with them. We shall not touch the mushrooms till we invite at least 5 households". Later on in my life I read about the reasons for such a norm. But the most important thing I remember from that incident is the value of sharing with others.




What has gone wrong and why? We cannot understand it easily. But sharing today has become rare. Things are moving towards non-sharing. The major non-sharing thing I remember is from the epic Mahabharata where Duryodhana says, "NO! Not an inch of land for the Pandavas". And all of us understand the tragedy that followed. Today you go to any public place, sharing as a culture is vanishing. Nobody wants to share a seat in a bus or a train. Nobody wants to give way to other vehicles on a road, leave aside sharing of land or the fruits in a tree. We cannot share even the space in public parks. We get irritated when others come in. We have become highly individualistic. We are in a mess. Using public transport, public schools and public health care system all has declined to such an extent that we are left with degenerated and destroyed public systems. We have made life miserable to all of us, especially the poor. All of us are convinced that life cannot go long in this way. But we are in a state of affairs where nothing can be done. Life is not sustainable this way. Is there a way out?

The only way is to learn from the poor. For poor leading life is difficult and they manage it by sharing. The resources are meagre and with whatever is there they survive by sharing. My father had a heart attack and for 2 months he was in a Govt. Hospital. I was beside him taking care of his needs. Majority of the patients in that ward did not have any attendants. And it was the attendants of other patients who helped them. Some of us would take care of the other patients in the ward. And this was the norm in the entire hospital. I would say, even today, this is the way Govt. Hospital functions. Helping each other and sharing.

How do the poor students manage to clear the exams? Among the poor students we find this concept of 'group study'. They manage to clear the exam with the support of others. It is nothing but sharing the space

and knowledge. We have one set of students competing to be on the top and then you have this set of students cooperating to see that all of them manage to pass.


I feel that we have developed to this extent as a society only through sharing. Take the tribal life or the early agriculture society. Sharing was the norm during the hunter gatherer stage - be it fruits, tubers, fish or meat. All were perishable items. No way of hoarding it. We were forced to share. We had to share. In a normal tribal society the children are quite healthy. Child rearing in tribal society is a shared act. In 1983 I was in B R Hills with the Soliga tribes. One norm of theirs which had a very deep impact on me was the way they looked after their children. They would feed any child which was near their hut or playing with their child during eating time. They feed all the children, in this process they might feed others' children and their children might not be with them. But, it was understood that their Child would be fed by some other family somewhere. That was not only the sharing of the food, but, also sharing the child rearing process itself!

Sharing I feel is the greatest virtue and a value. Giving is good. But, I feel that giving has an element of ego in it. And to be able to give you need to collect and hoard. Only then you can give what you have. But, at any point of time you could share whatever you have. Sharing has humbleness woven into it and it is devoid of hierarchy. As a philosophy too sharing is simpler and lighter. The civilization has understood in a hard way, that sharing is the only sustainable way of living. It is easy to start. We have to start sharing whatever we have with the ones who need it. Once we start sharing, it is such a fulfilling act that we cannot stop sharing, sharing becomes a way of life.

***

## 3. चंदा मामा

– शिवाजी



एक दिन की बात है
चंदा मामा भी साथ है
मामा मेरा बड़ा सयाना
सिखाता मुझे वह रोज नया गाना
एक दिन की बात है...

चंदा मामा मेरा दोस्त
मुझे बनाता बड़ा चुस्त
कभी कभी बादल में छुप जाता
छुपकर मुझे वो खेल सिखाता
एक दिन की बात है...

चंदा मामा बड़ा गोरा
मुझको कहता तू बड़ा प्यारा
कभी कभी ओ दिन में भी आता
इसलिए भी मुझे वह बड़ा भाता

एक दिन की बात है
चंदा मामा भी साथ है...

***

## 4. ಚೇತೋಹಾರಿ ಜಗದ ಸಾರ್ಥಕ ಹೆಜ್ಜೆ

*– ಮಂಜುನಾಥ ಎ.ಆರ್*

ನಾನು ಮತ್ತು ನನ್ನ ಬಾಲ್ಯದಲ್ಲಿ ನೆನಪು.

ಬದುಕು ವಿಚಿತ್ರ ಮತ್ತು ವಿಸ್ಮಯ. "ಒಂದು ಜೀವ ಜನ್ಮ ತಾಳಿದಾಗಲೇ ಅಂತ್ಯ ನಿರ್ಧರಿತ–ಇವೆಲ್ಲ ತತ್ವಶಾಸ್ತ್ರ" ಅನಿಸುತ್ತೆ, ಆದರೂ ಸಹ ನಮ್ಮಜ್ಜಿ ಗೌರಿಶಿಲ್ಪಿ ಬಹಳ ಗಟ್ಟಿಗಿತ್ತಿ. ಆಕೆಯದು ತುಂಬಾ ವಿಚಿತ್ರ ಬದುಕು. ಆಕೆ ಬಾಲ್ಯದಲ್ಲಿ ಸ್ನೇಹಿತರೊಂದಿಗೆ ಆಡಿಲ್ಲ, ಖುಷಿಪಟ್ಟಿಲ್ಲ. ಏಕೆಂದರೆ ಅವಳಿಗೆ ಅವರಮ್ಮ ಬಾಲ್ಯದ ಮದುವೆ ಮಾಡಿಸಿದರಂತೆ. ನಮ್ಮಜ್ಜ ಅಮರಶಿಲ್ಪಿ. ತುಂಬಾ ಚೆನ್ನಾಗಿ ಶಿಲ್ಪ ಕೆತ್ತನೆ ಕೆಲಸ ಮಾಡುವ ವೃತ್ತಿ ಅವರದು ಹೀಗೆ ಸೊಗಸಾದ ಅವರ ಜೀವನ ನಂದಿನಿಬಾಯಿಯೆಂಬ ಮುದ್ದು ಮಗಳಿಂದ ತಮಾಷೆಯಿಂದ ತುಂಬಿತ್ತು. ಆಕೆಯು ಬೆಳೆಯುತ್ತಾ ದೊಡ್ಡವಳಾದಳು, ಆಕೆ ಕಣ್ಮನಗಳನ್ನು ಸೆಳೆಯುವಂತೆ ಆಕರ್ಷಣೀಯಳಾಗಿದ್ದಳು. ಅವರಪ್ಪ, ಅಮ್ಮನ ಸಡಗರ, ಸಂತೋಷಕ್ಕೆ ಪಾರವೇ ಇರಲಿಲ್ಲ. ಮುದ್ದು ಮಗಳು ನಂದಿನಿಬಾಯಿಯ ಮದುವೆಯಾಯಿತು. ಸ್ವರ್ಗ ಇವರ ಮನೆ ಸ್ವತ್ತು ಅನ್ನೋತರ ಇದ್ದರು. "ಅತಿ ಖುಷಿ ಹೆಚ್ಚು ಸಮಯವಿರಲಾರದು". ವಿಧಿ ವಿಲಾಸವೇ ಬೇರೆ ಆಗಿತ್ತು. ನಂದಿನಿಬಾಯಿಯ ಮದುವೆಯಾದ ವರ್ಷಕ್ಕೆ ಆಕೆಯ ಪತಿರಾಯ ಜವರಾಯನ ಪಾಲಾಗುತ್ತಾನೆ. ತನ್ನವರನ್ನೆಲ್ಲಾ ಬಿಟ್ಟು ಗಂಡನ ಮನೆಗೆ ಹೋದ ನಂದಿನಿಬಾಯಿಗೆ ಗಂಡನ ಮನೆಯವರ ಸಂಪ್ರದಾಯದಂತೆ ಕೇಶಮಂಡನ , ಶ್ವೇತ ವಸ್ತ್ರ ಇತ್ಯಾದಿ..

ನಂದಿನಿಬಾಯಿಯ ಅಮ್ಮ ಗೌರಿಶಿಲ್ಪಿ ಇಡೀ ಸಮುದಾಯದ ಸಂಪ್ರದಾಯವನ್ನೇ ವಿರೋಧಿಸಿ ಹಿರಿಯರನ್ನು ಎದುರು ಹಾಕಿಕೊಂಡು ತನ್ನ ಮಗಳನ್ನು ತನ್ನೂರಿಗೆ ಕರೆದೊಯ್ದಳು. ಆಗ ನಂದಿನಿಬಾಯಿ ಗರ್ಭವತಿ. ಮಗಳನ್ನು ಆ ಸಮಯದಲ್ಲಿ ಸಾಧ್ಯವಾದಷ್ಟು ಸಂತೋಷವಾಗಿ ಸಾಕುತ್ತಾ ಬಂದಳು. ಅಷ್ಟರಲ್ಲಿ ನಂದಿನಿಬಾಯಿ ಕೆಂಪಾದ, ಗುಂಡು–ಗುಂಡಾಗಿರುವ ಮುದ್ದಾದ ಗಂಡು ಮಗುವಿಗೆ ಜನ್ಮಕೊಟ್ಟಳು. ಆ ಮಗುವಿಗೆ ರಾಜನಾಥನೆಂದು ಕರೆದರು. ಆ ಮಗು ಬೆಳೆಯುತ್ತ ದೊಡ್ಡದಾಗುತ್ತಾ ಹೋಯಿತು. ಆ ಮಗು ಮತ್ತು ಮಗಳು ನಂದಿನಿಬಾಯಿಯ ಪೂರ್ಣ ಜವಾಬ್ದಾರಿ ಹೊತ್ತ ಅಜ್ಜಿ ಗೌರಿಶಿಲ್ಪಿಯ ಗಂಡ ಅಮರಶಿಲ್ಪಿ ದೂರದ ಊರಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಮೃತರಾದರು. ಗೌರಿ ಬಾಲ್ಯದಿಂದಲೂ ಕಷ್ಟಗಳನ್ನೆದುರಿಸಿ ವಜ್ರ ಹೃದಯಿಯಾಗಿದ್ದಳು. ಇಡೀ ಸಂಸಾರದ ನೊಗ ಹೊತ್ತ ಗೌರಿಶಿಲ್ಪಿ ಸಂಸಾರವನ್ನು ಸರಿದೂಗಿಸಲು ಕೂಲಿ ಕೆಲಸಕ್ಕೆ ಹೋಗೋಕೂ ಶುರು ಮಾಡಿದಳು. ಆಗ ಇಡೀ ಸಮುದಾಯದವರೆಲ್ಲ ಗೌರಿಯನ್ನ ಹಂಗಿಸುತ್ತಿದ್ದರು. ಆದರೂ ಆಕೆ ಇವನ್ನೆಲ್ಲ ಮೈಗೆ ಹಚ್ಕೊಳೋಕೆ ಹೋಗ್ಲಿಲ್ಲ. ತನ್ನ ಪಾಡಿಗೆ ತಾನು ಕೂಲಿ–ನಾಲಿ ಮಾಡಿ ತನ್ನ ಮಗಳನ್ನು, ಮುದ್ದು ಮೊಮ್ಮಗನ್ನು ಸಾಕುತ್ತಾ ಹೋದಳು.



ರಾಜನಾಥ ಬೆಳಯುತ್ತ ಬೆಳೆಯುತ್ತಾ ದೊಡ್ಡವನಾದ. ಗೌರಜ್ಜಿ ಅವನನ್ನು ಶಾಲೆಗೆ ಸೇರಿಸಿದರು. ದಿಕ್ಕಿಲ್ಲದ ಆ ಸಂಸಾರಕ್ಕೆ ಆ ಹುಡುಗನೇ ಸರ್ವಸ್ವನಾದ. ಪ್ರೀತಿಗೆ ಒಡೆಯನಾದ. ಅಮ್ಮ, ಅಜ್ಜಿಯ ಬದುಕಿಗೆ ದಿಕ್ಕಾದ. ಪ್ರಾಥಮಿಕ ಶಾಲಾ ದಿನಗಳ ಸಂದರ್ಭದಲ್ಲಿ ಚೆನ್ನಾಗಿ ಕಲಿಯುತ್ತಾ ಶಿಕ್ಷಕರಿಗೂ ಅಚ್ಚು–ಮೆಚ್ಚು. ಹೀಗೆ ಬಾಲ್ಯ ದಿನಗಳು ಸಾಗುತ್ತಾ ಪ್ರೌಢಶಾಲೆಗೂ ಬಂದ ರಾಜು ೧೦ನೇ ತರಗತಿಯಲ್ಲಿ ಪಾಸಾದ. ಹುಡುಗನ ಮನೆಯಲ್ಲಿ ಸಂಭ್ರಮ ಮನೆ ತುಂಬಿ ತುಳುಕಿತ್ತು. ಅಷ್ಟೊತ್ತಿಗೆ ಮತ್ತೊಂದು ಆಘಾತ ಅವರಿಗೆ ಕಾದಿತ್ತು. ಏಕೆಂದರೆ ಅವನು ಮುಂದೆ ಕಲಿಯಬೇಕಾದರೆ ಬೇರೆ ಊರಿಗೆ ಹೋಗಿ ಓದಬೇಕಾಗಿತ್ತು, ಆದರೆ ಆ ಹುಡುಗನ ಮನೆಯಲ್ಲಿ ಓದಿಸಲು, ಅಶಕ್ತರಾಗಿದ್ದರು. ಹಾಗೂ ಆ ಹುಡುಗನನ್ನು ಅಜ್ಜಿ, ಅವನಮ್ಮ ಬಿಟ್ಟು ಇರಲಾರದಷ್ಟು ಬಾಂಧವ್ಯದ ಬೆಸುಗೆ ಅವರಲ್ಲಿತ್ತು. ಅವನು ಅವರಜ್ಜಿ ಹೇಳಿದ ಕಥೆಗಳಿಂದ ಸ್ಫೂರ್ತಿ ಪಡೆದು ಧೈರ್ಯದಿಂದ ಅವರಮ್ಮ, ಅಜ್ಜಿಗೆ ತಿಳುವಳಿಕೆ ಹೇಳಿ ತನ್ನ ಮುಂದಿನ ವಿದ್ಯಾಭ್ಯಾಸ ಮುಂದುವರಿಯಲು ತೀರ್ಮಾನಿಸಿ 'ಕಿಬ್ಬೂರು' ಎಂಬ ಸ್ಥಳಕ್ಕೆ ಹೊರಟು ನಿಂತ. ಪೂರ್ವ ಪದವಿಗೆ ಬೇಕಾದ ಸಿದ್ಧತೆ ಮಾಡಿಕೊಂಡು ಕಲಿಯಲು ತೀರ್ಮಾನಿಸಿ ಹಾಸ್ಟೆಲ್‌ನಲ್ಲಿದ್ದುಕೊಂಡು ಕಲಿಯುತ್ತ ಅಲ್ಲಿನ ಶಿಕ್ಷಕರ ಮೆಚ್ಚುಗೆ ಪಡೆದು ಉತ್ತಮ ವಿದ್ಯಾರ್ಥಿಯಾದ. ಅಷ್ಟೊತ್ತಿಗೆ, ಅವರಜ್ಜಿಗೆ ದುಡಿಯಲು ಮೈಯಲ್ಲಿ ಕಸುವೇ ಇರಲಿಲ್ಲ. ಅವನಮ್ಮ ಕೊಡೋ ಧೈರ್ಯ, ತಿಳುವಳಿಕೆಯಿಂದ ಸ್ಫೂರ್ತಿ ಪಡೆದ ರಾಜು, ಅಷ್ಟೊತ್ತಿಗೆ ಕಾಲೇಜು ಕಲಿಕೆಯನ್ನೇ ಬಿಡುವಷ್ಟು ಕಷ್ಟದ ದಿನಗಳು ಅವನನ್ನು ಬಿಡದಂತೆ ಕಾಡಿದವು, ರಾಜು ಇವುಗಳಿಗೆ ಪರಿಹಾರ ಹುಡುಕಿದ. ಇಷ್ಟಕ್ಕೆಲ್ಲ ಕಾರಣ 'ದುಡ್ಡು' ಮೊದಲು ಇದನ್ನು ಪಡೆದರೆ ನನ್ನ ಓದಿಗೂ, ಮನೆಯ ನೆಮ್ಮದಿಗೂ ಅಡ್ಡಿಯಾಗೋದಿಲ್ಲ ಎಂದು ಯೋಚಿಸಿ ಕಾಲೇಜು ರಜೆಯಿರುವಾಗ ಹೋಟೆಲ್‌ನಲ್ಲಿ ಕೆಲಸ ಮಾಡಿದ. ರಾತ್ರಿ ಸಮಯದಲ್ಲಿ ಬಣ್ಣ ಹಚ್ಚುವ ಕೆಲಸ ಮಾಡಿದ. ಅಮ್ಮನ ಜೊತೆಗೆ ರಾಜು ಅಜ್ಜಿಯ ಯೋಗಕ್ಷೇಮಕ್ಕೆ, ಕುಟುಂಬದ ಜವಾಬ್ದಾರಿಗೆ ಮೆಲ್ಲಗೆ

ನೆರವಾಗುತ್ತಾ ಬಂದ. ಕಾಲೇಜು ಪರೀಕ್ಷೆಯಲ್ಲೂ ಪಾಸಾದ. ಅವರಜ್ಜಿಗೆ ಎಲ್ಲಿಲ್ಲದ ಖುಷಿ. ಮತ್ತೆ ಮನೆಯಲ್ಲಿನ ಸಂತೋಷಕ್ಕೆ ಕಾರಣನಾದ ರಾಜುಗೆ ಮತ್ತದೇ ಪ್ರಾಬ್ಲಮ್ಮು. ಅವರ ಅಮ್ಮ "ಏ ರಾಜ, ನೀನು ಓದುದ್ದು ಸಾಕು! ಎಲ್ಲಾದರೂ ಕೆಲಸ ಹುಡುಕಿ ಕೆಲಸ ಕಲಿತ್ಕೊ" ಎಂದರು.



ಅಜ್ಜಿ ರಾಜುಗೆ "ಬೇಡ ರಾಜು ಓದ್ಲೇ ಬೇಕು" ಅಂತ ಹಠ ಮಾರಿಯಂತೆ ಹಠ ಮಾಡಿ ಕಾಲೇಜಿಗೆ ಕಳುಹಿಸಿದಳು. ಕೊನೆಗೆ ಆ ಹುಡುಗನಿಗೆ ಮನೆಯಲ್ಲಿ ತೊಂದರೆಗಳು ಜಾಸ್ತಿಯಾದಂತೆ ಅವನಿಗೆ ಓದುವ ಹಂಬಲವೂ ಜಾಸ್ತಿಯಾಯಿತು. ಅಮ್ಮ ಕೂಡಿಟ್ಟ ಹಣ ರಾಜುವಿನ ಪದವಿ ಶಿಕ್ಷಣಕ್ಕೆ ಸಹಾಯವಾಯಿತು. ಕೊನೆಗೂ ಪದವಿ ಶಿಕ್ಷಣಕ್ಕೆ ಸೇರಿದ  ಹುಡುಗ ಪದವಿ ಕಾಲೇಜಿನ ಉಪನ್ಯಾಸಕರ ಮೆಚ್ಚುಗೆ ಪಡೆದು ಅವರ ಮನೆಗಳಲ್ಲಿ ಅಲ್ಪ–ಸ್ವಲ್ಪ ಸಹಾಯ ಮಾಡಿ, ಅವರ ಮನೆಯಲ್ಲಿ ಊಟ ಮುಗಿಸಿ, ಕಿಬ್ಬೂರಿನಲ್ಲಿನ ಕುರುಬ ಮಠದಲ್ಲಿ ರಾತ್ರಿ ಸಮಯ ಮಲಗಿ, ಬೆಳಗ್ಗೆ ಪುನಃ ಕಾಲೇಜು ಹೀಗೆ ನಡೆಯುತ್ತಿರುವಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕಿಬ್ಬೂರು ಇಲ್ಲಿನ ಉಪನ್ಯಾಸಕ ಪ್ರೊ.ನಾಗಣ್ಣ ಕಾಕರಪತ್ತಿ  ಎಂಬವರು ರಾಜು ಕುರುಬ ಮಠದ ಅಂಗಳದ ಚಳಿಯಲ್ಲಿ ಮಲಗಿರುವುದನ್ನು ನೋಡಿ, ರಾಜುವಿನ ವೃತ್ತಾಂತವನ್ನು ತಿಳಿದು ಅವನಿಗೆ ಆಸರೆಯಾದರು. ಮಕ್ಕಳಿಲ್ಲದ ಅವರು ರಾಜುವನ್ನು ಮಗನಂತೆ ಸಾಕ ಹತ್ತಿದರು. ರಾಜುವಿನ ಮುಗ್ಧತೆ, ಸಂಭಾವಿತತನದಿಂದಾಗಿ ಆತ ಕಾಲೇಜಿನಲ್ಲಿ ಎಲ್ಲರ ಪ್ರೀತಿಗೆ ಪಾತ್ರನಾದ. ಇತ್ತ ಮನೆಯಲ್ಲಿ ರಾಜುವಿನ ಅಜ್ಜಿಗೆ ಕ್ಷಯರೋಗ ಬೆನ್ನತ್ತಿತು. ರಾಜು ಅವರಜ್ಜಿಯನ್ನು ಪ್ರೀತಿಯಿಂದ, ಮಮತೆಯಿಂದ ಪಕ್ಕದ ಪಟ್ಟಣಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸಿ, ಉಪಚಾರ ಮಾಡುತ್ತಾ ಬಂದ. ಮೊಮ್ಮಗನ ಉಪಚಾರವೇ ಅಜ್ಜಿಗೆ ಸಿದ್ಧೌಷಧವಾಯಿತೇನೊ! ಕೆಲವೇ ಸಮಯದಲ್ಲಿ ಅಜ್ಜಿಯನ್ನ ಆರೋಗ್ಯವಂತೆಯಾನ್ನಾಗಿ ಮಾಡಿದನು. ಸಂಬಂಧಿಕರ ಸಹಾಯ ಸಿಗಲಿಲ್ಲವೆಂದು ಕೈಕಟ್ಟಿ ಕೂರಲಿಲ್ಲ. ರಾಜು ತನ್ನ ಪ್ರಯತ್ನ ಮಾಡುತ್ತಿದ್ದನು. ಹೀಗೆ ಸಾಗುತ್ತಿದ್ದ ರಾಜುವಿನ ಕಲಿಕೆಯ ಪ್ರಯತ್ನದಿಂದಾಗಿ ವಿದ್ಯಾಭ್ಯಾಸ ನಿರಂತರವಾಗಿ ಸಾಗುತ್ತಿತ್ತು. ರಾಜುಗೆ ವಕೀಲನಾಗುವ ಕನಸು. ಆದರೆ ಅಜ್ಜಿಗೆ ಮೊಮ್ಮಗನನ್ನು ಶಿಕ್ಷಕನನ್ನಾಗಿಸುವ ಕನಸು ಅಜ್ಜಿಯದು. ಕೊನೆಗೂ ಅಜ್ಜಿಯ ಆಸೆಗೆ ತನ್ನ ಆಸೆಯನ್ನು ನೈವೇದ್ಯ ಮಾಡಿ. ಅಜ್ಜಿಯಾಸೆಗೆ ಪನ್ನೀರು ಚುಮುಕಿಸಿ ರಾಜು ಮೇಷ್ಟ್ರಾದ.

ಅಜ್ಜಿ, ಅಮ್ಮನ ಕನಸುಗಳಿಗೆ ಬಾನಂಗಳದಲ್ಲಿ ಜರತಾರಿಯ ಸಂತಸದ ಕುಸುಮ ಕಸೂತಿ ಹಚ್ಚಿಸಿ ಮನೆಗೆ ಬೆಳಕಾದ ನಂತರ ಮನೆಯ ಸಂಪೂರ್ಣ ಹೊಣೆಗಾರಿಕೆ ತೆಗೆದುಕೊಂಡು ಅಜ್ಜಿಯ, ಅಮ್ಮನ ಉಪಚಾರಕ್ಕೆ ಇಳಿದ. ಅತೀವ ಪ್ರೀತಿಯಿಂದ ನೋಡಿಕೊಳ್ಳುವ ಅಜ್ಜಿ ಗೌರಿಗೆ ಒಂದು ದಿನ ಭಯಂಕರ ಜ್ವರ ಬಂತು. ರಾಜು ಮತ್ತವನಮ್ಮ ಏನು ಮಾಡಬೇಕೆಂಬುದನ್ನು ತಿಳಿಯದೆ  ಅಜ್ಜಿಯನ್ನು ಆಸ್ಪತ್ರೆಗೆ ಕರೆದೊಯ್ದರು. ಡಾಕ್ಟರ್ ಅಜ್ಜಿಯ ಎದೆಯಗೂಡಿನ ಮೇಲೆ ಸ್ಟೆಥೊಸ್ಕೋಪ್ ಆಡಿಸಿ ನೋಡಿ, ಅಜ್ಜಿಗೆ ಏನಾಗಿದೆ ರಾಜು? ಎಂದು ಕೇಳಿದರು.

"ಡಾಕ್ಟರ್ ಸರ್ ಅಜ್ಜಮ್ಮ ರಾತ್ರಿಯಿಂದ ಮುಲುಕುತ್ತಿದ್ದಾರೆ, ಮೈಯೆಲ್ಲಾ ಬಿಸಿ ಇದೆ" ಎಂದ. ಡಾಕ್ಟರ್ ಅಜ್ಜಿಗೆ ಇಂಜೆಕ್ಷನ್ ಮಾಡಿ, ಮಾತ್ರೆ ಕೊಟ್ಟರು. "ಅಜ್ಜಿಯನ್ನು ಹುಷಾರಾಗಿ ನೋಡ್ಕೋ ರಾಜು" ಎಂದರು. ಅಜ್ಜಿಯನ್ನು ರಾಜು ಮನೆಗೆ ಕರೆದುಕೊಂಡು ಹೋಗೋವಾಗ ಅಜ್ಜಿ ಹೇಳಿದಳು. "ರಾಜು ನನಗೆ ದ್ರಾಕ್ಷಿ ಹಣ್ಣು ಬೇಕು". ರಾಜು ಕೊಡಿಸಿದ. "ರಾಜು ನಾನು ಮನೆಗೆ ಬಸ್‌ನಲ್ಲಿ ಬರುವುದಿಲ್ಲ ಕಾರಿನಲ್ಲಿ ಕರೆದು ಕೊಂಡು ಹೋಗು" ರಾಜು ಬಾಡಿಗೆ ಕಾರಿನಲ್ಲೇ ಕರೆದುಕೊಂಡು ಹೋದ. ಅಜ್ಜಿಯ ಕೊನೆಯ ದಿನದಂದು,  ಆದರೆ ರಾಜುವಿಗೆ ಅದು ತಿಳಿಯದು. ಅಜ್ಜಿ ರಾಜುವಿನ ಮಡಿಲಲ್ಲಿ ಮಲಗಿ ಹೇಳಿದಳು. "ಮಗು ರಾಜು, ನೀನು ಆದಷ್ಟು ಬೇಗ ಮನೆ ಕಟ್ಟಿಸು ಎಲ್ಲರಂತೆ ಸಮಾಜದಲ್ಲಿ ಬದುಕಬೇಕು ಅದನ್ನು ನಾನು ನೋಡಿ ಸಂತೋಷಪಡಬೇಕು" .....ಎನ್ನುವಷ್ಟರಲ್ಲಿ ಅಜ್ಜಿ (ಉಸ್.....ಉದ್ಗಾರ..... )ಏದುಸಿರು ಬಿಡುತ್ತಿದ್ದಾಳೆ. ರಾಜು ಅಜ್ಜಿಗೆ ಮತ್ತೇನಾಯಿತೋ ಎಂಬ ಭಯದಿಂದ ಡಾಕ್ಟರ್‌ಗೆ ಕಾಲ್ ಮಾಡಿ  ಕರೆದನು. ಡಾಕ್ಟರ್ ಬರುವಷ್ಟರಲ್ಲಿ ಅಜ್ಜಿ ರಾಜುವಿನ ಮಡಿಲಲ್ಲಿ ಚಿರ ನಿದ್ರೆಗೆ ಜಾರಿದಳು. ರಾಜುವಿನ ಅಮ್ಮ ಸಂತೆಗೆ ಹೋಗಿದ್ದಳು, ಮನೆಯಲ್ಲಿ ಯಾರೂ ಇರಲಿಲ್ಲ. ಮನೆಯೊಡತಿ ಇಲ್ಲದೆ ಮನೆ ನೀರವ ಮೌನ. ರಾಜು ಮೌನಿಯಾದ. ಬದುಕಿನಲ್ಲಿ ಪ್ರೇರಕಶಕ್ತಿ ಮುಂದೆ ಇಲ್ಲದಿರುವುದನ್ನು ತಿಳಿದ ರಾಜು ದಿಕ್ಕು ತೋಚದಂತಾದ. ಏನು ಮಾಡಬೇಕೆಂದು  ತಿಳಿಯದೆ.


ಅವನಮ್ಮನಿಗೆ ಹೇಳಿದ. ನಂದಿನಿಬಾಯಿಗೂ ತನ್ನವರನ್ನೆಲ್ಲಾ ಕಳೆದುಕೊಂಡಂತೆ ಭಾಸವಾಯಿತು. ಆದರೂ ಮಗನ ಮುಂದೆ ತನ್ನ ದುಃಖವನ್ನು ತೋರಿಸಿಕೊಂಡರೆ ಅವನಿಗೆ ಧೈರ್ಯ ತುಂಬುವವರು ಯಾರು? ಎಂದು ತಿಳಿದು ಅಜ್ಜಿಯ ಎಲ್ಲಾ ಉತ್ತರ ಕಾರ್ಯಗಳಿಗೆ ಸಿದ್ಧಗೊಳಿಸಿದಳು. ಅಜ್ಜಿಯ ಸಂಸ್ಕಾರ ಕಾರ್ಯಗಳನ್ನು ರಾಜು ಮುಗಿಸಿದನು.

ರಾಜು ಅಂದಿನಿಂದ ಇಂದಿಗೂ ಅಜ್ಜಿಯ ಮಾತಿನಂತೆ ನಡೆಯುತ್ತಿದ್ದಾನೆ. ರಾಜು ಇಂದು ದೊಡ್ಡ ವ್ಯಕ್ತಿಯಾಗಿದ್ದಾನೆ.ಅಜ್ಜಿಯ ಹೆಸರಲ್ಲಿ ದಾನ ಧರ್ಮ ಮಾಡುತ್ತಿದ್ದಾನೆ. ಓದುವ ಮಕ್ಕಳಿಗೆ ರಾಜು ಅಜ್ಜಿಯ ಜ್ಞಾಪಕಾರ್ಥವಾಗಿ ಬಡ ಮಕ್ಕಳ ಶಾಲಾ–ಕಾಲೇಜು ಶಿಕ್ಷಣಕ್ಕೆ ನೆರವಾಗುತ್ತಿದ್ದಾನೆ. ಅಜ್ಜಿ ಕೊನೆಯುಸಿರೆಳೆದ ತಿಂಗಳು (ಅಕ್ಟೋಬರ್) ಅನಾಥಾಲಯಗಳಿಗೆ ಹೋಗಿ ಅನಾಥ ಮಕ್ಕಳಿಗೆ ಬಟ್ಟೆ, ಆಹಾರ, ಪುಸ್ತಕ ಹೀಗೆ ರಾಜು ನೆರವಾಗುತ್ತಿರುತ್ತಾನೆ. ಅವನ ವೇತನದ ಶೇ.೧೦ ಅಜ್ಜಿ ಹೇಳಿದ "ಸೇವಾ ಪಾಠ"ಕ್ಕೆ ಖರ್ಚು ಮಾಡುತ್ತಿದ್ದಾನೆ. ಅವನು ಹೋದೆಡೆಗಳಲ್ಲಿ ಹೀಗೆ ಬಡ ಮಕ್ಕಳ ಕಲ್ಯಾಣಕ್ಕೆ, ದಾನ ಧರ್ಮಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಾನೆ. ಅನಾಥ ಮಕ್ಕಳಿಗೆ ಮತ್ತು ಮೇಷ್ಟ್ರುಗಳಿಗೆ ಮಾದರಿಯಾಗಿದ್ದಾನೆ. ರಾಜು

ಹೇಳುವಂತೆ ಅವರಜ್ಜಿ ಗೌರಿ “ನನ್ನ ಬದುಕು ಕಟ್ಟಿಕೊಟ್ಟ ದೇವತೆ”. ಎನ್ನುತ್ತಾನೆ. “ನಾನು ಕಣ್ಣನ್ನು ಬಿಟ್ಟ ಕ್ಷಣದಿಂದ, ಆಕೆ ತಾನು ಕಣ್ಣು ಮುಚ್ಚುವವರೆಗೂ”. ನನಗಾಗಿ ಮಿಡಿದ ಹೃದಯವದು. ನನ್ನ ಚೇತೋಹಾರಿ ಬದುಕಿನಲ್ಲಿ ಅವಳ ಸಾರ್ಥಕ ಹೆಜ್ಜೆ.

## 5. Smile- Evidence of Happiness

- ***Sachinkumar Salakki***



Happiness is the gift of life that we get every moment and at every step we land in our lives. People often enjoy in their own way to feel happiness, a girl might feel happy when she get a gift from her boyfriend. The happiness is a feel that sprout out purely from the heart and result is a small smile on face with jewel like expression, charm, and delight on the face.

Incidents always make us feel better and happier, imagine a situation of riding a two wheeler without a helmet in a traffic, and a beautiful girl with fair skin color, pink lips, long black hair, sparkling eyes, tall, beautiful are facing difficulty to cross road due to the dense number of vehicles passing around her. On the same road if we encounter the girl and notice her facing difficulty and we stop our bike to allow the girl to cross the road, which make her feel happy. While crossing the road if she shout loudly; saying thanks that make the rider feel happy for stopping, which earned him a thanks from a beautiful girl and a smile of happiness on his face.

When our age crosses 24-25 it’s very casual that our parents talk of our wedding, friends and relatives tease us taking the reason of marriage and the name of the beautiful angel/ warrior coming in our lives that make them feel happy. In such situation if our parents; especially, if the mother takes a name of the girl/boy who is already in our heart make us feel happy and bring a cute grin on face.

An absent minded fellow carrying a bag with loads of cash in it, stop on a cold-drinks shop and forget the bag there, which, he realizes it in a short span of time. When he rushes into the same shop with tensed feeling filled with anxiety and splash of sweat on the face filled with tears in eyes. When the shop owner is asked about the bag, he answers the availability of the bag, giving you a coke to relax and rejoice, the anxiety in the mind run faster than Usain bold bringing a cool happiness and a smile on facing with a gentle word of “thanks” shuttling out from the mouth.

While walking in the forest with your loved once to get relaxed from the stress of the work and suddenly a raindrop falling on your lip followed by the sprinkle of breeze. When the loved once realize it and wipe the drop on your lip with love to give a feel of warmth and comfort with a kiss on the cheek makes us feel happier and a smile on the face everts on the automatics.

When a cute little angel (small baby girl) of age five rushes towards you and meet with a small collision, which make her feel bad to tell you a sorry, and runs away producing the sound from her silver anklets can bring happiness and a twinkle in the face filled with a chuckle of joy.

When win comes to us after ample of struggle and burden. When a girl proposes, when the unexpected gift pouched, when help came from an unknown hand. When we are rewarded for the good work done and many more can just give us happiness and a cute smile on the face is the evidence.

## 6. ಅಮ್ಮಾ

*– ಶ್ರೀಹರಿ ಕುಲಕರ್ಣಿ*



ಅಮ್ಮಾ ನೀನು ಮಮತೆಯ ಮಡಿಲು ।
ಸಹನೆಯ ರೂಪ, ಕರುಣೆಯ ತೊಟ್ಟಿಲು ।
ನಿನ್ನಾಸರೆ, ನಿನ್ನೊಲುಮೆ ನಮಗಿರಲು ।
ಪರಲೋಕದೋಳು ತೆರೆದಂತೆ ಸ್ವರ್ಗದ ಬಾಗಿಲು ॥ ೧ ॥
ಎಂದೆಂದಿಗೂ ನೀನು ಶ್ರಮಜೀವಿ ।
ನಿನ್ನಿಂದ ಪಾವನ ಈ ಪುಣ್ಯಭೂಮಿ ।
ಪರೋಪಕಾರಿ ಮಕ್ಕಳ ಧ್ವನಿ ।
ಸದಾಚಾರಿ ಸದ್ಗುಣಗಳ ಗಣಿ ॥ ೨ ॥
ನಿನ್ನ ರಕ್ಷಣೆಯಿಂದಲೇ ಮನುಜನಾಗಿ ಬೆಳೆದು ।
ನಿನ್ನ ಕರುಣೆಯಿಂದಲೇ ಜಗದಲ್ಲಿ ನನ್ನ ಗುರುತು ।
ನಿನ್ನದೇ ಸುಭಿಕ್ಷೆ ಈ ಜೀವನ ನನ್ನ ಸರ್ವಸ್ವವೇ ನಿನ್ನದು ।
ಹೆತ್ತು ಹೊತ್ತು ಸಾಕಿರುವೆ ನನಗೆ ಸುಖ ನೆಮ್ಮದಿಯನ್ನು ತೊರೆದು ॥ ೩ ॥
ನನ್ನ ಸಂರಕ್ಷಣೆಗಾಗಿ ಹಗಲಿರುಳು ದುಡಿದು ।
ಕಠಿಣ ಪರಿಸ್ಥಿತಿಗಳಲ್ಲಿಯೂ ನನ್ನ ಪಾಲನೆಯಲ್ಲಿ ಬೆರೆತು ।
ತುಚ್ಚವಾಗಿದ್ದ ನನ್ನನ್ನು ಉಚ್ಚ ಪದವಿಗೇರಿಸಿದೆ ನಿಸ್ವಾರ್ಥಿಯಾಗಿ ।
ಮಕ್ಕಳ ಬಾಳು ಹಸನಾಗಲು ದು:ಖ ಗಳನ್ನು ನುಂಗುವ ಮಹಾನ್ ತಾಯಿ ॥ ೪ ॥

***

## 7. ಹಳೆಯ ನೆನಪುಗಳು

**– ಶೌರೀಶ**

ನೆನಪುಗಳು ನಮ್ಮನ್ನು ಜೀವಂತವಾಗಿಡಲು ನೆರವಾಗುತ್ತವೆ. ಇದು ಸುಂದರ. ಮನಸ್ಸಿಗೆ ಖುಷಿ ನೀಡುವಂತಹದ್ದು. ಹಾಗೆಯೇ ಮುಂದಿನ ಜೀವನಕ್ಕೆ ಅನುಭವವೇದ್ಯವಾಗಿ ತಿಳುವಳಿಕೆಯನ್ನು ಕೊಡುವಂತಹದ್ದು. ಮನುಷ್ಯ ಜೀವಿ ತನ್ನ ಹಳೆಯ ಅನುಭವ, ಕಲಿಕೆಗಳನ್ನು ನೆನಪಾಗಿಸಿ, ಮತ್ತೆ ಮತ್ತೆ ಮೆಲುಕು ಹಾಕಲು ಸಮರ್ಥನಿದ್ದಾನೆ. ಆ ನೆನಪುಗಳು ಒಳ್ಳೆಯ ಚಿಂತನೆ, ಅನುಭವಿಸಿದ ಸುಖ–ದುಖ, ಕಷ್ಟ ಕಾರ್ಪಣ್ಯ, ಸಂತೋಷ, ಅಭಿವ್ಯಕ್ತಿ, ಈರ್ಷೆ ಇತ್ಯಾದಿಗಳನ್ನು ಆವರಿಸಿಕೊಂಡ ಸ್ಥಿತಿ. ಇಂತಹ ನೆನಪುಗಳು ಒಂದು ಕಾಲಘಟ್ಟ ಮತ್ತು ಸನ್ನಿವೇಶಕ್ಕೆ ಒಳಗೊಂಡಿದ್ದು, ಆ ಮುಖೇನ ಪುನರ್ ನೆನಪಿಸಿಕೊಳ್ಳುವ ಪ್ರಕ್ರಿಯೆಗೆ ನಾಂದಿ ಹಾಡುತ್ತವೆ.

*ಇಂತಹ ನೆನೆಪುಗಳ ಗುಚ್ಛದಿಂದ ಒಂದನ್ನು ನೆನಪಿಸಿಕೊಂಡಾಗ.......*

ನಾನು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಪ್ರೌಢ ಶಿಕ್ಷಣಕ್ಕೆ ಕಾಲಿಡುವ ಸಂದರ್ಭದಲ್ಲಿ ಪರಿಚಿತವಾದ ಸನ್ನಿವೇಶ, ಮನಪಟಲದಲ್ಲಿ ಉಳಿದುಕೊಂಡಿದೆ. ಆಗ ತಾನೇ ೭ನೇ ತರಗತಿ ಪೂರ್ತಿಗೊಳಿಸಿದ ಸಂತೋಷದಲ್ಲಿ, ಹಲವು ಕಾತರ, ಆತಂಕಗಳೊಂದಿಗೆ ೮ ನೇ ತರಗತಿಗೆ ಪ್ರವೇಶ ಪಡೆಯಲು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಪ್ರೌಢ ಶಾಲೆಗೆ ತೆರಳಿದ್ದೆವು. ನಾನು ಮತ್ತು ನನ್ನ ಅಣ್ಣ ಹೊಸ ಬಟ್ಟೆಗಳನ್ನು ತೊಟ್ಟು, ಲಗುಬಗೆಯಿಂದ ಕ್ಷಣಾರ್ಧದಲ್ಲಿ ಹೊರಡಲು ತಯಾರಾಗಿದ್ದೆವು. ನಮ್ಮ ಪ್ರದೇಶದಲ್ಲಿ ಜೀಪುಗಳು ಸರ್ವೇಸಾಮಾನ್ಯ. ಇದು ಅಂತಸ್ತು, ಗೌರವದ ಪ್ರತೀಕವೂ ಆಗಿದ್ದರಿಂದ, ನಮ್ಮ ಪ್ರಯಾಣಕ್ಕಾಗಿ ನಮ್ಮ ತಂದೆ ಜೀಪನ್ನು ಗೊತ್ತುಮಾಡಿದ್ದರು.

ನಮ್ಮ ಮನೆಯಿಂದ ಈ ಪ್ರೌಢಶಾಲೆಗೆ ಸುಮಾರು ೭–೮ ಕಿ.ಮೀ.ಗಳಿರಬಹುದು. ಅಷ್ಟು ದೂರವನ್ನು ಕ್ರಮಿಸುವುದು ಬಹಳ ಕಷ್ಟ. ಕೈಯಲ್ಲೊಂದು ಪುಸ್ತಕವನ್ನು ಹಿಡಿದು, ಅಪ್ಪನೊಡನೆ ಜೀಪಿನಲ್ಲಿ ಹತ್ತಿ ಕುಳಿತುಕೊಂಡೆವು. ಅಮ್ಮನಿಗೆ, ಮಕ್ಕಳನ್ನು ಶಾಲೆಗೆ ಸೇರಿಸಿ ಬರುತ್ತೇನೆ ಎಂದು ಹೇಳಿದ ಅಪ್ಪ,

ಚಾಲಕನಿಗೆ ಹೊರಡಲು ಅನುಮತಿಯಿತ್ತರು. ತನ್ನ ಮಕ್ಕಳನ್ನು ಇಷ್ಟೊಂದು ಸಂಭ್ರಮದಲ್ಲಿ ಶಾಲೆಗೆ ದಾಖಲಾತಿ ಮಾಡಲು ಹೊರಟ ಅಪ್ಪನ ಶಿಕ್ಷಣದ ಬಗೆಗಿನ ಕಾಳಜಿ ಪ್ರಶಂಸನೀಯ.

ಸಾಗುವ ದಾರಿಯಲ್ಲಿ, ತನ್ನ ಮಕ್ಕಳನ್ನು ಶಾಲೆಗೆ ಸೇರಿಸಲು ಹೊರಟ ಪರಿಯನ್ನು ಅಪ್ಪ ಆತ್ಮೀಯರಿಗೆ ವಿವರಿಸುತ್ತಿದ್ದರು. ಅಂತೂ ನಮ್ಮ ರಥ ಆಲೆಟ್ಟಿ ತಲುಪಿದಾಗ, ನಾವು ಅನುಭವಿಸಿದ ಸಂತೋಷಕ್ಕೆ ಪಾರವೇ ಇರಲಿಲ್ಲ. ನೇರವಾಗಿ ಶಾಲೆಗೆ ತೆರಳುವ ಬದಲಾಗಿ ಪಕ್ಕದಲ್ಲಿಯೇ ಇದ್ದ ಶ್ರೀ ಸದಾಶಿವ ದೇವಾಲಯಕ್ಕೆ ತೆರಳಿ, ಹಣ್ಣು ಕಾಯಿ ಪ್ರಸಾದವನ್ನು ಪಡೆದು ಬಂದೆವು. ಎಲ್ಲವೂ ಅಪ್ಪನ ಆಣತಿಯಂತೆ ನಡೆಯುತ್ತಿದ್ದವು. ಆ ಆಣತಿಯಲ್ಲಿಯೂ ಸಂಭ್ರಮವಿತ್ತು ಎಂಬುದು ಮಾತ್ರವೇ ನಮಗೆ ಗಮನಾರ್ಹವಾಗಿತ್ತು.

ಹಲವರಲ್ಲಿ ವಿಚಾರಿಸಿದ ನಂತರ ಶಾಲಾ ಕಟ್ಟಡವನ್ನು ಗುರುತಿಸಲು ನಮಗೆ ಸಾಧ್ಯವಾಯಿತು. ಶಾಲಾ ಕಟ್ಟಡವನ್ನು ಮೂರ್ನಾಲ್ಕು ಬಾರಿ ಸುತ್ತಿದಾಗಲೇ ನಮಗೆ ತಿಳಿದದ್ದು, ಇದು ಸರಕಾರಿ ಶಾಲೆ; ಈ ಶಾಲೆಯಲ್ಲಿ ಕೇವಲ ೨ ಅಧ್ಯಾಪಕರು ಮಾತ್ರವೇ ಇರುವುದು ಎಂಬಿತ್ಯಾದಿ ಅಂಶಗಳು. ಇದಕ್ಕೂ ಪೂರ್ವದಲ್ಲಿ, ಶಾಲಾ ಕಟ್ಟಡದ ಹಿಂಭಾಗದ ಸಣ್ಣ ಜಾಗದಲ್ಲಿ, ಶಾಲೆಗೆ ಪ್ರವೇಶ ದ್ವಾರ ಎಂಬುದು ನಮ್ಮ ಅತ್ಯುತ್ಸಾಹವನ್ನೆಲ್ಲಾ ಉಡುಗಿಸಿತು. ಅಪ್ಪನೊಡನೆ ನಾವೂ ಪೆಚ್ಚುಮೋರೆಯನ್ನು ಹಾಕಿ, ಶಿಕ್ಷಕರೊಡನೆ ಗಂಟಲಿನ ಮೇಲಿನ ಮಾತಿನೊಡನೆ ಸಂವಹನಗೈದು, ವಿಮುಖವಾಗಿ ಮನೆಯತ್ತ ತೆರಳಿದೆವು.

ಈ ಘಟನೆಯ ನಂತರ ಅಪ್ಪ ನಮ್ಮನ್ನು ಶಾಲೆಗೆ ದಾಖಲಿಸುವ ಸಾಹಸಕ್ಕೆ ಎಂದೂ ಕೈಹಾಕಿಲ್ಲ. ಕೊಡಗಿನ ಪೆರಾಜೆಯ ಜ್ಯೋತಿ ಪ್ರೌಢ ಶಾಲೆಗೆ ೮ ನೇ ತರಗತಿಗೆ ನಮ್ಮ ದೊಡ್ಡಪ್ಪ ನಮ್ಮನ್ನು ದಾಖಲಿಸಿದರು. ಮರುಕಳಿಸಿದ ನೆನಪುಗಳಲ್ಲಿ, ಅಗೊಮ್ಮೆ ಈಗೊಮ್ಮೆ, ನದಿಯ ಸುಳಿಯಲ್ಲಿ ತೇಲಿ ಬರುವ ಅಲೆಗಳ ತೆರದಿ, ನೆನಪುಗಳ ಮೂಟೆಯಿಂದ ಹೊರಬಂದ ಈ ಅನುಭವ, ಜೀವನದ ಅನುಭವವಾಗಿ ಐಕ್ಯಗೊಂಡಿರುವುದು ಮಾತ್ರ ಸಂತಸ ತಂದಿದೆ.

***

## 8. Navaratri – A Celebration of Woman power

- ***Rajesh S Mahantmath***



Women have had their own ways of enjoying and celebrating in our society. Festivals are the occasions when women come together to enjoy and celebrate. Navaratri is one such festival. In a country where women have been equated with goddesses since ancient times, where women enjoyed very less or no freedom throughout history and even now face a lot of problems in society, Navaratri gives women an occasion to sing, dance and celebrate.

Navaratri is an occasion when people worship the Mother Goddess in her various forms. When I recall the various names of the Goddess, I feel that each is a befitting tribute to the multifaceted personality of women and their qualities. She is worshipped as Shakti. Every women is as powerful as Shakti. Like Shakti a woman can be benign and aggressive, she can be creative and destructive, she can be loving, and she can be ferocious. I feel all these qualities are innate in all women. In fact, women are more powerful than their male counterparts. At least, I, am quite convinced about this when I look at my mother, when I recall my high

school headmistress, when I see so many multitasking women in society, when I see so many women achievers and more so when I am with highly talented and illustrious women at the workplace.

I feel that there are ample ‘masculine’ traits in woman and ‘feminine’ traits in men. That is why perhaps the sobriquet ‘Ardhanaarishwari’ fits a woman so convincingly. These days women justify this by contributing on par with men in almost every field of human endeavor. Women are generally more committed towards their work, complete their tasks on or before time and seem to be excellent at time management (masters of time like Kali?). They have been and continue to be the quintessential food growers, food processors and food providers for all (Annapoorna?). There can be countless such metaphors and one cannot possibly describe any woman correctly and completely by just using any one of them.

I have stayed and worked in Mumbai for many years and since the past six years I have been in North Karnataka. I witnessed different forms of Navaratri, celebrated by Maharashtrians, Gujaratis, Bengalis and Kannadigas. In each case I saw people worshipping the Mother Goddess in different ways, practicing austerities, enjoying music, singing and dancing. I have seen men and women singing and dancing the Garba with equal fervor. I have seen women dressing up in different colored sarees on each day of Navaratri. I have seen people chanting the Devi Purana and extolling the miracles of the Goddess. And on these days it seemed that everywhere there were countless manifestations of the Goddess everywhere. I feel that Navaratri is a celebration of woman power.

***

## 9. ಹೀಗೇಕೆ?

\- *ಅರವಿಂದ ರಾಠೋಡ*

ಕಣ್ಣಿಗೆ ಕಾಣುವ ದೇವರಿದ್ದರು ಮತ್ತೇಕೆ ನಿನ್ನ ಪೂಜಿಸುವರು,
ಸಕಲ ಜೀವಿಗಳಿಗೆ ಈ ಭುವಿಯನ್ನು ಸಮವಾಗಿ ಹಂಚಿರುವೆ,
ಈ ಧರೆಗೇಕೆ ಒಬ್ಬನೇ ಚಂದ್ರಮನ ಇಟ್ಟಿರುವೆ?
ಮನಸಿನೊಳಗೆ ಮುಕ್ತ ನಗುವನಿಟ್ಟಿರುವೆ,
ಕೆಂದುಟಿಯ ಮೇಲೇಕೆ ಕಿರುನಗೆಯ ಇಟ್ಟಿರುವೆ?
ಹಳೆಯದಾದರೂ ಮರೆಯದ ಸ್ನೇಹವ ಕೊಟ್ಟಿರುವೆ,
ಕಾಣದ ಪ್ರೀತಿಯ ಒಬ್ಬರ ಮೇಲೇಕೆ ಇಟ್ಟಿರುವೆ?
ಕಣ್ತುಂಬುವ ಸೌಂದರ್ಯವ ನೀಡಿರುವೆ,
ನೋಡುವ ಕಣ್ಣ ಮೇಲೆ ಮನಸಿನ ಪ್ರಭಾವವೇಕೆ ಬೀರುವೆ?
ಗಂಡು ಹೆಣ್ಣೆಂಬ ಭೇದವ ಮಾಡಿರುವೆ,
ಭೇದವಿಲ್ಲದ ಪ್ರೀತಿಯನ್ನೇಕೆ ಅವರಲಿ ಹುಟ್ಟಿಸಿರುವೆ?
ಕೊನೆಗಾಣದ ಪ್ರೀತಿ ಹುಟ್ಟುವಂತೆ ಮಾಡಿರುವೆ,
ಆ ಪ್ರೀತಿಗಾಗಿ ಬದುಕುವ ಛಲವೇಕೆ ನೀಡಿರುವೆ?
ಮನತಣಿಸುವ ಕನಸುಗಳ ಕಾಣುವ ಶಕ್ತಿನೀಡಿರುವೆ
ಕನಸು ನನಸಾಗುವ ಮುನ್ನವೇಕೆ ಪ್ರಾಣ ತೆಗೆದಿರುವೆ?
ಆಸೆಗಳ ನೀಡಿದೇ ಈಡೇರಿಸಿಕೊಳ್ಳುವ ಮಾರ್ಗವ ಅಡಗಿಸಿರುವೆ?
ಹೀಗೇಕೆ ದೇವ ಇದು ಮಾಯೆಯೋ? ಮೋಹವೋ?
ಭಯವೋ? ಭಕ್ತಿಯೋ? ಯಾವುದಯ್ಯಾ ಯಾವುದಯ್ಯಾ?



***

## **10.** Bathukamma the festival of Flowers: Wishing all the readers a happy festive season

**- Ramadevi**



On the occasion of the 50th anniversary celebrations of BAYALU e-newsletter, taking this opportunity to give some information on the unique festival of flowers that is celebrated in the youngest state of India, the Telangana State.

**Bathukamma** means live long, come to life. This festival heralds the beauty of nature, collective spirit of all different people, the determined spirit of women folks and also the scientific approach of the agrarian people towards preserving the resources of nature in a celebrative way.

Our country with cultural diversity has many festivals celebrated all across different regions. Bathukamma is one festival that is celebrated in Telangana state which is a colorful and vibrant festival celebrated by women, using the flowers that are grown exclusively in that particular region heralding the beauty of nature in vibrant colors of multitudinous flowers. This festival is a symbol of cultural identity and is celebrated for 9 continuous days, the navaratri days. Bathukamma comes during the latter half of monsoon, before the onset of winter. The monsoon rains usually brings plenty of water into the fresh water ponds of Telangana and it is also the time when wild flowers bloom in various vibrant colors all across the uncultivated and barren plains of the region. The most abundant of these are the 'gunuka poolu (Celosia)' and 'tangedu poolu (Tanner's Cassia)'. There are other flowers too like the banti (marigold), chemanti (chrysanthemum), gummadi poolu (Cucurbita), gaddi poolu (Tridax), vama poolu (Ajwain), etc. For one complete week, they make small 'Bathukammas', play around them singing and reciting the "Uyyallos" song every evening and immerse them in a nearby water pond. The men folk of the house go into the wild plains and gather the flowers like gunuka and tangedu. They bring home bagful of these flowers and the entire household sits down and makes the big 'Bathukamma'. The flowers are carefully arranged row after row in a brass plate on a wooden plank (called taambalam) in circular rows and in alternate colors. As evening approaches all the women folk of the neighborhood in their colorful attire with the colorful Bathukamma place them in the center of a common courtyard and form a circle and start playing around them. They start singing songs by circling it repeatedly, building a beautiful human circle of unity, love, sisterhood.



After playing in circles around the "Bathukammalu", before the onset of dusk, the women folk carry them on their heads and move as a procession towards a bigger water body near the village or town. The procession is extremely colorful with the decorations of women and the "Bathukammalu". Songs of folklore are sung in chorus with repetition of "Uyyallo" at the end of every line throughout the procession and the streets resonate with them. Finally, when they reach the water pond the "Bathukammalu" are slowly immersed into water after some more playing and singing.

The significance of Bathukamma is it celebrates the inherent relationship between earth, water and the human beings. During the entire preceding week, women make 'boddemma' made with earthly mud and turmeric along with Bathukamma and immerse it in the pond. The flowers used in Bathukamma have a great quality of purifying water. When all these flowers when immersed in abundance into the pond have the effect of cleansing the water and making the environment much better. This helps the ponds to rejuvenate, and helps them to retain more water. In times where the fresh water ponds are gradually diminishing and dwindling away it is indeed a pride of Telangana that its womenfolk with mostly agrarian background inherently know how to make them better by celebrating the beauty of nature. It is something we indeed have to feel proud of. Hence, Bathukamma is the icon of cultural identity of Telangana.



Personally, was amazed to be part of the largest participatory festival of the Agrarian women folk and in this year the Bathukamma festival has made a place for itself in the Guinness records with more than 9800 women folk gathering at one single place for a nonstop 12 minute singing and playing the Bathukamma in chorus.


Source of Information: Wikipedia, and self-understanding by participation in the festivities.

Photo courtesy: Al the 4 photographs are self-clicked, the 1st and 2nd photographs clicked during the state level festivities and the 3rd and 4th photographs clicked from personal home front.

***

## 11. ಎಚ್ಚರಿಸಿತು ಲೇಖನಿ

- ಶ್ರೀಹರಿ ಕುಲಕರ್ಣಿ



ಬರೆಯುತ್ತಿದ್ದೆ ನಾನೊಂದು ಕವನ ।
ಗಾಢ ಆಲೋಚನೆಯಲ್ಲಿತ್ತು ನನ್ನ ಮನ ।
ಬರೆದಂತೆ ನಡೆಸುತ್ತಿದೆಯೋ ನಿನ್ನ ಜೀವನ ।
ನನ್ನ ಲೇಖನಿಯು ನನಗೆಚ್ಚರಿಸಿತು ಒಂದು ದಿನ ॥ ೧ ॥

ಆದರ್ಶ ನಡೆನುಡಿಗಳ ನಿನ್ನ ಲೇಖನ ।
ಮಹಾ ಪುರುಷರ ತತ್ವಗಳನ್ನು ಅನುದಿನ ।
ನುಡಿದಂತೆ ನಡೆಸುತ್ತಿದೆಯೋ ಜೀವನ ।
ನನ್ನ ಲೇಖನಿಯು ನನಗೆಚ್ಚರಿಸಿತು ಒಂದು ದಿನ ॥ ೨ ॥


ದೇವರಾಧನೆಗಾಗಿಯೇ ಆಗಿರುವುದು ನಿನ್ನ ಜೀವನ ।
ಶಾಂತಚಿತ್ತನಾಗಿ ಮಾಡಿಕೊ ಆತ್ಮಾವಲೋಕನ ।
ಸೃಷ್ಟಿಕರ್ತನಿಗೆ ನಮಿಸು ಪ್ರತಿದಿನ ।
ನನ್ನ ಲೇಖನಿಯು ನನಗೆಚ್ಚರಿಸಿತು ಒಂದು ದಿನ ॥ ೩ ॥

ಮಡಿವಂತಿಕೆಯಲ್ಲಿ ಮಾಡದಿರು ಕಾಲಹರಣ ।
ಪರಿಶುದ್ಧಗೊಳಿಸು ಮೊದಲು ಅಂತ:ಕರಣ ।
ಪರಲೋಕದಾ ಮೋಕ್ಷಕ್ಕೆ ಗಳಿಸಿಕೋ ಆಭರಣ ।
ನನ್ನ ಲೇಖನಿಯು ನನಗೆಚ್ಚರಿಸಿತು ಒಂದು ದಿನ ॥ ೩ ॥

## 12. ಹುಡುಕಾಟದ ಹಾದಿಯಲಿ ನಮ್ಮ ಪಯಣ

– ದಿಲೀಪಕುಮಾರ ರಾಠೋಡ

ಮನುಷ್ಯ ಹುಟ್ಟಿದ ಮೇಲೆ ತನಗೆ ಬುದ್ಧಿ ತಿಳಿಯುತ್ತಿದ್ದಂತೆ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಬದುಕನ್ನು ಕಟ್ಟಿಕೊಂಡು ಉತ್ತಮ ಜೀವನವನ್ನು ನಡೆಸಬೇಕೆಂದು ಆಲೋಚಿಸಲು ಪ್ರಾರಂಭಿಸುತ್ತಾನೆ. ಆಗ ಶುರುವಾಯಿತು ನೋಡಿ ಅವನ ಹುಡುಕಾಟ.



ಪ್ರತಿ ಹೆಜ್ಜೆ ಹೆಜ್ಜೆಗೂ ಭೂಮಿಯ ಮೇಲೆ ಇರುವ ಜೀವಿಗಳು ಜೀವಿಸಲು ಹುಡುಕಾಟ ಮಾಡುತ್ತಲೇ ಇರುತ್ತವೆ. ಹುಡುಕಾಟದಲ್ಲಿ ವಿವಿಧ ರೀತಿಗಳಿವೆ. ಆಹಾರಕ್ಕಾಗಿ ಹುಡುಕಾಟ, ವಾಸಿಸಲಿಕ್ಕಾಗಿ ಹುಡುಕಾಟ, ಹಣಕ್ಕಾಗಿ ಹುಡುಕಾಟ, ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹುಡುಕಾಟ, ಇತ್ಯಾದಿ ಹೀಗೆ ಹೇಳುತ್ತಾ ಹೊರಟರೆ ದೊಡ್ಡ ಪಟ್ಟಿಯೇ ತಯಾರಾಗುತ್ತದೆ ಅಲ್ಲಾ....! ಈ ಹುಡುಕಾಟದಲ್ಲಿ ಸ್ವಲ್ಪ ನಿಸ್ವಾರ್ಥತೆಯ ಬಗ್ಗೆ ಇದರಲ್ಲಿ ಏನಾದರೂ ಕಾಣುತ್ತದೋ ನೋಡೋಣ. ನಾವು ಏನಾಗಿರುವೆವೋ ಅದಕ್ಕೆ ನಾವೇ ಹೊಣೆ. ನಾವು ಏನಾಗಬೇಕೆಂದು ನಮ್ಮ ಇಚ್ಛೆ ಇರುವುದೋ ಹಾಗಾಗಲು ಶಕ್ತಿಯು ನಮ್ಮಲ್ಲಿರುವುದು.

ಇಂದು ನಾವು ನೋಡಿದ ಹಾಗೆ ಬದುಕು ತುಂಬಾ ಸ್ವಾರ್ಥದ ಹುಡುಕಾಟದಿಂದ ಕೂಡಿದೆ. ಮನುಷ್ಯ ಈ ಹುಡುಕಾಟವನ್ನು ಸ್ವಾರ್ಥವನ್ನಾಗಿಸಿಕೊಂಡಿದ್ದಾನೆ ಎಲ್ಲವೂ ನನಗೆ ಬೇಕು, ಎಲ್ಲವೂ ನನ್ನದೆ ಎಂಬ ಮನುಷ್ಯನ ಆಸೆಗೆ ಮಿತಿಯೇ ಇಲ್ಲದಂತಾಗಿದೆ. ಸ್ವಾರ್ಥದಿಂದ ಕೂಡಿದ ಶಕ್ತಿಯು ವ್ಯಯವಾಗುತ್ತದೆಯೇ ಹೊರತು ಅದರ ಪ್ರತಿಫಲದ ರೂಪವಾಗಿ ಹಿಂದೆ ಬರುವುದಿಲ್ಲ. ಆದರೆ ಶಕ್ತಿಯು ಹೊರಗೆ ಹೋಗದಂತೆ

ತಡೆದರೆ ಅದರಿಂದ ಶಕ್ತಿ ವೃದ್ಧಿಯಾಗುತ್ತದೆ. ಹಾಗೆಯೇ ನಮ್ಮ ಮಹಾನ್ ಪುರುಷರಾದ ಬುದ್ಧ, ಬಸವ, ಏಸು ಮಹಾವೀರರಂತಹ ವ್ಯಕ್ತಿಗಳು ತಮ್ಮ ಜೀವನದಲ್ಲಿ ಆಸೆಗಳನ್ನು ತ್ಯಾಗ ಮಾಡಿ ಒಂದು ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಹುಡುಕಾಟ ಶುರುಮಾಡಿದ್ದರಲ್ಲವೇ? ಅದನ್ನು ನಾವು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡಿದ್ದೇವೆ ಎಂದು ನಮ್ಮನ್ನು ನಾವು ಅವಲೋಕನ ಮಾಡಿಕೊಳ್ಳುವುದು ಆವಶ್ಯಕ.

ಉತ್ತಮ ಕಾರ್ಯಮಾಡಿ ಕಾಯುವವನಾದರೆ ದಡ್ಡನು ಕೂಡಾ ಪ್ರಪಂಚವನ್ನು ಆಳಬಹುದು. ಅಂತಹ ಯೋಚನೆ, ಚಿಂತನೆ, ವಿವೇಚನೆ, ಹುಡಕಾಟ ನಮ್ಮಲ್ಲಿ ಇದ್ದರೆ ಮಾತ್ರ ಅದು ಸಾಧ್ಯಗಬಹುದು. ನಮ್ಮ ಹಿತವನ್ನೇ ಕುರಿತು ಆಲೋಚಿಸುವ ಸ್ವಾರ್ಥವು ಮಹಾ ಪಾಪಿ. ಎಲ್ಲರಿಗಿಂತ ಮೊದಲು ನಾನು ಊಟ ಮಾಡುತ್ತೇನೆ ! ಇತರರಿಗಿಂತ ಹೆಚ್ಚು ಸಂಪತ್ತನ್ನು ಇಟ್ಟುಕೊಳ್ಳುತ್ತೇನೆ ! ನಾನೇ ಎಲ್ಲವನ್ನು ತೆಗೆದುಕೊಳ್ಳುತ್ತೇನೆ ! ಇತರರಿಗಿಂತ ನಾನೇ ಮುಂಚೆ ಹೋಗುತ್ತೇನೆ ಎಂದು ಯೋಚಿಸುವವನು ತನ್ನ ಸ್ವಾರ್ಥದ ಹುಡುಕಾಟದಲ್ಲಿ ತೊಡಗಿಸಿಕೊಂಡಿದ್ದಾನೆಂದು ತಿಳಿಯುತ್ತದೆ.

ಜೀವನದಲ್ಲಿ ಜಯಶೀಲನಾದ ಪ್ರತಿಯೊಬ್ಬ ವ್ಯಕ್ತಿಯ ಹಿಂದೆಯೂ ಅದ್ಭುತವಾದ ಚಾರಿತ್ರ್ಯ ಮತ್ತು ಸತ್ಯದ ಹುಡುಕಾಟ ಇದೆ. ಅವುಗಳೆಲ್ಲವೂ ಅವನ ಜಯಕ್ಕೆ ಕಾರಣ. ಅವನಲ್ಲಿ ನಿಸ್ವಾರ್ಥ ಇಲ್ಲದಿರಬಹುದು. ಆದರೂ ಅವನು ಅದರ ಕಡೆಗೆ ಸಾಗುತ್ತಿರುತ್ತಾನೆ. ಅವನು ನಿಸ್ವಾರ್ಥಿಯಾಗಿದ್ದರೆ ಮಹಾನ್ 'ವ್ಯಕ್ತಿಗಳ ಸಾಲಿನಲ್ಲಿ ಸೇರುತ್ತಿದ್ದ .ಆದರೆ ನನ್ನದು ಎಂಬುದನ್ನು ಬಿಟ್ಟು ನಮ್ಮೆಲ್ಲರದು ಎಂದು ಯೋಚಿಸಿದಾಗ ಸಮಾಜದಲ್ಲಿ ಒಂದು ಬದಲಾವಣೆ ತರಲು ಸಾದ್ಯವಾದಿತು.

ಒಂದು ಕಡೆ ವಿವೇಕಾನಂದರು ಹೇಳ್ತಾರೆ – "ವಿವೇಕವೇ ಜೀವನ, ಸಂಕೋಚವೇ ಮರಣ. ಯಾರು ತನ್ನ ಸ್ವಂತ ಸುಖವನ್ನು ನೋಡೊಕೊಳ್ಳುತ್ತಾ, ಯಾರು ಸ್ವಾರ್ಥಪರರಾಗಿ, ಸೋಮಾರಿಗಳಾಗಿ ಕಾಲ ಕಳೆಯತ್ತಿರುವರೋ ಅವರಿಗೆ ನರಕದಲ್ಲಿಯೂ ಸ್ಥಳವಿಲ್ಲ"ಎನ್ನುತ್ತಾರೆ.

ಇದು ಒಂದು ತರಹದ ಹುಡುಕಾಟವಾದರೆ ಸಂಶೋಧನೆಯು ಇನ್ನೊಂದು ತರಹದ ಹುಡುಕಾಟ. ಅದು ಎಲ್ಲ ರಂಗದಲ್ಲಿಯೂ ಬರುತ್ತದೆ. ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ ಪೌರನೀತಿ ಹೀಗೆ ಅದು ಎಲ್ಲ ವಿಷಯದಲ್ಲಿಯೂ ಪ್ರಸರಿಸಿಕೊಂಡಿದೆ.

ನಾನು ಓದಿದ ಪ್ರಕಾರ ಸಂಶೋಧನೆ ಎಂಬುದು ಜ್ಞಾನದ ಸಲುವಾಗಿ ನಡೆಸುವ ಹುಡುಕಾಟ. ಅದು ಮುಕ್ತ ಮನಸ್ಸಿನಿಂದ ಯಾವುದೇ ಶಿಸ್ತುಬದ್ಧ ಶೋಧನೆ, ತನಿಖೆಯ ಮೂಲಕ ನವೀನ ಸಂಗತಿಗಳನ್ನು ಹುಟ್ಟುಹಾಕಿ ಹೊಸ ಅಥವಾ ಅಸ್ತಿತ್ವದಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು. ಒಂದು ವೈಜ್ಞಾನಿಕ ಪದ್ಧತಿಯಂತೆ ಒಂದು ಹೊಸ ಸಿದ್ಧಾಂತಗಳ ಅಭಿವೃದ್ಧಿಪಡಿಸುವಿಕೆಯೇ ಸಂಶೋಧನೆಯಾಗಿದೆ. ಮೂಲಭೂತ ಸಂಶೋಧನೆಯ (ಹುಡುಕಾಟದ) ಪ್ರಾಥಮಿಕ ಉದ್ದೇಶವೇನೆಂದರೆ ಆವಿಷ್ಕಾರಗೊಳಿಸುವಿಕೆ, ವಿವರವಾಗಿ ಅರ್ಥೈಸುವಿಕೆ, ಮತ್ತು ಅಭಿವೃದ್ಧಿಯ ಮೂಲಕ ಮನುಷ್ಯನ ಜ್ಞಾನವನ್ನು ನಿರ್ದಿಷ್ಟ ಪದ್ಧತಿ ಮತ್ತು ಶಿಸ್ತುಗಳಿಗೆ ಅಳವಡಿಸುವುದೇ ಆಗಿದೆ.


ಹೀಗೆ ನಾವು ನೋಡುವುದಾದರೆ ಹುಡುಕಾಟ ಪ್ರತಿಯೊಬ್ಬರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಅದು ಮನುಷ್ಯನಾಗಿರಬಹುದು, ಅಥವಾ ಪ್ರಾಣಿ, ಸಸ್ಯಗಳಾಗಿರಬಹುದು. ಮನುಷ್ಯ ಜೀವಿ ತನ್ನ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳುವಂತಹ ಜ್ಞಾನ ಸಂಗ್ರಹಣೆಯ ಹುಡುಕಾಟದಲ್ಲಿ ತೊಡಗಿದರೆ ಪ್ರಾಣಿ ಪಕ್ಷಿಗಳು ಅವರದ್ದೇ ಆದ ರೀತಿಯಲ್ಲಿ ಹುಡುಕಾಟದಲ್ಲಿ ತೊಡಗಿರುತ್ತವೆ ಉದಾ; ಆಹಾರ, ಗುಡಿ ಕಟ್ಟಲು ಮರ, ಕಡ್ಡಿ ಹುಲ್ಲುಗಳ ಸಂಗ್ರಹ, ಮೊಟ್ಟೆ, ಮರಿ, ಪೋಷಣೆ ಹೀಗೆ. ಯಥಾವತ್ತಾಗಿ ಸಸ್ಯಗಳು ಕೂಡಾ ಹಾಗೆಯೇ. ಹೀಗೆ ಭೂಮಿಯ ಮೇಲಿರುವ ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿಯಲ್ಲಿ ಹುಡುಕಾಟದಲ್ಲಿ ತೊಡಗಿಕೊಂಡಿರುತ್ತಾರೆ. ಅದು ಸ್ವಾರ್ಥದಲ್ಲಿರಬಹುದು ಅಥವಾ ನಿಸ್ವಾರ್ಥಲ್ಲಿರಬಹುದು. ಒಟ್ಟಾರೆಯಾಗಿ ಈ ಹುಡುಕಾಟವು ಚಿಂತನೆ ಮಾಡಲು ಅವಕಾಶ ಕಲ್ಪಿಸಿ ಮುನ್ನಡೆಯಲು ಸಹಕಾರಿಯಾಗಿ ಕೆಲಸ ಮಾಡುತ್ತದೆ.

***

## 13. ಒಂದು ಸಂಜೆ ಬಸ್ಸಿನ ಚಿತ್ರ

-ಚಿಕ್ಕವೀರೇಶ್ ಎಸ್.ವಿ.

ನಾ ಪಾದ ತೊಳೆದು
ಎಡೆ ಇಕ್ಕುವ ಜಂಗಮನ
ಬಾಯಲ್ಲಿ ಮಾಂಸದ ವಾಸನೆ.



ದುಡಿದ ದಿನದ ದುಡ್ಡನೆಲ್ಲ
ಕಂಠಪೂರ್ತಿ ಕುಡಿದು
ತೂರಾಡುತ್ತ ನಿಂತ ಬಡವ.

ಒಡಲ ತುಂಬಾ ಹಸಿವಿನ
ಬಿಸಿಹೊತ್ತ ಮುದುಕನ ಕೈಯಲ್ಲಿ
ತಣ್ಣನೆಯ ಐಸ್ಕ್ರೀಮ್

ಊರು ಬೇಗ ಬಾರದಿರಲಿ
ಎಂದು ದೇವರ ನೆನೆಯುತ್ತಾ
ಕುಳಿತ ಪ್ರೇಮಿಗಳು

ಮಗುವಿಗೆ ಹಾಲುಣಿಸುವ
ಹೆಂಗಸಿನ ಕಡೆಗೆ
ಸಭ್ಯ ಅನ್ನಿಸಿಕೊಂಡವನ
ಕಳ್ಳ ನೋಟ...

ಬಸ್ಸಿನ ಬೆಳಕು ಕಂಡೊಡನೆ
ಗೌರವ ಸೂಚಿವರಂತೆ
ಸಾಲಾಗಿ ಎದ್ದು ನಿಂತ
ಶೌಚಕ್ಕೆ ಬಂದ ಹಳ್ಳಿ ಹೆಂಗಸರು

ಹೀಗೆ ತರಹೇವಾರಿ ಚಿತ್ರಗಳು
ಮೂಡುತ್ತಲೇ ಇವೆ,
ಸಿನಿಮಾದ ರೀಲುಗಳು ಸುತ್ತುವ ಹಾಗೆ,
ಬದುಕಿನ ಬಣ್ಣಗಳು ಕಲಸಿದ ಹಾಗೆ.

***

## 14. ಅನಾಮಿಕ ಸದ್ದು

– *ಶಿವು*

ಟಿಕ್! ಟಕ್ ಟಿಕ್ ಟಕ್ ಯಾವ ಸದ್ದು ಇದು ? ನನ್ನೊಳಗಿನ ನೂರಾರು ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಿದರೂ, ಕೆದಕಿದರೂ ದೊರೆಯದ ಉತ್ತರವನ್ನು ನೆನಪು ಮಾಡಿ, ಮಾಡಿ ಅರೆಹುಚ್ಚನಾದೆನು,
ನಾನು ಹುಚ್ಚನೇ, ಅರೆಹುಚ್ಚನೇ?



ರವಿ ಅಗಸದಲ್ಲಿ ಪಯಣ ಬೆಳಸಿ ಮನೆಯಂಗಳದಿ ಬಂದು ನನ್ನ ಬೇಟೆಗೆ ಬಂದಿರುವನೇನು? ತಿಳಿಯೆನು.

ಹಕ್ಕಿ–ಪಕ್ಕಿಗಳೆಲ್ಲವು, ಖಗ;ಮೃಗಗಳು ಗೂಡು ಬಿಟ್ಟು ಗಾನಮಾಡಿ ಪಯಾಣವನ್ನು ಆರಂಭಿಸಿರುವುದು ಸತ್ಯವಲ್ಲವೆ?

ಹಾಗೆಯೇ ಕೈಲಾಗದ ವಯಸ್ಸಿನ ಅಜ್ಜನು ಅಜ್ಜಿಯು ಜೀವನ ಪಾಡಿಗೆ, ಹೊಟ್ಟೆಯ ಪಾಡಿಗೆ ಸೂರ್ಯನ ಜೊತೆ ಹೋರಾಡಲು ಇರುವೆಲ್ಲ ಶಕ್ತಿಯನ್ನು ಒಂದುಗೂಡಿಸಿ ಹೋರಾಟಕೆ ಇಳಿದಿರುವುದು,,,,,,,

ರೈತನು ತನ್ನ ಕಾಯಕದ ವೃತಿಗೆ ಬೇಕಾಗುವ ಎಲ್ಲವನ್ನು ಸಿದ್ದಪಡಿಸುತ್ತಿರುವನು.

"ಲೇ ಪಾರು ಏನ್ ಮಾಡ್ತಾ ಇದ್ದೀಯಾ ಎಂದು" ಪಕ್ಕದ ಮನೆಯ ವೃತ್ತಿ ಶ್ರೀಮಂತ ತನ್ನ ಹೆಂಡತಿಯನ್ನು ಶ್ರೀಮಂತಿಕೆಯ ಕೃತಕ ಭಾವದಲಿಯೇ ಎಚ್ಚರಿಸಿದ.......

ಎಲ್ಲವೂ ಒಂದು ರೀತಿಯಲ್ಲಿ ಅಸ್ಪಷ್ಟ ತಿಳಿದು ತಿಳಿಯದೇ ಇರುವ ಗೊಂದಲಗಳು....

ನಾನು ಅರೆಹುಚ್ಚನಾದೆನೇ ಎಂದು ತೀಮಾನಿಸಲೇ ? ಅಥವಾ ನೆನಪುಗಳ ಕಲರವದಿ ಈಜಲೇ,,, ,, ? ಅಷ್ಟಲ್ಲಿಯೆ ಸದ್ದು" ಅದೇ ಗಡಿಯಾರದ ಸದ್ದು " ನನಗೂ ಗಡಿಯಾರದ ಆ ಸದ್ದಿಗೂ ಅದೇನ್ ಏನು ಸಂಬಂಧ? ಎಲ್ಲವೂ ಅಸ್ಪಷ್ಟವಾಗಿದಯಲ್ಲ,,,

ಸಾವಿರ ಪ್ರಶ್ನೆಗಳು ಒಮ್ಮೆಲೇ ಹಾಗೆ ಬಿರುಗಾಳಿಯಾಂತೆ ಬಂದರೆ ಹೇಗೆ ಉತ್ತರಿಸಲಿ? ತೂತು ’ತಲೆಗೆ ಎಷ್ಟು ಅಂತಾ ತುಂಬಲಿ?

ಮನೆಯ ಮುಂದಿನ, ಊರಿನ ಜನರ, ಗೆಳಯ ಗೆಳತಿಯರ, ಸಮವಯಸ್ಕರ ಎಲ್ಲರನ್ನೂ ಕೇಳಿದೆ" “ಆ ಸದ್ದು! ಯಾವ ಸದ್ದು "ಯಾವುದದು” ಎಂದು,

ದಯಮಾಡಿ ಹೇಳಿ, ನನಗೂ ಅದಕೂ ಯಾವುದೋ ಜನ್ಮದ ಬಂಧವಿದೆ ಎಂಬುದಾಗಿ ಬೇಡಿದೆ.

ಆದರೆ ಎಲ್ಲರೂ ಹುಚ್ಚನೊಬ್ಬನ ಪ್ರಶ್ನೆಗೆ ಎಲ್ಲಿ ಉತ್ತರವನ್ನು ಹೇಳುವುದು ಎಂಬುದಾಗಿ ನಕ್ಕು ನಕ್ಕು ಹೀಗೆ ಹೇಳಿದರು ಓದಿ ಹುಚ್ಚನಾದನೇ? ಊರಬಿಟ್ಟು ಹುಚ್ಚನಾದನೋ? ಎಂಬುದಾಗಿ ಹೇಳಿದರು... ನಕ್ಕರು,,,,

ಛೇ! ಇವರು ಏಕೆ ಹೀಗೆ? ಸಾಮಾನ್ಯ ಮನುಷ್ಯತ್ವದ ಗುಣವನ್ನು ಹೊಂದಿಲ್ಲದ ವ್ಯಕ್ತಿಗಳಾಗಿ ವರ್ತಿಸುತ್ತಿರುವರಲ್ಲಾ,,,,

ನಾ ಏನು ಕೇಳಿದೆ? ಕೇವಲ ಸದ್ದು, ಅದು ಯಾವ ಸದ್ದು ಎಂಬುದಾಗಿ,,

ಸದ್ದು ಹಾಗೆ ಇರಲಿ ಬಿಡಿ ನಾನು ಯಾರು? ಎಂದು ಕೇಳಿದರೆ ನನ್ನ ಹಾಗೆ ಇರುವ ಒಬ್ಬ ದೊಡ್ಡ ಮೀಸೆಯ ದಪ್ಪಗಾತ್ರದ ವ್ಯಕ್ತಿ ನಗುತ್ತಾನೆ!

ಆದರೆ ಹೇ, ನೀನು ಯಾರು ಅಂತ ಕೇಳಿದರೆ ನಗುತಲೇ ಹೇಳುತ್ತಾನೆ "ನಾನು ನಿಮ್ಮ ಅಪ್ಪ" ಎಂದು.

ಯಾವಳೋ, ಮೃದು ಧ್ವನಿಯ ಹೆಂಗಸ್ಸು ದಿನವೂ ಅಳುತ್ತಾಳೆ ಹಿಂಸೆಮಾಡ ಬೇಡವೆಂದು ಹೇಳಿದರೂ ಅನ್ನವನ್ನು ತುರುಕುತ್ತಾಳೆ

ಇನ್ನು ಯಾರ್ ಯಾರೋ ಅಳುತ್ತಾರೆ, ಆಪ್ತವಾಗಿ ಮಾತಾನಾಡಿಸುತ್ತಾರೆ,

ಯಾರು ಇವರೆಲ್ಲ!

ನಾ ಕೇಳಿದ ಪ್ರಶ್ನೆಗೆ ನಗುತ್ತಾರೆ! ಮತ್ತೆ ಯಾರೋ

ನನ್ನನೇ ನೋಡಿ ಓಡುತ್ತಾರೆ, ಕೆಲವು ಮಕ್ಕಳು ಮಾವಿನ ಮರಕ್ಕೆ ಕಲ್ಲು ಹೊಡೆಯುವ ಹಾಗೆ ನನ್ನ ತಲೆಗೆ ಹೊಡೆದು ಓಡುತ್ತಾರೆ,

ನಾನು ಪೆದ್ದನಲ್ಲ ಎಂದು ನನಗೂ ಗೊತ್ತು. ಆದರೆ ನನಗೆ ನಾನು ಯಾರು? ನಾನು ಎಲ್ಲಿದ್ದೇನೆ ? ಎಂಬುದೊಂದು ತಿಳಿಯುತ್ತಿಲ್ಲವಲ್ಲ,,,

ಮಧ್ಯ ಮಧ್ಯ ಬರುವ ಯಾವುದೋ ಒಂದು ಕನಸು ಆ ಕನಸಿನಲ್ಲಿ ನಾನು ಈ ಭೂಮಿಯನ್ನು ಬಿಟ್ಟು ಸಾಕಷ್ಟು ದೂರ ಹಾರುವಂತೆ ಭಾಸವಾಗುತ್ತಿದೆಯಲ್ಲ...

ಎಂಬುದಾಗಿ ಹೇಳುತ್ತಿದ್ದೆ, ಅದನ್ನು ನಾನು ಯಾರ ಜೊತೆಗೋ ಹೇಳಿದ್ದೆ !!!

ಛೇ! ಹಾಳಾದ ವಿಧಿ ಹೀಗೆ ನನಗೆ ವಿಷವಾಗಿ ಕಾಡಬಾರದಿತ್ತು, ನೀನು ಹೀಗೇ..

ಯಾವನೋ ಒಬ್ಬ "ಇವನು ಓದಿ ಹುಚ್ಚನಾದನೋ? ಊರಬಿಟ್ಟು ಹುಚ್ಚನಾದನೋ?" ಎಂಬುದಾಗಿ ನಕ್ಕನಲ್ಲ, ನಾನು ಓದಿರುವೆನೇ? ನಾನು ಊರಬಿಟ್ಟು ಹೊರಗೆ ಹೋಗಿದ್ದೇನೆಯೇ?

ನನಗೂ ತಿಳಿಯುತ್ತಿಲ್ಲ ಗೊತ್ತಿಲ್ಲವೇ,,,?

ಅದೇ ಶಬ್ದ, ಮತ್ತೆ ಅದೇ ಶಬ್ದ, ಜೊತೆಗೆ ಇಂಪಾದ ಧ್ವನಿ, ಯಾವುದೋ ಆ ಮಾತು ಹೃದಯಕ್ಕೆ ಆನಂದ ನೀಡುವ ಮಾತು. ದೂರದ ಬೆಟ್ಟದ ಹಾಗೆ ಭಾಸವಾಗುತ್ತಿದೆ.

ಅದನ್ನು ನೋಡ ಬಹುದಷ್ಟೆ. ಇಂದು ಮುಟ್ಟಲಾಗುತ್ತಿಲ್ಲ. ಆ ಶಬ್ದಗಳ ಜೊತೆ ಜೊತೆಯೇ ಯಾವುದೋ ಶ್ಯಾಮವರ್ಣದ ಶುದ್ಧ ಮನಸ್ಸಿನವಳ ಮುಖ ಚಹರೆ ಕಾಣುತ್ತಿದೆ. ಹಳೆ ಕಾಲದ ಪೋಟೋದ ಹಾಗೆ, ತೊಳೆಯದೆ ಡಬ್ಬಿಯಲ್ಲಿ ಅವಿತಿರುವ ನೆಗೆಟಿವ್ವನ ಹಾಗೆ ಅಸ್ಪಷ್ಟವಾಗಿದೆಯಲ್ಲ ಎಂಬುದೊಂದೇ. ಸತ್ಯ ಆದರೆ ಸತ್ಯಕಾಗಿ ಹುಡುಕಾಟ ನಡೆಯಬೇಕು.

ಕೈ ಹಿಡಿದು ಓಡಾಡಿದ ಗುರುತುಗಳು ಎದೆಯಲ್ಲಿ ಅವಿತಿವೆ. ಆ ಸೊಲ್ಲುಗಳು ಕಿವಿಯಲ್ಲಿ ಗುನುಗುತ್ತಿವೆ. ಆದರೂ ಅವು ಸಾಕ್ಷಿಗಳೆಂದು ಪರಿಗಣಿಸಲು ನನಗೆ ಸ್ಪಷ್ಟತೆಯ ಅರಿವಿಲ್ಲ. ನಿಜ, ಅವರು ಹೇಳಿದಂತೆ ನಾನೊಬ್ಬ ಅರೆಹುಚ್ಚನೇ,,,,

ಯಾವುದೋ ಒಂದು ದೊಡ್ಡ ಬಂಗಲೆ! ಯಾವುದೋ ಇನ್ನೊಂದು ದೊಡ್ಡ ಕಟ್ಟಡ, ಜನರ ಗುಂಪು ಅಲ್ಲಿನ ಮರಗಿಡ ಬಳ್ಳಿಗಳು ನನ್ನ ನೋಡಿ ಹಳೆಯ ಯಜಮಾನನಂತೆ ಗೌರವಿಸುತಿವೆಯಲ್ಲ!

ನಾನು ಆ ಬಂಗಲೆ ಮುಂದೆ ನಿಂತರೆ ಕಾಕಿ ಬಣ್ಣದ ಬಟ್ಟೆಯವನು ಝಾಡಿಸಿ ತಳ್ಳಿ ದರಿದ್ರರಿಗೆ, ಹುಚ್ಚರಿಗೆ, ಅನಾಥರಿಗೆ ಇಲ್ಲಿ ಪ್ರವೇಶವಿಲ್ಲವೆಂದು ಬೈಯುತ್ತಾನೆ,

ನಾನು ಬಡವ ಸರಿ, ಅರೆಹುಚ್ಚ ಸರಿ, ಹಾಗದರೆ ನಾನು ಅನಾಥನೇ!? ನನಗೆ ಯಾರೂ ಇಲ್ಲವೆ,,,,,, !!!

ನನ್ನ ಜೊತೆ ಒಂದು ಜೀವವಿತ್ತು. ನನಗಾಗಿಯೇ ಮಿಡಿಯುತ್ತಿತ್ತು. ಅದು ಯಾವುದು?

ನಾನಂತೂ ಅರೆಹುಚ್ಚನೇ. ಏಕೆಂದರೆ ಆ ಚಿತ್ರವನ್ನು ನೆನಪಿಸುತ್ತೇನೆ. ಆದರೆ ಆ ಚಿತ್ರದ ಹೆಸರು ನನಗೆ ತಿಳಿಯುತ್ತಿಲ್ಲವೇ?

ಯೋಚಿಸಿ ಯೋಚಿಸಿ, ಮರುನೆನಪು ಬರುವುದರಲ್ಲಿಯೇ ಯಾವುದನ್ನು ನೆನಪಿಸುತ್ತಿದ್ದೇನೆ ಅದನ್ನೇ ಮರೆಯುತ್ತೇನೆ. ಅದು ಏಕೆ ಏಂಬುದು ನನಗೂ ತಿಳಿಯುತ್ತಿಲ್ಲ.

ಅಪ್ಪನೆಂದು ಪರಿಚಯ ಮಾಡಿಕೊಂಡವನು ಊಳಿಗಮಾನ್ಯ ಪದ್ಧತಿಯಲ್ಲಿ ಇದ್ದ ಮನೆಯ ಜೀತಗಾರನಂತೆ ಅವರಿವರ ಮನೆಯಲ್ಲಿ ದುಡಿಯುತ್ತಿದ್ದಾನೆ.

ಭಾರೀ ಗಾತ್ರದವನ ಮೈಯಲ್ಲಿ ಇಂದು ರಕ್ತವಿಲ್ಲ, ಶಕ್ತಿಯಿಲ್ಲ, ತ್ರಾಣವು ಇಲ್ಲ, ಆ ತ್ಯಾಗಿಗೂ ನನಗೂ ಏನಾಗಬೇಕು? ಉತ್ತರವಿಲ್ಲ, ಬರೀ ಕಣ್ಣಿನ ಹನಿಗಳೇ ಉತ್ತರಾವದವು.. ಇನ್ನು...

ನನಗಾಗಿಯೇ ಮೃದವಾದ ಧ್ವನಿಯವಳು, ನನ್ನಲ್ಲಿ ಬಂದು ನಾ ನಿನ್ನ ಹಡೆದವಳು ಎಂದು ಹೇಳುತ್ತಾಳೆ. ಅವಳು ಸೂರ್ಯ ಪೂರ್ವಕ್ಕೆ ಬಂದ ಗಳಿಗೆಯಲ್ಲಿಯೇ ದುಡಿಮೆಯನ್ನು ಪ್ರಾರಂಭಿಸಿ ಚಂದ್ರನು ಬೀಳ್ಕೊಡುಗೆ ಕೊಡವವರೆಗೂ ದುಡಿಮೆಯೇ ಅವಳ ದಿನಚರಿಯಾಗಿದೆ. ಅವಳನ್ನು ನೋಡಿ ಹೃದಯವೇ ಸುಳಿಗೆ ಸಿಕ್ಕ ಹಡಗಿನ ಹಾಗೆ ತಲ್ಲಣಿಸುತ್ತಿದೆ.

ಎಲ್ಲವನ್ನೂ ಎಣಿಸಿ, ಯೋಚಿಸಿ ಲೆಕ್ಕದಲ್ಲಿಡಲು ಪ್ರಯತ್ನಿಸಿ ಒಂದು ಕಠಿಣ ನಿರ್ಧಾರ ಬರುವವರೆಗೆ ಚಂದಿರ ಆಗಸದಲ್ಲಿ ನಗುತ್ತಿರುತ್ತಾನೆ. ಮತ್ತೆ ಅದೇ ನಿದ್ದೆ, ನಾಳೆ ನನಗೆ ಹೊಸದು. ಯಾವುದೂ ನೆನಪಿಗೆ ಬರುವುದಿಲ್ಲ. ಕಾರಣವಿಷ್ಟೆ. ನಿನ್ನೆ ನಡೆದದು ನನಗೆ ನೆನಪಿನಲ್ಲಿ ಉಳಿಯುತ್ತಿಲ್ಲ. ನಾನು ಅರೆಹುಚ್ಚ.

ಗಡಿಯಾರದ ಆ ಸದ್ದು ಟಿಕ್ ಟಕ್ ಟಿಕ್ ಟಿಕ್ ಎಂಬ ಇಂಪಾದ ಧ್ವನಿಯೊಂದಿಗೆ ಭಾರೀ ಗಾತ್ರದ ಆ ಬಂಗಲೆಯಲ್ಲಿ ಆಡಿದ ಮಾತುಗಳು ಯಾರದು ಎಂದು ತಿಳಿಯದಾದವು,,,,,

ಆಸ್ಪತ್ರೆಗೆ ಸೇರಿಸಬೇಕು ಎಂದು ನಿರ್ಧರಿಸಿ ದೊಡ್ಡ ಗಾತ್ರದ ನಗರಕ್ಕೆ ಇಂದು ನನ್ನ ಕರೆದೊಯುತ್ತಿದ್ದಾರೆ ಎಂದು ಯೋಚಿಸುವವನಿಗೆ,,,

ಯಾವುದೋ ಮೂಲೆಯಲ್ಲಿ ಟಾಕ್ ಟಾಕ್ ಎಂಬ ಶಬ್ದ, ಅ ಶಬ್ದವ ಹಿಂಬಾಲಿಸಿ ಹೋದರೆ ಭಾರೀ ಗಾತ್ರದ ರೈಲು. ರೈಲಿನಲ್ಲಿ ಈ ಧ್ವನಿ ಹೇಗೆ ಬಂತು ಎಂದು ಹಿಡಿಯಲು ಹೋದವನಿಗೆ ರೈಲಿನ ಕಂಬಿಯಲ್ಲಿ ಅವನ ರಕ್ತದ ಕಲೆಯಾಗಿ ಅವನ ಆಹುತಿಯಾಗಿತ್ತು, ಉಸಿರು ನಿಂತಿತ್ತು

ಅರೆ ಹುಚ್ಚನನ್ನು ಆ ಗಡಿಯಾರದ ಶಬ್ದ ಹೀಗೆ ಕೊಲೆಮಾಡಬಹುದೇ?!!!

ಹುಚ್ಚನ ಸ್ನೇಹಿತರ ವಿಚಾರಿಸಿದರೆ ಎಲ್ಲದಕ್ಕೂ ಬರಿ ಮೌನವೇ ಉತ್ತರ,,,,

ಅವನ ದಿನಚರಿಯ ಡೈರಿ ನೋಡಿದರೆ,

"ಬೆಳಗಿನ ಆರು ಗಂಟೆ ನನ್ನ ಹೃದಯ ಮಿಡಿಯುವ ಸಮಯ.

ಅವಳ ಬೇಟೆಯ ಸಿಹಿ ಗಳಿಗೆ ರಾತ್ರಿಯೆಲ್ಲ ನಿದ್ದೆಯಿಲ್ಲದೆ ಅವಳನ್ನು ಕನಸಿನಲ್ಲಿಯೂ ಕನವರಿಸಿ,

ಬೆಳಗ್ಗೆ ಎದ್ದ ಕೂಡಲೇ ಅವಳ ಮುಖ ನೋಡುವುದೇ ಎನಗೆ ಸ್ವರ್ಗ

ಅವಳಿಲ್ಲದ ನನ್ನ ಬದುಕು ಶೂನ್ಯ. ಅವಳು ಮೋಸ ಮಾಡಿದ ದಿನವೇ ನನ್ನ ಕೊನೆ ಘಳಿಗೆ. "

## 15. ಕಳೆದು ಹೋದವರು

– ***ರಾಘವೇಂದ್ರ ಹೇರ್ಳೆ, ಜಿ.***



ನಾವೆಲ್ಲರೂ ಕಳೆದು ಹೋಗುತ್ತಿದ್ದೇವೆ,
ಗರ್ಭದಿಂದ ಗೋರಿಯವರೆಗೆ,
ಭೂತದ ಕನವರಿಕೆಯಲಿ, ಭವಿಷ್ಯದ ಮಂಡಿಗೆಯಲಿ,
ವರ್ತಮಾನದ ಹಳವಂಡದಲಿ,
ಅವರವರ ಕರ್ಮಕಾಂಡದಲಿ ಬೇಯುತ್ತ, ಬೆನ್ನು ಕಾಯಿಸುತ್ತ
ತಮ್ಮದೇ ದ್ವೀಪದ ಕೋಟೆಯ ಕಬಂಧಬಾಹುಗಳಲಿ ಸಿಲುಕಿ,
ಕನಸು ಕಟ್ಟುತ್ತಾ, ಕನಸು ಒಡೆಯುತ್ತಾ
ನೀರಮೇಲಿನ ಗುಳ್ಳೆಯ ದಾಸಪದಕ್ಕೆ ನಮ್ಮದೇ ಭಾಷ್ಯ ಬರೆಯುತ್ತಾ ಹಾಗೆ ಸುಮ್ಮನೆ !

ಕಂತೆ ಕಂತೆ ನೋಟುಗಳ ಮಡಿಕೆಯಲಿ,
ಹಾಳುಮೂಳು ಸಿನಿಮಾ, ಧಾರಾವಾಹಿಗಳ ಜೇಡರಬಲೆಯಲಿ,
ಚಿನ್ನ, ಬಣ್ಣ ಮೂರು ಮತ್ತೊಂದರ ಬೆಡಗಿನ ಲೋಕದ ರಸಿಕತೆಯ ಲೋಲುಪದಲಿ
ಮಕ್ಕಳು ಮರಿಗಳ ಸಂತಾನದ ಕುರುಡು ಪ್ರೇಮದಲಿ,
ಅಧಿಕಾರ ಅಂತಸ್ತುಗಳ ಮುಖವಾಡದ ಹಳಹಳಿಕೆಯಲಿ,
ಕೀರ್ತಿ, ಪ್ರತಿಷ್ಠೆ, ಸರ್ವಜ್ಞತೆಯ ಸೋಗಲಾಡಿತನದಲಿ,
ಕುಟಿಲತೆ, ಮಸಲತ್ತು, ಕಾರಸ್ಥಾನಗಳ ಮಂತ್ರಾಲೋಚನೆಯಲಿ,
ಚಹಾಕೂಟ, ಔತಣಕೂಟ, ಪಾನಗೋಷ್ಠಿಗಳ ಮೋಜು ಮಸ್ತಿಯಲಿ,
ಮಾರ್ಜಾಲ ನ್ಯಾಯದ ಬೂಟಾಟಿಕೆಯ ಕಪಿಮುಷ್ಟಿಯಲಿ,
ಬಿನ್ನಾಣ, ಒನಪು, ಒಯ್ಯಾರಗಳ ಮಾಯಾಮೃಗದ ಚಿಗರೆಗಣ್ಣಿನಲಿ
ಕಳೆದು ಹೋಗುತ್ತಲೇ ಇದ್ದೇವೆ,
ನಾಮಾವಶೇಷವಾಗುತ್ತಲೇ ಇದ್ದೇವೆ,
ಅಂದಿನಿಂದ ಇಂದಿನವರೆಗೂ ನಮ್ಮತನವ ಬದಿಗೊತ್ತಿ
ಆತ್ಮವಂಚನೆಯ ಚಾದರ ಹೊದ್ದು, ಆತ್ಮರತಿಯ ವಿಕೃತಿಯಲಿ.

ಮುಗ್ಧತೆಯೋ ? ಜಾಣಹೆಡ್ಡರ ಜಂಭೂ ಸವಾರಿಯೋ?
ಮೃಗಜಲದ ತೆವಲಿನಲಿ ನಾಗಾಲೋಟಗೈವ ಚಪಲ ಚೆನ್ನಿಗರ ಭಾಜಾ ಭಜಂತ್ರಿಯೋ ?
ತಣ್ಣಗಿನ ಕ್ರೌರ್ಯದ ಮಿಡಿನಾಗರದ ವಿಷಪಾತವೋ ?
ಕಾಲದ ಉಸುಕಿನಲಿ
ಉತ್ತರಗಾಣದೆ ಮುಗಿಯದ ಶೇಷಪ್ರಶ್ನೆಗಳ ತೀರದಲಿ ಏಕಾಂಗಿ ಸಂಚಾರ !!
ಭೋಗದ ಬದುಕಿನ ಪರಾಕಾಷ್ಠೆಯಲಿ,
ಹಿಂದಿರುಗಿ ನೋಡದ ಕಣ್ಣು ಕಟ್ಟಿದ ಕುದುರೆ !!
ಕಾಂಚಾಣ ಜಗತ್ತಿನ ಸಮ್ಯಕ್ ದರ್ಶನವೋ ? ವಿಶ್ವರೂಪ ದರ್ಶನವೋ ?
ರುದ್ರನರ್ತನದ ಹೆಜ್ಜೆಗಳಡಿಯಲ್ಲಿ ನುಜ್ಜುಗುಜ್ಜಾಗುತ್ತಿದ್ದೇವೆ,
ಮೌಲ್ಯಾಧಾರಿತ ಬದುಕಿನ ಪುಟಪುಟಗಳು ಎಲ್ಲಿ ಮಾಯವಾದವು ?
ಉಂಡ ಬಾಳೆಲೆಯಂತೆ ಬಿಸುಟಲ್ಪಟ್ಟಿವೆ ನೋಡಿ ಸ್ವಂತಿಕೆಯ ಭ್ರೂಣಗಳು !!

ಎಲ್ಲವೂ ಅಯೋಮಯ ; ಎಂದೆಂದೂ ರೂಹಿಲ್ಲದ ಚಿತ್ರಕ್ಕೆ ಕುಂಚ ಹಿಡಿವ ಉದ್ಧಟತನ !
ಕಣ್ಣಕನ್ನಡಿಯಲ್ಲಿ ಕಾಣಿಸುತ್ತಿದೆ ಸಾವಿರ ಬಣ್ಣದ ಗೋಸುಂಬೆ !
ಕಾಲ ಪುರುಷನ ಅಂಕಪರದೆ ಎಂದು ಬೀಳುವುದೋ ?
ರೋಸಿ, ಹೇವರಿಕೆಗೊಂಡ ಮೈ, ಮನಸ್ಸು ತೊಳೆವ ಬೂದಿ ಎಲ್ಲಿದೆ ?
ರೆಕ್ಕೆ ಸುಟ್ಟ ಹಕ್ಕಿಯಂತೆ, ನಿರೀಕ್ಷೆಗಳು ಸತ್ತ ಶಬರಿಯ ಕುರುಡುಗಣ್ಣಿನಲಿ ಚಡಪಡಿಸುತ್ತಿದ್ದೇವೆ !!!
ಕಣ್ಣು ಕಾಣದೆ ಗಾವಿಲರಾಗಿ !!!

***

## 16. ನನ್ನ ಬಾಲ್ಯದ ನೆನಪು

– ಅಯ್ಯನಗೌಡ ಎಮ್ ಪಾಟೀಲ

ಬಾಲ್ಯ ಎಂದರೆ ಯಾರಿಗೆ ತಾನೆ ಇಷ್ಟ ಇಲ್ಲಾ ಹೇಳಿ. ಬಾಲ್ಯ ಎಂದರೆ ಹಾಗೆಯೆ ಗರಿ ಗರಿ ನೆನಪುಗಳು ಬಿಚ್ಚಿಕೊಳ್ಳುತ್ತವೆ. ಆ ಹುಡುಗಾಟಿಕೆ, ತುಂಟಾಟ, ಕೀಟಲೆ, ಆಟ, ಓಟ, ನೋಟ, ಮೈಮಾಟ, ಕದ್ದು ಮಾವಿನ ಗಿಡಕೆ ಕಲ್ಲು ಎಸೆದಿದ್ದು ಹೀಗೆ ಪಟ್ಟಿ ಹನುಮಂತನ ಬಾಲದ ಹಾಗೆ ಬೆಳೆಯುತ್ತಲೆ ಹೋಗುತ್ತದೆ.

ಶಾಲೆಗೆ ಚಕ್ಕರ್ ಹಾಕಿದ್ದು, ಮೇಷ್ಟ್ರುಗೆ ಸುಳ್ಳು ಹೇಳಿದ್ದು,ಮನೆಯಲ್ಲಿ ಸುಳ್ಳು ಹೇಳಿದ್ದು ಇವೆಲ್ಲಾ ನಾವು ಮಾಡೋದು ತಪ್ಪು ಅಂತ ಅನಸಲೆ ಇಲ್ಲಾ ಏಕೆಂದರೆ ಬುದ್ದಿ ತಿಳಿಯದ ಎಳೆಯ ವಯಸ್ಸು,ಕಣ್ಣು ಮುಚ್ಚಾಲೆ ಆಟ, ಮರಕೊತಿ ಆಟ, ಚಿಣ್ಣಿ ದಾಂಡಿನ ಆಟ, ಗೋಲಿ ಆಟ, ಕುಂಟಲಿಪಿ ಆಟ, ಲಗೊರಿ ಆಟ, ಕಬ್ಬಡ್ಡಿ ಆಟ,ಚಿಟ್ಟೆ ಹಿಡಿಯುವದು, ಆನಿ ಕಿರಾಟ,ಜೊಳದ ದೊಂಟನಿಂದ ಚಕ್ಕಡಿ(ಬಂಡಿ) ಮಾಡುವುದು, ಎತ್ತುಗಳನ್ನು ಮಾಡುವದು, ಮಣ್ಣಿನ ಎತ್ತುಗಳನ್ನು ಮಾಡುವದು,ಕಡ್ಡಿ ಪೊಟ್ಟಣದಿಂದ ಲಾರಿ ಮಾಡುವದು, ಹೊಲ ಜಮೀನುಗಳಿಗೆ ಹೋಗಿ ಜಿರಂಗಿ, ಕೆಂಚಗಾರ, ಕಮಟಾ ಹಿಡಿದು ದಾರ ಕಟ್ಟಿ ಆಟ ಆಡಿಸಿದ್ದು,

ಕಣ್ಣುಮುಚ್ಚಾಲೆ ಆಟ ಆಡಿದ್ದು, ಆಡುವಾಗ ಕಣ್ಣು ಮುಚ್ಚೆ ಕಾಡೆಗೂಡೆ ಉದ್ದಿನ ಮೂಟೆ ಹುರಿಳೆ ಹೋಯ್ತು ಹಾಡು ಹಾಡಿದ್ದು. ಬಚ್ಚಿಟ್ಟು ಕೊಳ್ಳುವುದು. ಅವಿತುಕೊಳ್ಳುವ ಜಾಗ ವೈಶಂಪಾಯನ ಕೊಳ್ಳದಲ್ಲಿ ದುರ್ಯೋದನ ಅವಿತುಕೊಳ್ಳುವ ಜಾಗದಷ್ಟೆ ಬದ್ರವಾದದು.

ಕಾಡಿನಲ್ಲಿ ಅಲೆದು ತರೆಹವಾರಿ ಹಣ್ಣು ಸವಿದಿದ್ದು, ಯಾವ ಕಾಡು ಪ್ರಾಣಿಗೂ ಕಡಿಮೆ ಇಲ್ಲಾ ಎಂದು ಹೇಳಬಹುದು ಅವುಗಳಲ್ಲಿ ಪ್ರಮುಖವಾದವು ಈಗಿನ ಮಕ್ಕಳು ಈ ಹಣ್ಣುಗಳ ಹೆಸರು ಕೇಳಿರಲಿಕ್ಕೆ ಇಲ್ಲಾ. ಕವಳಿ ಹಣ್ಣು, ಕಾರಿ ಹಣ್ಣು, ಹುಣಸೆ ಹಣ್ಣು, ಜೋಳದ ಹಣ್ಣು, ತೋಂಡಿ ಹಣ್ಣು, ಚಳ್ಳಿ ಹಣ್ಣು, ಬಾರಿ ಹಣ್ಣು, ನೆಲ್ಲಿ ಕಾಯಿ, ಮಾವಿನ ಕಾಯಿ, ಹುಣಸೆ ಕಾಯಿ, ಇವುಗಳೆಲ್ಲಾ ರುಚಿ ರುಚಿ ಮತ್ತು ಆರೋಗ್ಯಕ್ಕೆ ಹೇಳಿ ಮಾಡಿಸಿದ ಹಣ್ಣುಗಳು ಇಂದು ಈ ಹಣ್ಣು ಸಿಗುವದು ಅಪರೂಪ ಎಂದು ಹೇಳಬಹುದು.

ಗೆಳೆಯರ ಜೊತೆ ಒಡನಾಟ ಅವರೊಂದಿಗಿನ ಕಳೆದ ದಿನಗಳನ್ನು ಮರೆಯಲು ಸಾದ್ಯವಿಲ್ಲಾ ಊರ ಜಾತ್ರೆಗಳಲ್ಲಿ ದೇವರಿಗೆ ಹೆದರಿದ್ದು.ಇವುಗಳ ನೆನಪು ಇಂದಿಗೂ ಹಸಿಹಸಿಯಾಗಿವೆ. ಇಂದಿನ ಮಕ್ಕಳಿಗೆ ಈ ಹಳ್ಳಿಯ ಸೊಗಡು ಅವರ ಸಂಪರ್ಕಕ್ಕೆ ಬಾರದಾಗಿದೆ ಎಂದು ಹೇಳಬಹುದು.


***

## 17. ಕ, ಕೆ ತಲಕಟ್ಟು ಕ. ಕ, ಕೆ ಇಳಿ ಕಾ

– ಲೋಹಿತ್ ಚಾಮನೂರ

ಮೊನ್ನೆ ಕಾಗೆಗೂ ಬೆಕ್ಕಿಗೂ ನಡೆದಿತ್ತು ಕದನ
ಪ್ರಸ್ತುತ ಸನ್ನಿವೇಶವನ್ನರಿತು ಕಾಗೆ ಹೇಳ್ತಿತ್ತು ಬುದ್ಧೀನ
ಒಂದಗಳ ಅನ್ನವ ಕಂಡರೆ ಕರೆವೆ ನನ್ನ ಬಳಗನ
ಮೊಲವ ಹಾಕಿ ಮುಚ್ಚಿಡುವ ನಿನದೆನಿತು ಜೀವನ

ಭಾಷೆಯನ್ನು ಸೃಷ್ಟಿಸಲು, ಬಳಸಲು ಬಿಡು ನಿನ್ನ ಬಿನ್ನಾಣ
ಪ್ರಾಥಮಿಕ ಹಂತದಲಿ ಸಿಗಲಿ ಮಾತೃಭಾಷಾ ಶಿಕ್ಷಣ
ನಂತರದಲಿ ತೆರೆದಿರಲಿ ಅನ್ಯಭಾಷೆಗೆ ಆವರಣ
ಸ್ವಂತಿಕೆ, ಕಲ್ಪನೆ, ಸೃಜನಾತ್ಮಕತೆಯಿಂದ ಜ್ಞಾನವಾಗಲಿ ಹೂರಣ




ಕವಿಯ ನುಡಿಯು ಸಾರ್ಥಕವಾಗಲಿ
ಕನ್ನಡದಲಿ ಕಲಿ; ಇಂಗ್ಲಿಷನ್ನು ಕಲಿ
ಎಂಬುದು ಸೂತ್ರವಾಗಬೇಕೇ ಹೊರತು
ಕನ್ನಡವನ್ನು ಕಲಿ; ಇಂಗ್ಲಿಷಿನಲ್ಲಿ ಕಲಿ
ಎಂಬುದಲ್ಲ ಎಂದು ಎಚ್ಚರಿಸಿರುವುದು ನೆನಪಿರಲಿ

ಮೆ. ಹಾಂ. ಮ್ಯೆ. ಹಾಂ ಇನ್ನಾದರೂ ಬಿಡು ನಿನ್ನ ಭಾಷೆಯ
ನನ್ನಂತೆಯೆ ಕಾ.ಕಾ.ಕಾ ಅನ್ನುತ ಕನ್ನಡ ಕಲಿಸಲು ತೊಡು ನೀನು ಆಶಯ.

## 18. ಪದೇ ಪದೇ ಕಾಡುವ ಪ್ರಸಂಗಗಳು

– ಹಮೀದ ಮಂಜೇಶ್ವರ್



ಬಹಳ ಹಿಂದಿನ ನೆನಪು. ನಾನು ಪ್ರಾಥಮಿಕ ತರಗತಿಯಲ್ಲಿ ಕಲಿತ ಹಾಡದು. ಬೀಸೊ ಕಲ್ಲು ಮುಂದೆ ಕುಳಿತ ಆ ಕೆಲಸದಾಕೆ ಹೆಣ್ಣುಮಗಳು ರಾಗಿ ಬೀಸುತ್ತಾ ಕಣ್ಣೀರು ಸುರಿಸುತ್ತಿದ್ದಳು. ಅದನ್ನು ಕಂಡ ಮನೆಯೊಡತಿ ಆಕೆಯನ್ನು ಯಾಕೆ ಅಳುತ್ತೀ ಎಂದು ವಿಚಾರಿಸುತ್ತಾಳೆ. ರೋಗ ಹಿಡಿದು ಮಲಗಿದ ಗಂಡನ ನೆನೆದು ಅಳುಬಂತೇ, ದಂಡಿಗೆ ಹೋದ ಮಗ ಬಾರದಿದ್ದುದರ ನೋಡಿ ಅಳುಬಂತೇ, ಮದುವೆಯಾಗದಿರುವ ಪ್ರಾಯದ ಮಗಳ ನೆನೆದು ಅಳುಬಂತೇ, ಸದಾ ಕಾಡುವ ಬಡತನವ ನೆನೆದು ಅಳುಬಂತೇ ಎಂದು ವಿಚಾರಿಸುತ್ತಾಳೆ. ಆಗ ಆಕೆ ಹೇಳುತ್ತಾಳೆ ಇದಾವುದು ಅಲ್ಲ. ನನಗಿರುವ ಕಷ್ಟವನ್ನೇ ನನಗೆ ನಿಭಾಯಿಸಲಿಕ್ಕಾಗುವುದಿಲ್ಲ. ಮತ್ತೆ ಇಷ್ಟೂ ಜನರ ಕಷ್ಟಗಳನ್ನು ನಿಭಾಯಿಸುವ ಆ ದೇವರ ಪಾಡೇನು ಎಂಬುದ ನೆನೆದು ಅಳುಬಂತು. ಜನಪದರು ಕಟ್ಟಿದ ಈ ಹಾಡು ನನಗೆ ಮೌಲ್ಯವನ್ನು ಕಲಿಸಿದ 'ಮಹಾನ್ ಕೃತಿ'. ತನ್ನನ್ನು ಮಾತ್ರ ನೋಡುವ ಸ್ಥಿತಿಯಿಂದ ತನ್ನಿಂದ ಆಚೆಗೆ ಕಾಳಜಿ ವಹಿಸುವ ಪರಿಯನ್ನು ಹೇಳಿಕೊಟ್ಟ ಪ್ರಸಂಗವದು.

ನನಗೆ ಇವತ್ತಿಗೂ ಪದೇ ಪದೇ ಕಾಡುವ ಚಿತ್ರಣವಿದು. ತನ್ನೆಲ್ಲಾ ಕಷ್ಟಗಳನ್ನು ನುಂಗಿ ಪರರ ಬಗೆಗೆ ಚಿಂತಿಸುವ ಪರಿ ಇದೆಯಲ್ಲಾ. ಬಹುಶ: ಹಳ್ಳಿಗಾಡಿನ ಮುಗ್ಧ ಹೆಣ್ಣುಮಕ್ಕಳಿಗೇ ಇದು ಸಾಧ್ಯವೇನೋ? ಆದರೆ ಆಕೆಯ ಮೂಲಕ ಆ ಕವಿ ಬದುಕನ್ನು, ಸಮಾಜವನ್ನು ನೋಡುವ ರೀತಿಯನ್ನು ನನಗೆ ಬೋಧಿಸಿಬಿಟ್ಟ/ಳು. ಬದುಕು ಸಂಪೂರ್ಣ ವ್ಯೆಯಕ್ತೀಕರಣಗೊಳ್ಳುವ, ವ್ಯೆಯಕ್ತಿ ಹಿತಾಶಕ್ತಿಯಲ್ಲಿ ಮುಳುಗುವ ಸಂದರ್ಭದಲ್ಲಿ ಮೀರಿ ಅದರಿಂದಾಚೆಗೆ ಹೋಗುವ ಮೌಲ್ಯವನ್ನು ನೀಡಿತು.

ನಾನಾಗ ಪದವಿ ಮುಗಿಸಿ ರಜಾ ಕಾಲದಲ್ಲಿದ್ದ ಸಮಯ. ಸಾದಾರಣವಾಗಿ ನಾವು ಕೆಲವು ಗೆಳೆಯರು ನಮಗೆ ಸಮಯ ಸಿಕ್ಕಿದಾಗಲೆಲ್ಲಾ ಹತ್ತಿರದ ಗಾಂಧಿ ಪ್ರತಿಷ್ಠಾನ ನಡೆಸುವ ಗ್ರಂಥಾಲಯಕ್ಕೆ ಹೋಗಿ ಓದುವ ಅಭ್ಯಾಸವಿತ್ತು. ಬಹಳ ಸರಳವಾಗಿ ವಿನ್ಯಾಸಗೊಳಿಸಿದ ಗ್ರಂಥಾಲಯವದು. ಕೆಲವು ಬೆಂಚುಗಳು ಟೇಬಲ್ಲುಗಳು. ಅದನ್ನು ನೋಡಿಕೊಳ್ಳುತ್ತಿದ್ದುದು ಗಾಂಧಿವಾದಿಗಳಾದ ಹಿರಿಯ ಜೀವಗಳು. ಹಾಗೆ ಒಂದು ದಿನ ಬೆಂಚಿನ ಒಂದು ತುದಿಯಲ್ಲಿ ಕುಳಿತು ಓದುತ್ತಿದ್ದೆ. ನನ್ನ ಕಾಲು ಬೆಂಚಿಯಿಂದಾಚೆಗೆ ಚಾಚಿತ್ತು. ಅಂದು ಆ ಗ್ರಂಥಾಲಯವನ್ನು ನೋಡಿಕೊಳ್ಳುತ್ತಿದ್ದ ಆ ಹಿರಿಯರು ನನ್ನ ಕಾಲಿಗೆ ಎಡವಿದರು. ಕಾಲು ಪಕ್ಕಕ್ಕೆ ಸರಿಸಿ ಕ್ಷಮಿಸಿ ಎಂದೆ. ತಕ್ಷಣ ಅವರು ಇಲ್ಲ ನನ್ನದೇ ತಪ್ಪು, ನಾನು ನೋಡಿ ನಡೆಯಬೇಕಿತ್ತು ಎಂದರು. ಅದು ಅವರ ಪ್ರಾಮಾಣಿಕ ಮಾತಾಗಿತ್ತು. ಆದರೆ ನಿಜವಾಗಿಯೂ ನನ್ನ ತಪ್ಪಾಗಿತ್ತು. ನಾನು ಉಢಾಪೆಯಿಂದ ಕಾಲು ಸರಿಸಿಟ್ಟಿದ್ದಕ್ಕೆ ಅವರು ಎಡವಿದ್ದರು. ಅವರು ತಪ್ಪನ್ನು ತನ್ನ ಮೇಲೆ ಎಳೆದುಕೊಳ್ಳುವ ಮೂಲಕ ನನಗೆ ತಾತ್ವಿಕವಾಗಿ ಹೊಡೆತ ನೀಡದ್ದರು. ಬಹುಶ ವಿನಯವನ್ನು ಕಲಿಸಿಕೊಟ್ಟ ಪ್ರಸಂಗವದು. ಮಾಡಿದ ತಪ್ಪನ್ನು ಬೇರೆಯವರ ಮೇಲೆ ಹೊರಿಸವ ಸಂಭವಗಳಿರುವ ಸಂದರ್ಭದಲ್ಲಿ ಅವರ ಆ ಮಾತು ನನ್ನನ್ನು ಬದುಕಿನುದ್ದಕ್ಕೂ ಸದಾ ಜಾಗೃತವಾಗಿಡಲು ಸಹಕರಿಸಿದೆ. ಇಂದಿಗೂ ನಾನು ಬಸ್ಸಲ್ಲಿ ಕುಳಿತಾಗ ನನ್ನ ಕಾಲು ಸಿಟಿನಿಂದ ಆಚೆಗೆ ಇದೆಯೇ ಎಂದು ಖಚಿತಪಡಿಸಿಕೊಳ್ಳುತ್ತೇನೆ.

ಬಹುಶ: ಮೌಲ್ಯಗಳನ್ನು ಹೇಳಿಕೊಡುವ ರೀತಿಯೇ ಇದೇನೋ. ಆಚರಣೆಯ ಸಣ್ಣ ಸಣ್ಣ ಪ್ರಸಂಗಗಳೇ ವ್ಯಕ್ತಿತ್ವದ ಮೇಲೆ ಅಗಾಧ ಪ್ರಭಾವ ಬೀರುವುದಿರಬೇಕು. ಈ ಘಟನೆಗಳು ನನಗೆ ಬದುಕನ್ನು, ಮೌಲ್ಯವನ್ನು ಕಲಿತುಕೊಳ್ಳಲು ಸಹಾಯಕವಾಗಿದೆ. ಹಾಗೆಯೇ ಸಹಾಯ ಮಾಡುತ್ತಲೇ ಇದೆ. ಸದಾ ಕಾಡುತ್ತಿರುತ್ತವೆ. ಪದೇ ಪದೇ ಒಳಗಿಂದ ಮಾತಾಡುತ್ತಿರುತ್ತವೆ. ನನ್ನ ತಪ್ಪನ್ನು, ಎಡವುದನ್ನು ಸೂಚಿಸುತ್ತಲೇ ಸಾದಾ ಜಾಗೃತಿಯನ್ನು ತರುತ್ತದೆ. ನನ್ನನ್ನು ಸಾಮಾಜಿಕನಾಗಿ ಮಾಡಿದ ಆ ನೆನಪುಗಳ ಸಣ್ಣ ನೋಟವಿದು.

***

## 19. ನಾನು 'ಬಯಲು'

–ಶಿವಕುಮಾರ ಸಿ ಎಸ್


ನಾನು, ನಾನೆಂದರೆ ಏನು?
ಕಾಣದ ಹಾಗೆ ಆತ್ಮ ಸಾಕಾರ?
'ಬಯಲು' ಬಟ್ಟೆಯ ಮಾಂಸರುದಿರ?
ಚಿತ್ತ ಹರಿವ ತೀರದ ಒಂಟಿ ನೌಕೆ?

ಮನದ ಕನ್ನಡಿಯೊಳು ಐದು ಮಾಯೆ
ಒಂದರ ಹಿಂದೊಂದು ಹಗ್ಗ ಜಗ್ಗಾಟ;
ಕನಸಿನಂಗಳದಿ ನೂರು ಕನವರಿಕೆ
ಒಂದರ ಮೇಲೊಂದು ಬಣ್ಣದೋಕುಳಿ
ಅಷ್ಟು-ಅಷ್ಟರ ನಡುವೆ ಸಿಕ್ಕಿದ್ದಿಷ್ಟೆ
ಉಳಿದವೆತ್ತಲೋ ಕಾಣೆ.

ತುಡಿವ ಎದೆಯೊಳಗೆ
ನೂರು ತಲ್ಲಣಗಳ ಜಲಪಾತ
ಜಿಗಿಯುತ್ತಲೇ ಇದೆ ಎಣೆ ಇಲ್ಲ;
ಹಿಡಿತ ತಪ್ಪಿದ ಜೀವ, ಬತ್ತಿ ಹೋದ ಭಾವ
ಗೊಣಗುತ್ತಲೇ ಇದೆ
'ಇದು ಬಂಡಿಯಲ್ಲ ಬದುಕೊ?'

ವಾರೆ ನೋಟದ ಸುಳಿಗೆ
ಕಂಡದ್ದೆಲ್ಲ ಹೂದೋಟ ಹರೆಯದಲಿ
ನಾ ದುಂಬಿ ನೀ ಜೇನು ಪ್ರಣಯದಲಿ;
ಕಾಲ ಉರುಳಿದ ಮೇಲೆ
ಸಾಕ್ಷಾತ್ಕಾರದ ಪಾಠ ಅಂಚಿನಲಿ
ಇಟ್ಟ ಹೆಜ್ಜೆಯ ಗುರುತು
ನೋಡುತ್ತಲೇ ಮಬ್ಬು-ಮಬ್ಬು ದಡದಲಿ.
ತೆರೆಗೆ ಸರಿಯುವ ಹೊತ್ತು
ಅವರಿವರ ಗೋಜಿಲ್ಲ
ಸುತ್ತೆಲ್ಲ ಸುಡುಗಾಡ ಕತ್ತಲು;
ಯಾರೋ ಕಾಣುವರಲ್ಲಿ ಬೆತ್ತಲು.

ತಾಳ ತಪ್ಪಿದ ಮೇಲೆ
ಮೇಳ ಮೆಚ್ಚುವರಾರು?
ಈಗ ಮತ್ತೆ ನಾನು
ಬಯಲೊಳು ಬರೆದ ಚಿತ್ತಾರ
ಬಣ್ಣವಿರದ ಆಕಾರ ನಿರಾಕಾರ.



***

## 20. ಜೀವನದ ನಗು

–ದಿಲೀಪಕುಮಾರ ರಾಠೋಡ




ನಾನು ಎಂಬುದ ಮರೆತು
ನನ್ನಿಂದಲೆ ಎಂಬುದ ತೊರೆದು
ನಾವು ಎಂಬುದ ನೆನೆದು
ನಮ್ಮಿಂದ ಎಂದು ಮನಸ್ಸಿಟ್ಟು
ಎಲ್ಲರೊಳಗಾಗಿ ನಗುನಗುತ ಬದುಕಿದರೆ
ಅದುವೆ ನಿಜವಾದ ಜೀವನ

ಕಳೆದುಹೋದ ವಿಚಾರಗಳನ್ನಷ್ಟೆ
ಗಮನಿಸುತ್ತಾ ಕುಳಿತರೆ ಮುಂದಿನ
ಸಂಗತಿಗಳು ಗೋಚರವಾಗುವುದಿಲ್ಲ
ಸಮಗ್ರವನ್ನು ವೀಕ್ಷಿಸುವ ದೃಷ್ಟಿಕೋನ ಬೆಳೆಸಿಕೊಳ್ಳೋಣ
ನಗುನಗುತ ಸಹಬಾಳ್ವೆ ಮಾಡೋಣ

ಚಿಕ್ಕವರಿದ್ದಾಗ ನಗುವುದಕ್ಕಿಂತ ಅಳುವುದು ಜಾಸ್ತಿ
ಆದರೆ ಮನದ ಒಳಗೆ ತುಂಬಾ ಖುಷಿ ಇರುತ್ತೆ
ದೊಡ್ಡವರಾದಾಗ ಅಳುವುದಕ್ಕಿಂತ ನಗುವುದು ಜಾಸ್ತಿ
ಆದರೆ ಒಳಗೆ ತುಂಬಾ ನೋವುಗಳು ತುಂಬಿರುತ್ತವೆ
ನಗುವುದು ಮತ್ತು ಅಳುವುದನ್ನು ಸಮಾನ ಮಾಡಿಕೊಂಡು
ಬದುಕು ನಡೆಸುವುದೇ ಜೀವನ.

***

## 21. ಯಾರ ಸುಖಕ್ಕಾಗಿ ಈ ಮದುವೆ

– ಶ್ರೀಲತ ಕೆ. ಎನ್.

ಮನೆಗೆಲಸದ ಮಲ್ಲಮ್ಮ ತನ್ನ ಮೊಬೈಲ್‌ನಲ್ಲಿ ಆ ದಿನ ಮಗಳೊಂದಿಗೆ ಮಾತನಾಡುತ್ತಿದ್ದಳು. ಮಗಳ ಅತ್ತೆ , ಮಾವ , ಗಂಡ ಇವರೆಲ್ಲರ ಕ್ಷೇಮ ಸಮಾಚಾರ ವಿಚಾರಿಸಿದ್ದಾಯ್ತು. ನೀನು ತಿಂಡಿ ತಿಂದಿರುವೆಯಾ ಎಂಬ ಪ್ರಶ್ನೆಯನ್ನು ಕೂಡಾ ಕೇಳಿದಳು. ಕೆಲಸ ಮುಗಿಯುವುದಾದರೂ ಯಾವಾಗ, ಅದು ಇದ್ದೇ ಇರುತ್ತದೆ ಮೊದಲು ನೀನು ತಿಂಡಿ ತಿನ್ನು ಎಂಬ ಹಿತನುಡಿ ಅಮ್ಮನಿಂದ ಕೇಳಿಬಂತು. ಆಕೆಯ ಮಾತುಗಳನ್ನು ಕೇಳಿಸಿಕೊಳ್ಳಬಾರದೆಂದುಕೊಂಡರೂ ಗಟ್ಟಿಯಾದ ಧ್ವನಿ ಕಿವಿಗೆ ರಾಚುತ್ತಿತ್ತು. ಮಧ್ಯೆ ಫೋನ್ ಸಂಪರ್ಕ ಕಡಿಯಿತು. ಕರೆನ್ಸಿ ಆಗೋಯ್ತು ಎಂದು ಮಲ್ಲಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಳು. ಆಕೆಯ ಆತಂಕ ಕಂಡು ನನ್ನ ಫೋನ್ ಮೂಲಕ ಸಂಪರ್ಕ ಒದಗಿಸಿ ಮಾತನಾಡುವಂತೆ ಮಾಡಿದ್ದೆ. ಮಾತು ಮುಗಿಸಿದ ಆಕೆ ತನ್ನ ಸೆರಗಿನಿಂದ ಕಣ್ಣೊರೆಸುತ್ತಾ, ನನ್ನ ಮಗಳತ್ತ ಕೈ ತೋರಿಸಿ ನುಡಿದಳು. 'ಈಕೆಗಿಂತ ಸಣ್ಣವಳು, ೬ ನೇ ಕ್ಲಾಸ್ ಗೆ ಶಾಲೆಗೆ ಹೋಗಲ್ಲ ಅಂತ ಹಠ ಮಾಡಿದ್ಲು, ಕುಡುಕ ಗಂಡ, ಲಗ್ನ ಮಾಡ್ಕೊಟ್ಟೆ. ಆರು ತಿಂಗಳಾಯ್ತು, ಗಂಡನ ಮನೆಗೆ ಈಗಲೇ ಕಳಿಸೋದಿಲ್ಲ ಅಂದರೂ ನಮ್ ಸೊತ್ತು ಕರ್ಕೊಂಡೋಗ್ತೀವಿ ಅಂತ ಅತ್ತಿ ಹಠ ಮಾಡಾಕತ್ತಿದ್ಲು , ಎಂದು ತನ್ನ ಮಾತು ಮುಗಿಸಿದಳು. ಅಷ್ಟು ಚಿಕ್ಕ ವಯಸ್ಸಿಗೆ

ಮದುವೆ ಮಾಡಿಕೊಟ್ಟೆಯಾ? ನನ್ನ  ಪ್ರಶ್ನೆಗೆ ಆಕೆ ಉತ್ತರಿಸಿದಳು. 'ನನ್ ಗಂಡ ಕುಡುಕ , ಡ್ರೈವರು , ಕಾರು ಓಡಿಸ್ತಾನೆ,  ಒಂದಿನ ದುಡಿದ್ರೆ ನೂರು ರೂಪಾಯೀನೂ ಮನೆಗೆ ಕೊಡೋಲ್ಲ, ಅವ್ನು ಸರಿ ಇಲ್ಲ, ಸಂಬಂಧ ಕೂಡ್ ಬಂತು, ಈಕೇನೂ ಓದು ತಲೆಗೆ ಹತ್ತಲ್ಲ , ಶಾಲೆ ಒಲ್ಲೆ ಅಂದಳು.  ಆಕಿ ಆಯಿ ಮಾತು ಕೇಳಿಕೊಂಡು ಮದುವೆಯಾದಳು.  ಅಪ್ಪಿಗಿಂತಲೂ ಮೈ ಕೈ ತುಂಬಿಕೊಂಡಿದ್ದಾಳೆ, ವಯಸ್ಸು ಸಣ್ಣದಾದರೂ ಮೈ ಬಂದಿದೆ ಎಂದು ೧೫ ವಯಸ್ಸಿನ ನನ್ನ ಮಗಳತ್ತ ಮತ್ತೊಮ್ಮೆ ಕೈತೋರಿದಳು.

ಮಲ್ಲಮ್ಮಳಿಗೆ  ೩೦–೩೨ ರ ಆಸುಪಾಸು. ೧೦ನೆಯ ವಯಸ್ಸಿಗೆ ಮದುವೆಯಾದಳು. ೧೨ ರ ವಯಸ್ಸಿಗೆ ಋತುಮತಿಯಾದಳು. ೧೪ನೆಯ ವಯಸ್ಸಿನ ತನಕ ತವರು ಮನೆಯಲ್ಲಿದ್ದು, ಗಂಡನ ಮನೆ ಸೇರಿದ್ದಳು, ೧೬ನೆಯ ವಯಸ್ಸಿಗೆ ಮೊದಲ ಹೆರಿಗೆ. ಬಡತನ, ಲವಲವಿಕೆ ಇಲ್ಲದೆ ಬಾಡಿದಂತಿರುವ ಮುಖ ಆಕೆಯ ವಯಸ್ಸನ್ನು ಹೆಚ್ಚಿಸಿದಂತೆ ಕಂಡುಬರುತ್ತಿತ್ತು. ಮಗಳು ೧೧ ರ ಪ್ರಾಯಕ್ಕೆ ಋತುಮತಿಯಾದಳು.  ಮದುವೆ ೧೨ ರ ಪ್ರಾಯಕ್ಕೆ , ಪ್ರಸ್ಥ , ಅದೂ ೧೨ನೆಯ ವಯಸ್ಸಿಗೆ.



ಚಿಕ್ಕ ವಯಸ್ಸಿಗೆ ಮದುವೆಯಾಗಿರುವ ಆಕೆಯನ್ನು ನೋಡುವ ಕುತೂಹಲ , ಒಮ್ಮೆ ಕರೆದುಕೊಂಡು ಬಾ ಎಂದು ಹೇಳುತ್ತಲೇ ಮಲ್ಲಮ್ಮ ಮಾತನಾಡಲಾರಂಬಿಸಿದಳು. ದೊಡ್ ಸಂಸಾರ, ೪ ಜನ ಅಣ್ಣ ತಮ್ಮಂದಿರು, ಅತ್ತಿ  ಇನ್ನೂ ಗಟ್ಟಿಯಾಗಿದ್ದಾಳೆ, ಹಳ್ಳಿ ಮನೆ, ಬೇಸಾಯ, ಮನೇನಲ್ಲಿ ರಾಸುಗಳು, ಹಾಲು ಕರೆಯುವುದು, ಕೊಟ್ಟಿಗೆ ಕೆಲಸ, ಅಡಿಗೆ ಕೆಲಸ, ಇದೆಲ್ಲಾನೂ ಇವಳೇ ಮಾಡ್ತಾಳೆ. ಎಲ್ಲಾ ಕೆಲಸಾನೂ ಕಲ್ತಿದ್ದಾಳ್ರೀ, ಹೊಲದ್ ಕಡೇನೂ  ಹೋಗ್ ಬರ್ತಾಳೆ. ೧೨ ರ ಪ್ರಾಯದ ಹೆಣ್ಣುಮಗುವನ್ನು ಮದುವೆ ಮಾಡಿಕೊಟ್ಟ ತಾಯಿಯೊಬ್ಬಳ ಆತಂಕ, ಬಾಲ ಕಾರ್ಮಿಕಳೊಬ್ಬಳ ಬದುಕು ಕಣ್ಣಿಗೆ ಕಟ್ಟುತ್ತಿತ್ತು.

ಪುಣೆ ಬಳಿಯ ಹಳ್ಳಿಯಿಂದ ತವರಿಗೆ ಬಂದ ಮಗಳನ್ನು ಮಲ್ಲಮ್ಮ ನನ್ನ ಕೋರಿಕೆಯಂತೆ ಕರೆತಂದಿದ್ದಳು. ವಯಸ್ಸಿಗೆ ಮೀರಿದ ಬೆಳವಣಿಗೆ ಮಲ್ಲಮ್ಮ ಹೇಳಿದಂತೆಯೇ ಇದ್ದಳು. ಅವಳೊಂದಿಗೆ ನಡೆದ ಮಾತುಕತೆಯ  ಮದ್ಯೆ, 'ಓದೋದ್ರಾಗೆ ಮನಸ್ ಕೊಟ್ಟಿಲ್ಲಾಂದ್ರೆ ಮದ್ವಿ ಮಾಡ್ಕೊಳ್ದೆ ಇನ್ನೇನಾಗುತ್ರೀ ' ಎಂದು ನನ್ನನ್ನುದ್ದೇಶಿಸಿ ಪ್ರಶ್ನಿಸಿದಳು.

ಅವಳ ಮದುವೆಗೂ ನಮಗೂ ಸಂಬಂಧವಿಲ್ಲವೆಂದುಕೊಳ್ಳುವುದಿದೆ.
ಆಕೆಯ ಮಾತಿನಂತೆ ಓದಲು ಮನಸ್ಸು ಕೊಟ್ಟಿಲ್ಲ, ಆಕೆಯ ತಾಯಿಯ ಅಭಿಪ್ರಾಯದಲ್ಲಿ  ಆಕೆಗೆ ಓದು ತಲೆಗೆ ಹತ್ತಲಿಲ್ಲ, ಕುಡುಕ ಗಂಡ ಮಾತ್ರ ಜವಾಬ್ದಾರರು.  ಶಿಕ್ಷಣ ವ್ಯವಸ್ಥೆ, ಶಾಲೆ, ಶಿಕ್ಷಕರು, ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಯಾವುದೇ  ದೋಷಾರೋಪಣೆ ಇಲ್ಲ. ತಮ್ಮ ಹಣೆ ಬರಹವನ್ನು ಮಾತ್ರ  ಹಳಿದುಕೊಳ್ಳುತ್ತಾರೆ.

**ಮತ್ತೊಂದು ಪ್ರಸಂಗ ನೆನಪಾಗುತ್ತಿದೆ.** ಇದು ಕೂಡಾ ಕುಡುಕ ಅಪ್ಪನ ಕಾರಣದಿಂದಾಗಿ ಆದ ಮದುವೆ ಎನ್ನಲಾಗುತ್ತಿದೆ. ೧೫ ನೆಯ ವಯಸ್ಸಿಗೆ ಮದುವೆಯಾಗಿ ೬ ತಿಂಗಳಿನಲ್ಲಿಯೇ ವಿಧವೆಯಾದ ಹುಡುಗಿ ಈಗ ೨ನೆಯ ಪಿ ಯು ಸಿ ಯಲ್ಲಿ ಓದುತ್ತಿದ್ದಾಳೆ.  ಶ್ರೀಮಂತ ಗಂಡ ಮದುವೆಯಾದ ೬ ತಿಂಗಳಿನಲ್ಲಿಯೇ ಅಫಘಾತವೊಂದರಲ್ಲಿ ಮೃತಪಟ್ಟ. ಟೈಲರಿಂಗ್ ವೃತ್ತಿಯೊಂದಿಗೆ ತವರು ಮನೆಯಲ್ಲಿ ತಾಯಿಯೊಂದಿಗೆ ಜೀವನ ಸಾಗಿಸುತ್ತಿದ್ದಾಳೆ. ಕಣ್ಣೀರಿನ ಕೋಡಿ ಹರಿಸುತ್ತಾ ಗಂಡನೊಂದಿಗೆ ಬದುಕಿದ್ದ ಬಣ್ಣದ ಪುಟಗಳನ್ನು ತೆರೆದಿಡುತ್ತಾಳೆ. ' ನಾನೇನು ತಪ್ಪು ಮಾಡಿದೆ? ನನ್ನನ್ನೇಕೆ ಅರಿಶಿನ ಕುಂಕುಮಕ್ಕೆ ಯಾರೂ ಕರೆಯುವುದಿಲ್ಲ ಎಂದು ಪ್ರಶ್ನಿಸುವ ಆಕೆಯ ಮಾತಿನಲ್ಲಿ ಅದೆಷ್ಟು ನೋವು ಮಡುಗಟ್ಟಿರಬಹುದು.? ಈಶಾನ್ಯ ಕರ್ನಾಟಕದ ಈ ಭಾಗದಲ್ಲಿ ಅದೆಷ್ಟು ಹಬ್ಬ ಹುಣ್ಣಿಮೆ, ವೃತ, ಉಪವಾಸಗಳು. ಹೀಗಿರುವಾಗ ಆಕೆ ಅದೆಷ್ಟು ಯಾತನೆ ಅನುಭವಿಸುತ್ತಿರಬಹುದು. ಬಹಿಷ್ಕ್ರತೆ ಎಂಬ ಭಾವನೆ ಕಾಡಬಹುದು. ಆಕೆಯ ನೋವಿನ ಪ್ರಸಂಗವನ್ನು ನನ್ನೊಂದಿಗೆ ಹಂಚಿಕೊಂಡ ಪಕ್ಕದ ಮನೆಯ ಪದ್ಮಾ ಮುಗ್ದವಾಗಿ ಪ್ರಶ್ನಿಸಿದ್ದಳು –  ನಾವು ಭಾರತದಲ್ಲಿ ಹುಟ್ಟಿರುವುದೇ ತಪ್ಪಾ? ಇನ್ನೊಂದು ಮದುವೆಯಾಗುವಂತಿಲ್ಲ, ಚಿಕ್ಕ ವಯಸ್ಸಿಗೇ ಮದುವೆ, ಮದುವೆಯಾಗಿದ್ದರೂ ಗಂಡನ ಕಾಟ, ಹಿಂಸೆ. ಹೆಣ್ಣು ಮಕ್ಕಳದು ಇದೆಂತಹಾ ಬದುಕು? ಗಂಡ ಏನೇ ಮಾಡಿದರೂ ಅವುಗಳನ್ನು ಅನುಭವಿಸಬೇಕೇ? ಬದುಕಿನುದ್ದಕೂ ಗಂಡ ಬೇಕಲ್ಲವೇ ? ಅವಳ ಇಂತಹಾ ಪ್ರಶ್ನೆಗಳಿಗೆ  ಸಂಪ್ರದಾಯ, ಸಮಾನತೆ ಇತ್ಯಾದಿಗಳ ಸುತ್ತಮುತ್ತ ನಮ್ಮ ಚರ್ಚೆ ನಡೆಯಿತು.

ಆದರೆ ತಮ್ಮದಲ್ಲದೆ ತಪ್ಪಿಗೆ ಹೆಣ್ಣುಮಕ್ಕಳ ಬದುಕನ್ನು ನಿರ್ಜೀವಗೊಳಿಸುವ  ಇಂತಹಾ ಮದುವೆಗಳಿಗೆ  ಯಾರು ಹೊಣೆ? ಇಂತಹವರ ಬದುಕನ್ನು ಹಸನಾಗಿಸಲು ನಾವೆಷ್ಟರ ಮಟ್ಟಿಗೆ ಕೊಡುಗೆಯನ್ನು ನೀಡುತ್ತಿದ್ದೇವೆ?

***

## 22. ಇದು ಬರೀ ನೀರಲ್ಲ, ಜೀವ ಜೀವಗಳ ಬೇರು, ಉಸಿರು

**–ರಾಘವೇಂದ್ರ. ಬಿ. ತಳಕಲ್**

ಈ ಪ್ರಕೃತಿಯಲ್ಲಿ ಮನುಷ್ಯನದು ವಿಭಿನ್ನ ಜೀವನ ಶೈಲಿ. ತನ್ನ ಜಾಣತನ, ವಿಶಿಷ್ಟ ಆಲೋಚನಾ ಲಹರಿಗಳ ಬಲದಿಂದ ಅಗಾಧ ಪ್ರಗತಿಯನ್ನು ಕಾಣುತ್ತಾ, ಇತರೆ ಜೀವಸಂಕುಲದ ಮೇಲೆ ಹಿಡಿತವನ್ನು ಸಾಧಿಸುತ್ತಾ ತನ್ನ ಉಳಿವಿಗೆ ಧಕ್ಕೆಬಾರದಂತೆ ನೋಡಿಕೊಂಡಿದ್ದಾನೆ. ಆದರೆ, ತನ್ನ ಈ ಸ್ವಾರ್ಥದ ನಡುವಳಿಕೆಗಳಿಂದ ತನಗೆ ತಿಳಿದೂ, ತಿಳಿಯದೆನೇ ಅಮೂಲ್ಯ ಸಂಪನ್ಮೂಲಗಳನ್ನು ವ್ಯರ್ಥಮಾಡುತ್ತಾ, ವಿವೇಚನೆಯಿಲ್ಲದೆ ಕಲುಷಿತಗೊಳಿಸುತ್ತಾ ಭಾವಿ ಪೀಳಿಗೆಗೆ ಮಾಡಬಾರದ ದ್ರೋಹ ಮಾಡುತ್ತಿದ್ದಾನೆ. ಇದರಿಂದ ಕಷ್ಟಗಳನ್ನು ಕೈ ಬೀಸಿ ಆಹ್ವಾನಿಸಿದಂತಾಗಿದೆ.

"ಸಬಲ ಅಥವಾ ಜಾಣ ಜೀವರಾಶಿಗಳಾವುವೂ ಸೃಷ್ಟಿಯಲ್ಲಿ ನಿರಂತರವಾಗಿ ಅಸ್ತಿತ್ವವನ್ನು ಉಳಿಸಿಕೊಳ್ಳಲಾರವು... ಆದರೆ ಪರಿವರ್ತನೆಗಳಿಗನುಗುಣವಾಗಿ, ಕಾಲಕ್ಕೆ ತಕ್ಕಂತೆ ಜೀವನ ವಿಧಾನಗಳನ್ನು ಬದಲಿಸಿಕೊಳ್ಳುವ ಸಾಮರ್ಥ್ಯ ಹೊಂದಿರುವ ಜೀವರಾಶಿಗಳಿಗೆ ಮಾತ್ರ ಉಳಿಗಾಲ" ಎಂದು ಅರಿಸ್ಟಾಟಲ್ ಹೇಳಿದ್ದಾರೆ.

ನಿತ್ಯ ಜೀವನದಲ್ಲಿ ತಿಳಿಯದೇ ಮಾಡುವ ತಪ್ಪಿಗಾಗಿ ಹಾಗೂ ನಿರ್ಲಕ್ಷಗಳಿಂದಾಗಿ ಕೊನೆಯಿಲ್ಲದಂತಹ ಕಷ್ಟ–ನಷ್ಟಗಳು ಎದುರಾಗುತ್ತಿವೆ ಎಂಬುದನ್ನು ಅಲ್ಲಗಳೆಯಲಾಗದು. ತಪ್ಪುಗಳನ್ನು ತಿದ್ದಿಕೊಳ್ಳುತ್ತಾ, ಪರಿಣಿತರ ಸಲಹೆ–ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಿ, ಅವುಗಳನ್ನು ಅಳವಡಿಸಿಕೊಳ್ಳುವ, ಪಾಲಿಸುವ ದಿಟ್ಟತನ ತೋರಿದಲ್ಲಿ ಸಂಕಷ್ಟಗಳಿಗೆ ತಕ್ಕಮಟ್ಟಿಗೆ ತಡೆಯಾಗಬಹುದು. ನಮಗೆ ತಿಳಿದ ವಿಷಯಗಳನ್ನು/ಸಂಗತಿಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಾ ಸಮಾಜದ ಅಭ್ಯುದಯಕ್ಕೆ ಚಿಂತಿಸುವುದು ಒಂದು ಉತ್ತಮ ಹಾಗೂ ಉನ್ನತ ಸಂಸ್ಕಾರ ಎನಿಸಿಕೊಳ್ಳುತ್ತದೆ. ನೀರು, ಇಂಧನಗಳಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಜಾಣ್ಮೆಯಿಂದ, ಹಿತ–ಮಿತವಾಗಿ ಬಳಸಿಕೊಳ್ಳಬೇಕಾಗಿದೆ. ಜೊತೆಗೆ ಪರಿಸರ ಮಾಲಿನ್ಯವಾಗದಂತೆ ಜಾಗುರೂಕತೆವಹಿಸುವುದೂ ಸಹ ನಮ್ಮ ಮುಂದಿರುವ ತತ್‌ಕ್ಷಣದ ಸವಾಲಾಗಿದೆ.

ಮಾನವನ ಬದುಕು ಆರಂಭವಾಗಿದ್ದೇ ನೀರಿನಿಂದ ಎಂಬುದು ಅನೇಕ ಶಾಸ್ತ್ರಜ್ಞರ ನಿರ್ವಿವಾದದ ಮಾತು. ತಾಯಿ ಗರ್ಭದಲ್ಲಿ ನಾವೆಲ್ಲರೂ ಉಸಿರಾಡುವುದು ಸ್ರಾವ ಜಲಗಳಲ್ಲೇ. ನೀರಿಲ್ಲದೇ ಜಗತ್ತಿನಲ್ಲಿ ಯಾವ ಜೀವಿಯೂ ಬದುಕುಳಿಯಲಾರದು. ಪ್ರಾಣಿ–ಪಕ್ಷಿಗಳು, ಗಿಡ–ಮರಗಳೆಲ್ಲವೂ ಸೇರಿದಂತೆ ಜೀವ ಸಂಕುಲವೆಲ್ಲಾ ನೀರಿನ ಮೇಲೆ ಆಧಾರವಾಗಿ ಬದುಕು ಸಾಗಿಸುತ್ತಿವೆ. ಮಾನವ ಶರೀರದ ಶೆ.೬೫%ರಷ್ಟು ಭಾರ ನೀರಿನದೇ ಆಗಿದೆ.



ನೀರಿಗೆ ಬರ ಬಂದರೆ, ಜನ–ಜೀವನ ಬುಡಮೇಲಾಗುತ್ತದೆ. ಒಂದು ಆಂದೋಲನ, ಒಂದು ಆದರ್ಶದಂತೆಯೇ ನೀರಿಗೂ ಸಹ ಜನ ಸಮೂಹಗಳನ್ನು ಅಲುಗಾಡಿಸುವ ಶಕ್ತಿಯಿದೆ. ಜಗತ್ತಿನ ನಾಲ್ಕನೇ ಮೂರು ಭಾಗ ಜಲಾವೃತವಾಗಿದ್ದರೂ, ಪ್ರಯೋಜನವೇನು? ಕೇವಲ ಒಂದೇ ೧ ಪ್ರತಿಶತದಷ್ಟು ಮಾತ್ರ ತಾಜಾ, ಶುದ್ಧ ಕುಡಿಯುವ ನೀರು ಲಭ್ಯವಿದೆ ಎಂಬುದು ತಿಳಿದಿರುವ ಸತ್ಯ. ಅದರಲ್ಲೂ ನಮಗೆ ಲಭ್ಯವಾಗುವುದು, ಕೇವಲ ಶೇ.೦.೦೮ರಷ್ಟು ಮಾತ್ರ ಎಂಬುದು ಕಳವಳಕಾರಿ ಸಂಗತಿ. ಜಗತ್ತಿನ ಎಲ್ಲಾ ನೀರು ಒಂದು ಗ್ಲಾಸಿನಲ್ಲಿ ಇದೆ ಎಂದಾದರೇ ಅದರಲ್ಲಿ ನಮಗೆ ಕುಡಿಯಲು ಯೋಗ್ಯವಾದದ್ದು ಅರ್ಧ ಚಮಚಕ್ಕಿಂತಲೂ ಕಡಿಮೆ. ಇದೇ ನಮ್ಮ ಎಚ್ಚರಿಕೆಗೆ ಕಾರಣವಾಗಬೇಕಿರುವ ಅಂಶ.

ಮತ್ತೊಂದು ಮಹಾಯುದ್ಧ ನಡೆದಲ್ಲಿ ಅದು ನೀರಿಗಾಗೇ ಎಂಬ ಕೆಲವರ ಮಾತು ಉತ್ಪ್ರೇಕ್ಷೆಯೆನಿಸದು. ಈಗಾಗಲೇ ನಾವು ಕಂಡಿರುವಂತೆ, ಕಾಣುತ್ತಿರುವಂತೆ ಗ್ರಾಮ–ಗ್ರಾಮಗಳು, ರಾಜ್ಯ–ರಾಜ್ಯಗಳು, ಅಷ್ಟೇ ಏಕೆ ಅಕ್ಕ–ಪಕ್ಕದವರು ನೀರಿಗಾಗಿ ಬೀದಿಗಿಳಿದು ಜಗಳಮಾಡುವುದು ನೀರಿನ ಪ್ರಾಮುಖ್ಯತೆಯ ಸತ್ಯದರ್ಶನ ಮಾಡಿಸುವ ಸಂಗತಿ. ಹೆಚ್ಚುತ್ತಿರುವ ಜನಸಂಖ್ಯೆ, ಬೆಳೆಯುತ್ತಿರುವ ನಗರಗಳು, ಕೈಗಾರಿಕೆಗಳಿಂದಾಗಿ ನೀರಿನ ಅಭಾವ ಹೆಚ್ಚುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ವಿವೇಚನೆರಹಿತ ಬಳಕೆ, ನಿರ್ವಹಣೆ, ಆಳ ಸೇರುತ್ತಿರುವ ಅಂತರ್ಜಲ, ಮಳೆಯ ಕೊರತೆಯಂತಹ ಕಾರಣಗಳು ಕಣ್ಣೀರು ತರಿಸುತ್ತವೆ. ಭವಿಷ್ಯದಲ್ಲಿ ಈ ಸಮಸ್ಯೆ ಮತ್ತಷ್ಟು ಉಲ್ಬಣಿಸುವ ಸಾಧ್ಯತೆ ಕಡೆಗಣಿಸಿತವಲ್ಲ. ಹಾಗಾಗಿ, ಸ್ವತಃ ನಾವು ಕೆಲವು ಮುಂಜಾಗೃತೆಗಳನ್ನು ಪಾಲಿಸುತ್ತಾ, ಇತರರಿಗೆ ಅರಿವು ಮೂಡಿಸುತ್ತಾ ಬದುಕುವುದು ಸೂಕ್ತ ಎಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ.

ಹೀಗೆ ಮಾಡಿದರೆ ಹೇಗೇ? ಖಂಡಿತ ಒಳಿತಾಗುತ್ತದೆ...!

- ಸ್ನಾನಕ್ಕಾಗಿ ನಲ್ಲಿಯ ಕೆಳಗೆ ಸ್ನಾನ ಮಾಡುವ ಬದಲು, ಬಕೇಟ್‌ನಲ್ಲಿ ನೀರು ತುಂಬಿಸಿಕೊಂಡು ಮಗ್ಗಿನಿಂದ ಸ್ನಾನಮಾಡುವುದು
- ಹಣ್ಣು–ತರಕಾರಿಗಳನ್ನು ಪಾತ್ರೆಯಲ್ಲಿ ತುಂಬಿಟ್ಟ ನೀರಿನಲ್ಲಿ ತೊಳೆಯುವುದು


- ಅಪಾಯವಲ್ಲದ, ಬಳಸಿದ ನೀರನ್ನು ಗಿಡ-ಬಳ್ಳಿಗಳಿಗೆ ಹರಿಯುವಂತೆ ಮಾಡುವುದು
- ಸೋರುವ ನಲ್ಲಿಗಳಿದ್ದಲ್ಲಿ ಆದಷ್ಟು ಶೀಘ್ರ ದುರಸ್ತಿ ಮಾಡುವುದು, ಹನಿ ಹನಿಗೂಡಿದರೇ ಹಳ್ಳ
- ಷೇವಿಂಗ್ ಮಾಡುವಾಗ, ಹಲ್ಲು ಉಜ್ಜುವಾಗ ನಲ್ಲಿಯ ನೀರು ವ್ಯಥಾ ಪೋಲಾಗದಂತೆ ನಲ್ಲಿಯ ಹರಿವನ್ನು ನಿಲ್ಲಿಸುವುದು.
- ಮನೆಗಳಲ್ಲಿ ಮತ್ತು ಇತರೆಡೆ ಸಾಧ್ಯವಾದಷ್ಟು ಚಿಕ್ಕ-ಚಿಕ್ಕ ಷವರ್‌ಗಳನ್ನು ಬಳಸುವುದು
- ಕೈ-ಕಾಲುಗಳನ್ನು ತೊಳೆಯುವಾಗಲೂ ಸಹ ಎಚ್ಚರವಹಿಸುವುದು
- ಅನಾವಶ್ಯಕವಾಗಿ ಟಾಯ್ಲೆಟ್‌ಗಳಲ್ಲಿ ಫ್ಲಷ್‌ನ್ನು ಒತ್ತದಿರಿ
- ಕುಡಿಯುವ ನೀರು, ನೀರಿನ ಮೂಲ ಎಂದೂ ಕಲುಷಿತವಾಗದಂತೆ ನೋಡಿಕೊಳ್ಳಿ
- ಪ್ರತಿ ಮನೆಮನೆಯಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಿ, ಮಳೆನೀರಿನಿಂದ ಅಂತರ್ಜಲ ಹೆಚ್ಚಿಸಬಹುದು
- ಹಾಳು ಬಿದ್ದ ಬಾವಿಗಳು, ಕೆರೆಗಳ ಹೂಳೆತ್ತಿಸಿ ಪುನರ್ ಬಳಕೆಯಾಗುವಂತೆ ಮಾಡುವುದು
- ಕುಂಬಮೇಳ, ಪುಷ್ಕರಣೆಯಂತಹ ಸಂಧರ್ಭಗಳಲ್ಲಿ ಶಾಂಪೂಗಳನ್ನು ಬಳಸದಿರುವುದು
- ಗಣೇಶ ಹಬ್ಬದಲ್ಲಿ ರಾಸಾಯನಿಕ ರಹಿತ ಮಣ್ಣಿನ ಮೂರ್ತಿಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು
- ನೀರಿನ ಉಳಿತಾಯವನ್ನು ಮಕ್ಕಳಲ್ಲಿ ಒಂದು ಪ್ರವೃತ್ತಿಯಾಗುವಂತೆ ನೋಡಿಕೊಳ್ಳುವುದು
- ಶಾಲೆಗಳಲ್ಲಿ ನೀರು ಹರಿದು ಪೋಲಾಗುತ್ತಿದ್ದಲ್ಲಿ, ವಿದ್ಯಾರ್ಥಿಗಳು ಅದನ್ನು ಶಿಕ್ಷಕರ ಗಮನಕ್ಕೆ ತಂದು ಸರಿಪಡಿಸುವಂತೆ ಅವರನ್ನು ಪ್ರೋತ್ಸಾಹಿಸುವುದು
- ಬೊಂಬೆಯಾಟ, ಪಾತ್ರಾಭಿನಯ, ಬೀದಿ ನಾಟಕಗಳಂತಹ ಮಾಧ್ಯಮಗಳ ಮೂಲಕ ಪ್ರಚಾರಮಾಡುವುದು

ಬಿಂದು ಬಿಂದುಗಳು ಸೇರಿ ಸಿಂಧು
ಪ್ರತಿಯೊಬ್ಬರ ಪ್ರಯತ್ನಗಳು ಒಗ್ಗೂಡಿ ಬಂದು
ಧರೆಗೆ ಹಸಿರ-ಜಲ-ಸಿರಿ-ಭಾಗ್ಯ ತಂದು
ಆಗೋಣ ಜೀವ ಸಂಕುಲಗಳ ಆತ್ಮೀಯ ಬಂಧು
ಬದುಕಿಸಿ ಬದುಕಬೇಕಿದೆ ನಾವೆಲ್ಲರೂ ಇಂದು!

***

## 23. "ನಾನು" ಎಂಬ ವ್ಯಾಮೋಹದ ವರ್ತುಲದೊಳಗೆ...

• ಭವ್ಯಾ ಬಿ.



**"**ಮನುಷ್ಯನಿಗಿಂತ ಭೂಮಿಯು ಹಲವು ಪಟ್ಟು ದೊಡ್ಡದು, ಆ ಭೂಮಿಗಿಂತಲೂ ಹತ್ತು ಪಟ್ಟು ದೊಡ್ಡದಾದ ಅಗ್ನಿಯು ಭೂಮಿಯನ್ನು ಆವರಿಸಿದೆ, ಅಗ್ನಿಗಿಂತಲೂ ಹತ್ತು ಪಟ್ಟು ದೊಡ್ಡದಾದ ವಾಯುವು ಅಗ್ನಿಯನ್ನು ಆವರಿಸಿದೆ, ವಾಯುವಿಗಿಂತಲೂ ಹತ್ತು ಪಟ್ಟು ದೊಡ್ಡದಾದ ಆಕಾಶವಿದೆ. ಆ ಆಗಸಗಿಂತಲೂ ಹತ್ತು ಪಟ್ಟು ದೊಡ್ಡದಾದ ಮನುಷ್ಯನ ಅಹಂಕಾರ ಇಡೀ ವಿಶ್ವವನ್ನೇ ಆವರಿಸಿದೆ**"**... ಇದನ್ನು ನಾನು ಎಲ್ಲೋ ಓದಿದ್ದು, ಆದರೆ ಈ ಸಾಲುಗಳು ಎಲ್ಲೋ ಒಂದು ಕಡೆ ನನ್ನ ಮನಸ್ಸನ್ನು ಬಹಳ ಚಿಂತನೆಗೆ, ಆಲೋಚನೆಗೆ ಅಚ್ಚಿತು ಮತ್ತು ನನ್ನ ಮನಸ್ಸನ್ನು ಬಹಳ ಕಾಡಿತು.

ಇಂದು ಮನುಷ್ಯನು ವಿಜ್ಞಾನ- ತಂತ್ರಜ್ಞಾನ ಕ್ಷೇತ್ರದಲ್ಲಿ ಅಪರಿಮಿತ ಸಾಧನೆಯನ್ನು ಮಾಡಿದ್ದು ಇಡೀ ವಿಶ್ವವನ್ನೇ ಕ್ಷಣಮಾತ್ರದಲ್ಲಿ ನಾಶಮಾಡುವಂತಹ ಅಣುಬಾಂಬ್ ಗಳನ್ನು ತಯಾರುಮಾಡಿ ತಾನೇ ಗೆಲ್ಲಬೇಕು, ತಾನೇ ಇಡೀ ಜಗತ್ತಿನ ಅಧಿಪತ್ಯವನ್ನು ಸಾಧಿಸಬೇಕು ಎಂಬ ತವಕದಲ್ಲಿರುವ ಮಾನವ ಎಲ್ಲೋ ಒಂದು ಕಡೆ ತುಂಬಾ ಸ್ವಾರ್ಥಿಯಾಗಿ ನಿಂತಿದ್ದಾನೆ. ಮೊದಲು ಮಾನವ ನನ್ನ ದೇಶ ಅಂದರೆ ತನ್ನ ದೇಶಕ್ಕಾಗಿ ಏನಾದರು ಮಾಡಲು ಸಿದ್ದ ಎನ್ನುತ್ತಿದ್ದ, ಕಾಲ ಕ್ರಮೇಣ ತನ್ನ ಕುಟುಂಬ ಮಾತ್ರ ಮುಖ್ಯ ಎನ್ನುವಂತಾದ, ಆದರೆ ಇಂದು **ವ್ಯಕ್ತಿಕೇಂದ್ರಿತ ಸಮಾಜದ** ನಿರ್ಮಾಣ ವಾಗಿ ಕೇವಲ ತಾನು ಉಣ್ಣಬೇಕು, ತಾನು ಉಡಬೇಕು, ತಾನು ಮಾತ್ರ ಸಂತೋಷದಿಂದ

ಇರಬೇಕು. ತಾನು–ನಾನು ಎಂಬ ಅಹಂಕಾರದ ಕೆಸರಿನಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ. ಈ ಅಹಂಕಾರದ ಮದದಲ್ಲಿರುವ ಮನುಷ್ಯನಿಗೆ ಹಣದಿಂದ ತನಗೆ ಎಲ್ಲಾ ಸಿಗುತ್ತದೆ ಎಂಬ ಭ್ರಮೆಯಲ್ಲಿ ಮನೋಹರಿಯಾದ ಲಕ್ಷ್ಮಿಯ ಹಿಂದೆ ಓಡುತ್ತಿದ್ದಾನೆ. ಅದಕ್ಕಾಗಿ ತನ್ನನ್ನು ಇಷ್ಟು ವರ್ಷ ಸಾಕಿ ಸಲುಹಿದ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಕಳುಹಿಸಲೂ ಕೂಡ ಹಿಂಜರೆಯುತ್ತಿಲ್ಲ, ಮತ್ತೊಂದೆಡೆ ತಾನೇ ಜನ್ಮ ಕೊಟ್ಟ ಮಕ್ಕಳಿಗೆ ಸಮಯ ಕೊಡಲು ಸಾಧ್ಯವಿಲ್ಲದೆ ಕೇವಲ ಹಣಗಳಿಕೆಯ ವ್ಯಾಮೋಹದಲ್ಲಿ ಬಿದ್ದಿರುವ ಮನುಷ್ಯನು ವಸ್ತುಗಳಲ್ಲಿ ತನ್ನ ಸಂತೋಷವನ್ನು ಹುಡುಕುತ್ತಾ ಹುಡುಕುತ್ತಾ ತನ್ನ ಬಳಿಯಲ್ಲಿರುವ ಮನುಷ್ಯ ಸಂಬಂಧಗಳ ಬೆಲೆ ತಿಳಿಯದೇ ತನ್ನ ಎಲ್ಲಾ ಸಂಬಂಧ ಗಳನ್ನು ದೂರ ಮಾಡಿಕೊಂಡು ಏಕಾಂಗಿಯಾಗಿ ಅಂದರೆ ಎಲ್ಲರೂ ಇದ್ದರೂ "ಅನಾಥನ" ರೀತಿಯಾಗಿ ಬದುಕುತ್ತಿದ್ದಾನೆ. ಇಷ್ಟು ಮಾತ್ರವಲ್ಲದೇ ಇಂದು ಮನುಷ್ಯ ಜಾತಿ, ಧರ್ಮ ಎಂಬ ಪೆಂಡಂಭೂತಗಳನ್ನು ತನ್ನ ಬೆನ್ನಿಗೆ ಕಟ್ಟಿಕೊಂಡು ತಾನೇ ತನ್ನ ಕೈಯಾರೆ ತನ್ನ ಸಂತೋಷವನ್ನು ಕಳೆದುಕೊಳ್ಳುತ್ತಿದ್ದಾನೆ. ನೈತಿಕಮೌಲ್ಯಗಳು ಅಂಧಪತನದ ಹಾದಿ ಹಿಡಿದಿವೆ.

ಇಂದು ಕಲ್ಕತ್ತಾ, ಬಾಂಬೆ, ಬೆಂಗಳೂರಿನಂತಹ ಮಹಾನಗರಗಳಲ್ಲಿ ಜನರು ವಾರದ ೫ದಿನ ಚೆನ್ನಾಗಿ ದುಡಿದು ಉಳಿದ ಎರಡು ದಿನಗಳು ಕೇವಲ ಮೋಜು–ಮಸ್ತಿ ಯಂತಹ ಮನೋರಂಜನೆಯಲ್ಲಿಯೇ ತೊಡಗಿರುತ್ತಿದ್ದಾರೆ. ಮನರಂಜನೆ ತಪ್ಪಲ್ಲ, ಆದರೆ ಅತಿಯಾದ ಮೋಜು–ಮಸ್ತಿಗಳು ನಮ್ಮನ್ನು ಸೋಮಾರಿಗಳನ್ನಾಗಿ ಮಾಡುತ್ತದೆ. ಇದರಿಂದ ನನ್ನ ಮನಸ್ಸಿನಲ್ಲಿ ಬಹಳವಾಗಿ ಅನಿಸುವುದು ನಾವು ನಮಗೋಸ್ಕರ ಬದುಕುತ್ತಿಲ್ಲವೇ? ಮನುಷ್ಯನ ಸ್ವಾರ್ಥಕ್ಕೆ ಮುಕ್ತಿ ಯಾವಾಗ? ಸುಮ್ಮನೆ ಕುಂತು ಸೋಮಾರಿಯಾಗಿ ಬದುಕಿದರೆ ನಮ್ಮ ಬದುಕಿಗೆ ಅರ್ಥವಿದೆಯೇ? ಎಂದು.

ನಾನು ಇಲ್ಲಿ ಕೆಲವು ವಿಷಯಗಳನ್ನು ಹೇಳಲೇಬೇಕು, ಅದೇನೆಂದರೆ ನಮಗೆ ಜನ್ಮಕ್ಕೆ ಕಾರಣರಾದವರು ಯಾರೋ, ನಮಗೆ ವಿದ್ಯೆ ಕಲಿಸುವವರು ಯಾರೋ, ನಮಗೆ ಉದ್ಯೋಗ ನೀಡುವವರು ಯಾರೋ, ನಾವು ಸತ್ತಾಗ ನಮ್ಮನ್ನು ಮಣ್ಣು ಮಾಡುವವರು ಯಾರೋ,..ಇಲ್ಲಿನ ಯಾವ ಯಾರೋಗಳು ನಮಗೆ ಗೊತ್ತಿಲ್ಲದವರು. ಈ ಭೂಮಿಯ ಮೇಲೆ ನಾವು ಬರುವಾಗ ಏನನ್ನೂ ತಂದಿಲ್ಲ, ಇಲ್ಲಿಂದ ಹೋಗುವಾಗ ಏನನ್ನೂ ಕೊಂಡೊಯ್ಯುವುದಿಲ್ಲ, ಇಂತಹ ವಾಸ್ತವ ಸತ್ಯದ ಅರಿವಿಲ್ಲದೆ ಇಲ್ಲಿರುವ ಎಲ್ಲವೂ ನನ್ನದೇ ಎಂಬ ಭಾವನೆ–ಭ್ರಮೆಯಲ್ಲಿರುವ ಮನುಷ್ಯ ಆ ಭ್ರಮೆಯಿಂದ ಹೊರ ಬಂದು ಸ್ವಲ್ಪ ಸಮಯ ಕೊಟ್ಟು ತನ್ನ ಜೊತೆಗಿರುವ ಸಂಬಂಧಗಳನ್ನು ಅರ್ಥಮಾಡಿಕೊಂಡು ಅವರನ್ನು ಪ್ರೀತಿಯಿಂದ ಮಾತನಾಡಿಸುತ್ತಾ, ಅವರನ್ನು ಗೌರವಿಸುತ್ತಾ ಬದುಕು ಸಾಗಿಸಿದರೆ ಗಾಂಧೀಜಿಯವರ ಕನಸಾದ ರಾಮರಾಜ್ಯ ವಲ್ಲದಿದ್ದರು ಒಂದು ಶಾಂತಿಯುತ ಸಮಾಜದ ನಿರ್ಮಾಣವಾಗುತ್ತದೆ. ನಾವು ನಮ್ಮ ಮುಂದಿನ ಪೀಳಿಗೆಗೆ ಸುಸ್ಥಿರ–ಶಾಂತಯುತ ಸಮಾಜ ನಿರ್ಮಾಣದ ಉಡುಗೊರೆಯನ್ನು ನೀಡಬಹುದು. ಆಗ ಮನಷ್ಯನಲ್ಲಿರುವ ನಾನು ಎಂಬ ಭ್ರಮೆಯು ಸಾಯುತ್ತದೆ, ನೈತಿಕಮೌಲ್ಯಗಳು ಬೆಳೆಯುತ್ತವೆ ಮತ್ತು ಉಳಿಯುತ್ತವೆ.

***

## 24. ಗೊಂದಲದ ವಿಶ್ವ ಮಾನವ

**– ಗಿರಿಧರ ವೈದ್ಯ**

ನಾವು ಓದುವಾಗ ೨.೫ ಮಿಲಿಯನ್ ವರ್ಷಗಳ ಹಿಂದೆ ಮಾನವ ವಿಕಾಸ ಪ್ರಾರಂಭವಾಗಿದೆ ಎಂದು, ಪ್ರಸ್ತುತ ೩.೫ ಮಿಲಿಯನ್ ವರ್ಷಗಳ ಹಿಂದೆ ಮಾನವನ ವಿಕಾಸ ಶುರುವಾಗಿದೆ ಎಂದು ಲೂಸೀ ಎಂಬ ಪಳಿವಳಿಕೆ ಸಿಕ್ಕ ಮೇಲೆ ಹೇಳತಾ ಇದ್ದವೆ. ಆದರೆ ಮಾನವ ತನ್ನ ಊಟ ತಾನು ಹುಡುಕಲಿಕ್ಕೆ ಗೊಂದಲದಲಿದ್ದ ಹಸಿವಾದಗ ಗಡ್ಡೆಗೇಣಸು ಅಥಾವ ಮಾಂಸ, ತಪ್ಪಲು ತಿನ್ನೋದ ಎಂದು ಆಲೋಚಸಿ ಕೊನೆಗೆ ಪ್ರಾಣಿಗಳು



ತಿಂದು ಬಿಟ್ಟ ಮಾಂಸವನ್ನು ತಿನ್ನುತಿದ್ದ, ಕ್ರಮೇಣ ಪ್ರಾಣಿಗಳ ಬೇಟೆಯಾಡಿ ತಿನ್ನುತ್ತಾ, ಅದರಲ್ಲಿ ಕೂಡ ಗೊಂದಲ ಯಾವ ಪ್ರಾಣಿ ತಿನ್ನುವದು ಅವನ ಆರೋಗ್ಯಕೆ ಸರಿಹೋಗುವ ಹೊಂದಿಕೊಳ್ಳುವ, ನಂತರ ಪ್ರಾಣಿಗಳು ತಿನ್ನುವದು ಕಠಿಣವಾದಗ, ಆಲೋಚಿಸಿ ಯಾವ ಗಡ್ಡೆ ಗೇಣಸು, ತಿನ್ನುವದು. ಯಾವ ಹಣ್ಣುಗಳು ಆರೋಗ್ಯ ಸರಿಹೋಗುತ್ತೆ ಎಂಬ ಗೊಂದಲ ನಿವಾರಣೆ ಮಾಡಿಕೊಳ್ಳುತ್ತಾ ಹೊರಟ. ಯಾವ ಪ್ರಾಣಿಗಳು ಅವನಿಗೆ ತೊಂದರೆ ಕೊಡತವೆ ಯಾವ ಪ್ರಾಣಿಯ ಸಹಾಯ ಪಡೆಯಬಹುದು. ಕ್ರಮೇಣ ಅವನು ಯಾವ ಕಾಲದಲಿ ಹೇಗೆ ಇರಬೇಕು ಚಳಿಯಾದರೆ ಎನು ಮಾಡಬೇಕು, ಮಳೆ ಬಂದರೆ ಎನು ಮಾಡಬೇಕು ಅದು ಕೂಡ ಪ್ರಾಣಿಗಳಿಂದಲೆ ಕಲಿತ ಪ್ರಾಣಿ ಹೇಗೆ ಚರ್ಮದಿಂದ ತನ್ನ ದೇಹ ರಕ್ಷಣೆ ಮಾಡಿದೆ, ಹಾಗೆ ತಾನು ಕೂಡ ಮರದ ತೊಗಟೆಯಿಂದ ಮೈಮುಚ್ಚಿಕೊಳ್ಳತಾ ಬಟ್ಟೆಯ ಪರಿಕಲ್ಪನೆ ಶುರುಮಾಡಿಕೊಂಡ. ಈ ಗೊಂದಲಗಳು ಮಾನವನ ಚಿಂತನೆ ಹಚ್ಚಿದವು. ಆ ಚಿಂತನೆ ಮನುಷ್ಯನ ಮೆದುಳಿನ ಗಾತ್ರದ ಬದಲಾವಣೆಗೆ ಕಾರಣವಾಯಿತು ದೊಡ್ಡದಾಗುತ್ತಾ ಹೋಯಿತು. ಮೊದಲು ಹಸಿ ಮಾಂಸ ತಿನ್ನತಾ ಇದ್ದ, ಕ್ರಮೇಣ ಬೆಂದ ಮಾಂಸ ತಿನ್ನುವದು ಕಲಿತ. ಹಣ್ಣುಗಳು ತಿನ್ನಲು ತೋಟ ಮಾಡುವ ಪರಿಕಲ್ಪನೆ ಪ್ರಾರಂಭ, ನಂತರ ಕೃಷಿ ಮಾಡುವದು ಕಲಿತ. ತಾನು ಬದುಕಲಿಕ್ಕೆ ಎದುರಾದ ಗೊಂದಲಗಳನ್ನ ಪರಿಹರಿಸಿಕೊಳ್ಳಲು ಮಾಡಿದ ಪ್ರಯತ್ನ ಅವನಿಗೆ ಜ್ಞಾನವಾಗಿ ಸಿಕ್ಕಿತು ಆ ಜ್ಞಾನ ಸಂಪಾದಿಸುವದು ಇವತ್ತು ನಿ ಂತಿಲ್ಲಾ. ಮೆದುಳಿಗೆ ಮತ್ತು ಬುದ್ದಿಗೆ ಸಂಭಂದವಿದೆ. ಆಲೋಚನೆ


ಮಾಡಿದಂತೆ ಮೆದುಳಿನ ಗಾತ್ರ ಹೆಚ್ಚಾಗುತ್ತೆ. ಜಗತ್ತಿನಲ್ಲಿ ಒಂದೆ ತರಹದ ಜನರು ಯಾಕೆ ಇಲ್ಲಾ? ಬಣ್ಣ ಬೇರೆ, ಉಡುಗೆ ತೊಡಿಗೆ ಬೇರೆ, ಊಟ ಬೇರೆ, ಯಾಕೆ ಬೇರೆ ಬೇರೆ ಊಟ ಮಾಡುವದು ಕಲಿತಿದ್ದವೆ.  ಯಾರು ಕಲಿಸಿದ್ದು, ಎಲ್ಲಾ

ವಿಷಯ ಗೊತ್ತಿದ್ದರು ಯಾಕೆ ಇವತ್ತು ಜೀವನಕ್ಕಾಗಿ ಪರದಾಡುತ್ತಾ ಇದ್ದೆವೆ. ಇವತ್ತು ಸಾಕಷ್ಟು ಗೊಂದಲಗಳು ವಿಜ್ಞಾನ (ತಂತ್ರಜ್ಞಾನ) ಬೆಳೆಯಲಿಕ್ಕೆ ಪ್ರೇರಣೆ ಕೊಡತಾ ಇವೆ. ಸೌರವ್ಯೂಹ ಹೇಗೆ ಆಯಿತು, ಗ್ರಹಗಳು ಹೇಗೆ ನಿರ್ಮಾಣವಾದವು. ಬೇರೆ ಗ್ರಹಗಳಲ್ಲಿ ಏನು ಇರಬಹುದು ಎಂಬ ಕುತೂಹಲವಿದೆ.  ಅಲ್ಲಿ ಜನರು ಜೀವಿಗಳು ಇರಬಹುದ ಎಂಬ ಗೊಂದಲವಿದೆ. ಭೂಮಿ ಗೋಲವಾಗಿದೆಯಾ? ಅಥಾವ ಚಪ್ಪಟೆಯಾಗಿದೆಯಾ ಎಂಬ ಗೊಂದಲ ಬಹಳ ದಿನಗಳವರೆಗೆ ಇತ್ತು. ಈಷ್ಟೆಲ್ಲಾ ಗೊಂದಲದಲಿದ್ದ ಮಾನವ ಎಲ್ಲಾ ಜೀವಿಗಳಿಗಿಂತ ಬುದ್ದಿವಂತ,ಜ್ಞಾನಿಯೆಂದು ಹೇಳುತ್ತೆವೆ, ಇವತ್ತು ಕೂಡ ಗೊಂದಲಗಳು ಇವೆ, ಪ್ರಾಣಿ ಮತ್ತು ಪಕ್ಷಿಗಳಿಗೆ ನಮ್ಮತರಹ ಗೊಂದಲವಿದೆಯಾ ಅವುಗಳಿಗೆ, ಈ ಎಲ್ಲಾ ಗೊಂದಲಗಳು ನಮಗೆ ಯಾಕೆ?  ನೀವೆ ಹೇಳಿ;

***

## 25. ಹನಿಗವಿತೆಗಳು

**ಹರೀಶ ಶೆಟ್ಟಿ ಬಂಡ್ಸಾಲೆ**



**ಜಾತಿ**

ಗರ್ಭದಲ್ಲಿ ಎಲ್ಲಿತ್ತು ಇದರ ಛಾಯೆ
ತಿಳಿವು ಮೂಡುವ ಮೊದಲೆ ಅಂಟಿಸಿ ಬಿಟ್ಟರು
ಹೆಸರಿನ ಮುಂದೆ ಇದನು;

ಪೋಣಿಸಿದರು ರೀತಿ ರೀವಾಜಗಳು ಮುತ್ತಿನ ಮುಳ್ಳುಗಳ
ಮೂಡತೆ ಹರಿದು ಅರಿವು ಎಂದೂ ಹೊರ ಬರದಂತೆ
ಬಂದರೂ ಅದರ ಅಂಶವು ನೆಪಥ್ಯಕ್ಕೆ ಸರಿಯದಂತೆ
ಸುತ್ತಿ ಬಳಸಿ ಅದನೆ ಬಳಸಿ ಸಮರ್ಥಿಸುವಂತೆ.

**ಹೊಸತು**

ಹೊಸ ಹೊಸತು ಬಂದತ್ತೆಲ್ಲಾ
ಇದ್ದ ಹೊಸತೆ ಹಳತಾಗುವುದು;
ಹಳತು ಕಳೆಯದ ಹೊರತು
ಬಂದಂತದ್ದು ಹೊಸತಾಗದು.

**ವ್ರತಭಂಗ**

ಹೀಗೆಕೆ ನೀನು ತಿಳಿದು ತಿಳಿದು
ಮೌನ ದೀವಟಿಗೆಯ ಉರಿಸಿ ಇಟ್ಟು ಅಂದ ನೋಡುತ್ತಿರುವೆ
ಸಲುಗೆಯಾ ನುಡಿಪುಷ್ಪ ಬಾಡಿಹೋಗಿ ವರುಷ ಸಂದಿದೆ;
ನಿನ್ನ ವ್ರತಭಂಗಕ್ಕಾಗಿ ವರ್ಷಧಾರೆಯು ಕಾದಿದೆ;
ಉರಿವ ಏಕಾಂತ ಜ್ವಾಲೆಗೆ
ಹರಿವ ಒಲುವೆ ನೀರ ಚುಮ್ಮಿಸದಾದೆಯಾ?

**ಚಲನೆ**

ಎಲ್ಲೆಲ್ಲು ಬರೀ ಚಲನೆ, ನಾ ಕಾಣೆ ಸಂಚಲನೆ
ಇಡೀ ಜಗತ್ತು ಹೆಪ್ಪುಗಟ್ಟಿದೆ;
ನಾನು ನಿಂತಿರುವುದಕ್ಕೋ, ನೀವು ನಿಂತಂತಿರುವುದಕ್ಕೋ ನಾನರಿಯೇ?

**ನನ್ನತನ**

ನನ್ನೊಳಗೆ ನನಗೆ ಜಾಗವಿಲ್ಲಾ
ಪರರ ಸಂತೋಷಿಸುವ ಸಲುವಾಗಿ;

ಒಮ್ಮೆ ಇಳಿದು ನೋಡಬೇಕು ನನ್ನ ಅಂತರ್ಯವ

ಕಟ್ಟಿಕೊಳ್ಳಬೇಕು ಯಾರಿಗು ನಿಲುಕದ “ನನ್ನತನವ’.

## 26. ಕತ್ತಲು ಬೆಳಕು

- **ಹನುಮಂತ ರಾಜು**



ಬದುಕಿನ ವಿಚಿತ್ರವನ್ನೊಮ್ಮೆ ಆತ್ಮಾವಲೋಕನ ಮಾಡಿಕೊಂಡರೆ, ಇದ್ದವರು ಬಹಳ ಬೇಗ ಕೇಳರಿಯದಂತೆ ಮಿಂಚಿ ಮಾಯವಾಗುವರು, ಕೆಲವರು ನೋಡನೋಡತ್ತಿದ್ದಂತೆಯೇ ನಮ್ಮನ್ನು ಅಗಲುವರು. ಕಣ್ಣಿನಿಂದ ಕಂಬನಿ ಧರೆಗಿಳಿಯುತ್ತಿದೆ ಎನ್ನುವಷ್ಟರಲ್ಲಿ ಮತ್ತೊಂದ್ಯಾವುದೋ ಕಿವಿಗೆ ಬಂದು ಪಿಸುಗುಡುವುದು ನೆನ್ನೆ ಇದ್ದವರು ಇಂದು ಇಲ್ಲ ಏನಾಗಿತ್ತೋ ಏನೋ ಪಾಪ! ಇತ್ಯಾದಿ ಇತ್ಯಾದಿ ಅವನ ಕಳೆ ಬರಹವನ್ನು ತಿದ್ದಿ ತೀಡಿ ರವಾನಿಸುವರು. ಯಾರಿಗೆ ಯಾವಾಗ ಏನಾಗುವುದೋ ಊಹಿಸಲು ಆಗದು ಬರುವುದನ್ನು ಬಂದ್ದಂತ್ತೆ ಸ್ವೀಕರಿಸಿ ಮುಂದೆ ಮುಂದೆ ಸಾಗಿದರೆ ಏಳು ಬೀಳಿನ ಸರಪಳಿಗಳ ಜೊತೆಗೆ ಬಂಡಿ ಉರುಳುತ್ತದೆ ಇಲ್ಲದಿದ್ದರೆ ಅದಕ್ಕೆ ನೆಲೆಯೇ ಇರುವುದಿಲ್ಲ.

ಈ ದಿನ ಬೆಳಗ್ಗೆ ಮಾತನಾಡಿಸಿದೆ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದೇನೆ ಎಂದವರು ಮತ್ತೆ ಮದ್ಯಾಹ್ನದ ಅಷ್ಟರಲ್ಲಿ ಐಸಿಯು ವಾರ್ಡ್‌ಗೆ ಶಿಫ್ಟ್ ಆಗಿದ್ದಾರೆ ಇಷ್ಟೇ ಸಾಕಲ್ಲವೆ ಮಳೆ ಹನಿಯ ಸಿಹಿ ಹಂಚಿನ ಸವಿ ಅದು ಮಾಸುವ ತನಕ, ಅದು ಒಮ್ಮೆ ಬೋರ್ಗರಿಯಲು ಶುರು ಮಾಡಿದರೆ ಭಯದ ಜೊತೆ ಜೊತೆಯಲ್ಲಿಯೇ ದುಗುಡ ಮನೆ ಮಾಡುತ್ತದೆ ಅದು ಹೋಗೆಂದರೂ ಹೋಗದು ಒಮ್ಮೊಮ್ಮೆ ಯಮರಾಯನಿಗೂ ಕೂಡ ಮಳೆಯ ಜೊತೆ ನಂಟಿರುತ್ತದೆ ಅದು ಯಾವಾದ ಪಾಶವನ್ನು ತಂದು ನಮ್ಮ ಮುಂದೆ ನಿಲ್ಲಿಸುತ್ತದೋ ನಮಗೆ ತಿಳಿಯದು ಎಲ್ಲದಕ್ಕು ಒಗ್ಗಿಕೊಳ್ಳಬೇಕು, ನಾವು ಬದುಕುತ್ತಿರುವುದು ಕತ್ತಲು ಬೆಳಕಿನ ನಡುವೆ. ಕತ್ತಲಾದರೆ ಎಂದೂ ಸುಮ್ಮನೆ ಕುಳಿತುಕೊಳ್ಳುವುದಿಲ್ಲ ಮನೆಯ ಮೂಲೆಯನ್ನು ಹುಡುಕಾಡಿ ದೀಪದ ಬುಟ್ಟಿಗೆ ಬೆಂಕಿ ಕಡ್ಡಿಯನ್ನು ಗೀರಿ ಬತ್ತಿಗೆ ಶಾಕ ಕೊಡುತ್ತೇವೆ ಅದು ನಿಧಾನವಾಗಿ ಸ್ವಲ್ಪ ಸಮಯದ ತರುವಾಯ ಪ್ರಕರವಾದ ಬೆಳಕಿನೊಂದಿಗೆ ಎಣ್ಣೆಯನ್ನು ತಿನ್ನುತ್ತಾ ಮನೆಯನ್ನು ಬೆಳಗುತ್ತದೆ. ಮನಸ್ಸು ಕತ್ತಲೆಯಲ್ಲಿ ಇದ್ದರೂ ಮನೆಯಲ್ಲಿರುವವರ ಮುಖ ನಮಗೆ ಕಾಣುತ್ತದೆ. ಅಯ್ಯೋ! ಕತ್ತಲೂ ಇನ್ನೂ ಇರಬಾರದೆ ಎಂದೆನಿಸುತ್ತಿತ್ತು ನನ್ನ ಮನಸ್ಸು.

ಬದುಕಿಗೆ ಎರಡೆ ಮುಖ ಒಂದು ಕತ್ತಲು ಮತ್ತೊಂದು ಬೆಳಕು ಇವೆರಡರ ನಡುವೆ ಜೀವನದ ದಿನನಿತ್ಯದ ಆಟಗಳು ಸಾಗುತ್ತವೆ. ಕೆಲವರು ಆಟ ಮುಗಿಸಿ ಬೇಗನೆ ಮನೆ ಸೇರುತ್ತಾರೆ ಮತ್ತೆ ಕೆಲವರು ಮನೆ ಸಿಗುವವರೆಗೆ ಆಟ ಆಡುತ್ತಲೇ ಇರುತ್ತಾರೆ. ಶಂಕ ಊದಿ ಜಾಗಟೆ ಭಾರಿಸುತಿದ್ದಾರೆ ಎಂದು ತಿಳಿಯಿತ್ತೆಂದರೆ ಯಾರೋ ಆಟವಾಡುವಾಗ ಔಟಾಗಿದ್ದಾರೆ ಎಂದು ತಿಳಿದುಕೊಳ್ಳಬೇಕು. ಔಟಾಗುವ ಮುಂಚೆ ನಮ್ಮ ಜೊತೆ ಚೆನ್ನಾಗಿ ಭಾಗಿಯಾಗಿದ್ದರು ಆದರೆ ಈಗ ಇಲ್ಲ. ಇದ್ದವರ ದಿಬ್ಬದ ಮೇಲೆ ಹೋದವರ ಗೋರಿಯ ಹೆಸರು ಅದನ್ನು ನೋಡಷ್ಟೇ ಸಮಾದಾನ ಪಟ್ಟುಕೊಳ್ಳಬೇಕು. ಯಾರ ಸಮಯ ಯಾವಾಗಲೋ ಯಾರಿಗೆ ಗೊತ್ತು. ಅದನ್ನು ಗೊತ್ತು ಪಡಿಸಿಕೊಳ್ಳಲು ಕೂಡ ಹೋಗಬಾರದು ಏಕೆಂದರೆ ಆಟದ ನಡುವೆ ಮಜಾ ಇರುವುದಿಲ್ಲ. ಬಂದಾಗ ಬರಲಿ ಎಂದು ಮುಂದೆ ನುಗ್ಗಬೇಕು ಆಗುವುದೆಲ್ಲ ಒಳ್ಳೆಯದಕ್ಕೆ ಎಂದು ತಿಳಿದು ಸಾಗೋಣ್ಣ ಮುಂದೆ ಸಾಗೋಣ್ಣ ನಾವು ನೀವು ಸೇರಿ ಒಂದಾಗಿ.

ಕಾಲನು ಕರೆವ ಗಳಿಗೆಯಲ್ಲಿ ಅವರ ಜೊತೆ ನಾನು ಇರೊದಿಕ್ಕೆ ಆಗಲಿಲ್ಲವಲ್ಲ ಎಂಬುದೊಂದೆ ನನಗೆ ಇರುವ ಚಿಂತೆ. ಎಲ್ಲಾ ಸಮಯದಲ್ಲೂ ಜೊತೆಗಿದ್ದೇ ಅವರಿಗೆ ಯಾವ ತೊಂದರೆಯಾದರು ಅವರನ್ನು ಬೆನ್ನಿನ ಮೇಲೆ ಕೂರಿಸಿಕೊಂಡು ಕರೆದೊಯ್ಯುತ್ತಿದ್ದೆ ಆದರೆ ಈ ದಿನ ಬೆಳ್ಳಿಗೆ ಪೋನ್ ಮಾಡಿ ‘ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದೇನೆ ಎಲ್ಲಿದ್ಯ ಯಾವಾಗ ಬರ್ತಿಯೋ’! ಎಂದು ಕೇಳಿದವರು ಮದ್ಯಾಹ್ನ ಆಗುವಷ್ಟರಲ್ಲಿ ಸೀರಿಯಸ್ ಆಗಿದೆ ಐಸಿಯು ನಲ್ಲಿ ಇಟ್ಟಿದ್ದಾರೆ ಎಂದು ನನ್ನ ಅಕ್ಕ ಪೋನ್ ಮಾಡಿದ ತಕ್ಷಣ ಮೈ ಎಲ್ಲಾ ಒಮ್ಮೆ ಕಂಪಿಸಿತು ದಂಗುಬಡಿದವನಾದೆ ದಿಕ್ಕು ತೋಚದ ದರಿದ್ರನಾದೆ. ‘ನಾಳೆ ಬರ್ತಿನಪ್ಪ ಭಯ ಪಡಬೇಡ’ ಎಂದು ಹೇಳಿದೆ ಆಯ್ತು ಬೇಗ ಬಾ ಎಂದು ಪೋನ್ ಕಟ್ ಮಾಡಿದರು. ನಾಳೆ ಹೋಗೋಣ ಎಂದು ಅಂದುಕೊಂಡು ನನ್ನ ಕೆಲಸದಲ್ಲಿ ನಾನು ತೊಡಗಿದೆ. ಅದು ಆಗೆಯೇ? ಯಾರಿಗೂ ಹೇಳಿ ಕೇಳಿ ಬರುವುದಿಲ್ಲ ಅದು ಎಂದು ಬರುವುದೋ ಅಲ್ಲಿಯ ತನಕ ಮುಂದುವರೆಯಲೇಬೇಕು. ಸಂಜೆಯಷ್ಟರಲ್ಲಿ ಚೇತರಿಸಿಕೊಳ್ಳುತ್ತಾರೆ ಎಂದುಕೊಂಡೆ ಆದರೆ ಅದು ವಿಧಿ ಲಿಖಿತ.

ಮನಸ್ಸಿಲ್ಲದ ಮನಸ್ಸಲ್ಲಿ ಬೆಂಗಳೂರು ಬಸ್ಸ್ ಹತ್ತಿದವನಿಗೆ ಅವರು ಚೆನ್ನಾಗಿ ಆಗುತ್ತಾರೆ ಎಂಬ ಸಂಪೂರ್ಣ ಭರವಸೆ ನನ್ನಲ್ಲಿ ಮನೆ ಮಾಡಿತ್ತು ಆದರೆ ಅದು ಹುಸಿಯಾಗಿ ಹೋಯ್ತು. ಬಸ್ಸಿನ ಹಿಂಬದಿಯ ಸೀಟಿನಲ್ಲಿ ಕುಳಿತು ಪ್ರಯಾಣಿಸುತ್ತಿದ ಅನ್ಯ ಮನಸ್ಕನಿಗೆ ನನ್ನ ಅಣ್ಣ ಪೋನ್ ಮಾಡಿ ವಿಷಯ ಮುಟ್ಟಿಸಿದರು. “ಅವರು ಇಲ್ಲ ಹೊರೊಟೋದ್ರ ನೀನು ಬೇಗ ಬಾ” ಎಂದು ಕೇಳುತ್ತಿದ್ದಂತೆಯೇ ಅರ್ದ ಸತ್ತವನಾದೆ ದೇಹ ಮಾತ್ರ ಕುಳಿತಿದೆ ಮನಸ್ಸು ನನ್ನ ತಂದೆಯ ಸುತ್ತ ಸುತ್ತುತ್ತಿದೆ. ನನ್ನ ಬದುಕಿನ ವಿಪರ್ಯಾಸವೆಂಬಂತೆ ನಾನು ಕುಳಿತ ಬಲಗಡೆಯ ಸೀಟಿನಲ್ಲಿ ಹನ್ನೆರೆಡು ವರ್ಷದ ಮಗ ತನ್ನ ತಂದೆಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತಿದ್ದಾನೆ ಇದನ್ನು ಒಮ್ಮೆ ನೋಡಿದ ತಕ್ಷಣ ಪೂರ್ತಿ ಸತ್ತುಹೋದೆ ತಂದೆಯನ್ನು ಕಳೆದುಕೊಂಡ ನನಗೆ ಅದುಮಿದ ದುಃಖದೊಂದಿಗೆ ರಾತ್ರಿ ಪ್ರಯಾಣ ಬೆಳೆಸಿದೆ. ಯಾರ ಜೊತೆಯಲ್ಲಿ ಹೇಳಿಕೊಳ್ಳಲಿ ಯಾರೊಂದಿಗೆ ಮಾತನಾಡಲಿ ಅರೆ ಪ್ರಜ್ಞಾವಸ್ಥೆಯ ಪಯಣಿಗನಾದೆ. ಬಸ್ಸು ಬಹಳ ದೂರ ಕ್ರಮಿಸಿದಂತೆ ನನ್ನ ಮನಸ್ಸು ಇನ್ನೂ ಹತ್ತಿರ ಹತ್ತಿರ ಸಮೀಪಿಸುತ್ತಿದೆ ತಂದೆಯನ್ನು ನೋಡುವ ಹಂಬಲ ಹೆಚ್ಚಾಗುತ್ತಿದೆ.

ರಾತ್ರಿಯ ಕಾರ್ಯಗಳು ಮುಗಿಯುತ್ತಿದ್ದಂತೆ ನೆನ್ನೆ ಮುಳುಗಿದ ಸೂರ್ಯ ಮತ್ತೆ ನಿದಾನವಾಗಿ ಕಿರಣಗಳನ್ನು ಹೊರಸೂಸುತ್ತಾ ಆಗಸದ ಮೇಲೆರತೊಡಗಿದನು ಆದರೆ ನೆನ್ನೆ ಮಲಗಿದ ಅಪ್ಪ ಮತ್ತೆ ಏಳಲೇ ಇಲ್ಲ ಇದೇ ತಾನೆ ಬದುಕಿನ ವೈಚಿತ್ರ. ಬಳಲಿ ಬೆಂಡಾಗಿ ಬಂದವನು ತಂದೆಯ ಪಾದವಿಡಿದು ನಮಸ್ಕರಿಸಿದೆ ಹುದುಗಲಾರದ ದುಃಖವನ್ನು ಹೊರಹಾಕದೆ ಎಲ್ಲರನ್ನು ಒಮ್ಮೆ ದಿಟ್ಟಿಸಿ ನೋಡಿದೆ ಅಪ್ಪನ ತಲೆಯ ಹತ್ತಿರ ಕುಳಿತ ತಾಯಿಯ ಮುಡಿಯ ತುಂಬಾ ಪೋಣಿಸಿದ ಹೂಗಳ ಸರಮಾಲೆ ನೇತಾಡುತ್ತಿದ್ದವು ಬಂದ ಮುತ್ತೈದೆಯರೆಲ್ಲ ಹೂ ಮುಡಿಸಿ ಅರಿಸಿಣ ಬಳಿದು ಹೋಗುತ್ತಿದ್ದರು ಕಣ್ಣಿರ ಧಾರೆ ಆಕೆಯ ಮನಸ್ಸನ್ನು ತೋಯ್ಸಿತ್ತು. ಇದಕ್ಕಿದಂತೆ ನನ್ನ ನರನಾಡಿಗಳಲ್ಲಿ ಮಿಂಚು ಸಂಚರಿಸಿದಂತಾಯ್ತು ಇದೇನಾ ಬದುಕಿನ ಮತ್ತೊಂದು ಮುಖ ಇದು ಬರುವವರೆಗೆ ಎಷ್ಟೊಂದು ಚೆನ್ನಾಗಿರುತ್ತದೆ ನಮ್ಮ ಬಾಳು ಬಂದಾಗ ಏಕೆ ಗೋಳು. ಚಟ್ಟದ ಜೊತೆಯಲ್ಲಿಯೇ ಸಾಗಿದೆ ಮುಗಿಯದ ಕತೆ ಇಂದು ಅವರು, ನಾಳೆ ನಾವು ಎಂಬ ಖುಷಿಯ ನಗೆಬೀರಿ. ಅಪ್ಪನ ಗೋರಿಯ ಮೇಲೆ ಬರೆಸಿದ ಶಾಸನವು ದಾರಿಹೋಕರನ್ನು ಒಮ್ಮೆ ಮೂಖ ವಿಸ್ಮಿತರನ್ನಾಗಿ ಮಾಡುತ್ತದೆ ಅಲ್ಲಿ ಓಡಾಡುವವರು ನಿಂತು ಅದನ್ನು ಓದಿ ಮುಂದೆ ಸಾಗುತ್ತಾರೆ. ಅದೇನಿರಬಹುದು? ಸಾಗೋಣ ಮುಂದೆ ಸಾಗೋಣ...

***

## 27. ಆಧುನಿಕತೆಯ ಆಚೆಗಿನ ಬದುಕು...

– ಗಣಪತಿ ಭಟ್

ಏನೋ ಗಡಿಬಿಡಿ, ಒತ್ತಡ, ಚಡಪಡಿಕೆ. ಯಾವುದಕ್ಕೂ ಸಮಯವೇ ಸಾಲುತ್ತಿಲ್ಲ ಎನ್ನುವ ಗೊಣಗಾಟ. ಕಷ್ಟಪಟ್ಟು ದುಡಿದರೂ ಇಷ್ಟಪಟ್ಟು ತಿನ್ನಲಾಗದೆ ಗಬಗಬನೆ ತಿಂದು ಓಡುವ ನೋಟ. ಇವೆಲ್ಲ ಇಂದಿನ ಬದುಕಿನ ಸಾಮಾನ್ಯ ದೃಶ್ಯಾವಳಿ. ಇಂತಹ ಬದುಕಿಗೆ ‘ಆಧುನಿಕತೆ’ ಎಂಬ ಹಣೆಪಟ್ಟಿ ಕಟ್ಟಿ ನಮಗೆ ನಾವೇ ಹೆಮ್ಮೆಪಟ್ಟುಕೊಳ್ಳುತ್ತೇವೆ.

ಅದು ಬೇಕು, ಇದು ಬೇಕು ಕಂಡದ್ದೆಲ್ಲ ಬೇಕೆನ್ನುವ ಆಸೆಯ ಕುದರೆಯೇರಿ ನೆಮ್ಮದಿಯ ನಡಿಗೆಯನ್ನೇ ಮರೆತಿದ್ದೇವೆ. ಅದನ್ನು-ಇದನ್ನು ಪಡೆಯುವುದರೊಳಗೆ ಆಯುಷ್ಯ, ಆರೋಗ್ಯವನ್ನು ಕಳೆದುಕೊಂಡು ಹೈರಾಣಾಗುತ್ತಿದ್ದೇವೆ. ಹಣದ ಗೋಪುರದೊಳಗೆ ಆಸೆಯ ಗಿಡಗಳನ್ನು ಚಿಗುರಿಸಿ ಸುಖದ ಕನಸು ಕಾಣುತ್ತಿದ್ದೇವೆ. ಇಂತಹ ವ್ಯಾವಹಾರಿಕ ಬದುಕಿನಾಚೆಗೆ ಸುಂದರವಾದ ಬದುಕೊಂದಿದೆ ಎಂಬುದೇ ನಮಗೆ ತಿಳಿದಿಲ್ಲ. ಅದನ್ನು ಕಲ್ಪಿಸಿಕೊಳ್ಳಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ವಸ್ತು ಸುಖದ ಪರಿಧಿಯಿಂದ, ಅವಲಂಬನೆಯಿಂದ ಹೊರಗೆ ಬರಲೇ ಆಗುತ್ತಿಲ್ಲ. ಸದಾ ಅತೃಪ್ತಿಯ ದಾಸರಾಗಿ ಸಾಗಿದೆ ಬದುಕು. ಆದರೆ ಇವೆಲ್ಲದರಿಂದ ದೂರವಾಗಿ ಬದುಕುವ ಜನರೂ ಇದ್ದಾರೆ  ನಿತ್ಯತೃಪ್ತರವರು..

ಇಂತಹ ಜನಜೀವನವನ್ನು ನೋಡುವ ಅವಕಾಶ ನನಗೆ ನನ್ನ ವೃತ್ತಿ ಜೀವನದಲ್ಲಿ ಆಗಾಗ ದೊರಕುತ್ತವೆ.  ಇದರಲ್ಲಿ ಹಿರೇಮನೆಯ ಚಾರಣವೊಂದು ಸುಂದರ, ಅನನ್ಯ ಅನುಭವ. ಹಿರೇಮನೆ ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿ ಪಂಚಾಯತ್ ವ್ಯಾಪ್ತಿಗೆ ಬರುವ ಪ್ರದೇಶ. ಆದರೆ ಗ್ರಾಮಕ್ಕೂ ಪಂಚಾಯಿತಿಗೂ ಇರುವ ದೂರ ೨೪-೨೫ಕಿ.ಮೀ.! ಹಟ್ಟಿಕೇರಿಯಿಂದ ಇರುವ, ದುರ್ಗಮವಾದ ಕಾಡಿನ ಕಚ್ಚಾ ಹಾದಿಯೇ ಇಲ್ಲಿಗೆ ಸಮೀಪದ ಕೆಂದಗಿಗೆ ತಲುಪಿಸುವ ರಾಜಮಾರ್ಗ. ಅಲ್ಲಿಂದ ೭-೮ ಕಿ.ಮೀ. ಕಾಡಿನ ಬೆಟ್ಟ ಏರಿದರೆ ಅಲ್ಲಿದೆ ಹಿರೇಮನೆ. ಜೋರಾಗಿ ಮಳೆ



ಪ್ರಾರಂಭವಾದರೆ ಊರಿನ ದಾರಿ ಬಂದ್. ಮತ್ತೇ ಆರು ತಿಂಗಳು ಅಜ್ಞಾತವಾಗಿ ಬಿಡುತ್ತವೆ ಆ ಊರುಗಳು.

ಮಳೆಗಾಲದ ಪ್ರಾರಂಭದ ದಿನವದು. ನಾನು, ನನ್ನ ಸ್ನೇಹಿತ/ಸಹೋದ್ಯೋಗಿ ಈ ಭಾಗದ ಉತ್ತಮ ಪರಿಚಯವಿರುವ ಶಿಕ್ಷಕರೊಂದಿಗೆ ಇಲ್ಲಿಗೆ ತೆರಳಲು ನಿರ್ಧರಿಸಿದೆವು. ನಾವು ಮೂರು ಜನ ಹಟ್ಟಿಕೇರಿಯಲ್ಲಿ (ಶಿಕ್ಷಕರಿಗೆ ಪರಿಚಿತವಾದವರಿಂದ) ಬಾಡಿಗೆಗೆ ಸೈಕಲ್ ಪಡೆದು ಪಯಣ ಬೆಳೆಸಿದೆವು. ನಾನು ಸೈಕಲ್ ಹೊಡೆಯದೇ ಹತ್ತು ವರ್ಷವಾಗಿತ್ತು. ಸೈಕಲ್ ಬ್ಯಾಲೆನ್ಸ್ ಹಿಡಿಯುವದೇ ಪ್ರಾರಂಭದಲ್ಲಿ ಕಷ್ಟವಾಯಿತು. ಸಾಲದ್ದಕ್ಕೆ ಕಚ್ಚಾರಸ್ತೆ ಬೇರೆ. ಒಂದೆರಡು ಕಿ.ಮೀ. ಹೋಗುವುದರಲ್ಲಿ ಸೈಕಲ್ ಸವಾರಿ ರೂಢಿಯಾಯಿತು. ಆದರೆ ೧೮ ಕಿ.ಮೀ. ಆ ಪ್ರಯಾಣದಲ್ಲಿ ಸವಾರಿಗಿಂತ ಸೈಕಲನ್ನು ತಳ್ಳಿದ್ದೇ ಹೆಚ್ಚು. ಅಷ್ಟು ಏರುದಾರಿ, ಹೊಳೆ-ಹಳ್ಳಗಳು. ಮಧ್ಯಾಹ್ನ ಹೊರಟವರು ಸಂಜೆಯಾಗುವ ಹೊತ್ತಿಗೆ ತಲುಪಿದ್ದು ಕೆಂದಗಿಗೆ. ಅಲ್ಲಿನ ಹಿರಿಯ ಗೌಡರ ಮನೆಗೆ ತೆರಳಿ ಜೊತೆಗೊಬ್ಬರು ಬಂದರೆ ಹಿರೇಮನೆಗೆ ಹೋಗುವುದಾಗಿ ತಿಳಿಸಿದೆವು. “ಈಗ ಬೇಡ ಕತ್ತಲಾಯಿತು. ಬೆಟ್ಟದ ಹಾದಿಯಲ್ಲದೇ, ಚಿರತೆ, ಹುಲಿ, ಕಾಡು ಪ್ರಾಣಿಗಳು ಅಪಾಯ ಬೇರೆ.’ ಇಲ್ಲೇ ತಂಗಿ ಬೆಳಿಗ್ಗೆ ಬೇಗನೆದ್ದು ಹೋಗಬಹುದು” ಎಂದು ಅಲ್ಲಿನ ಹಿರಿಯಜ್ಜಿ ತಿಳಿಸಿದರು. ಅಲ್ಲದೇ ಪ್ರೀತಿಯಿಂದ ಅಕ್ಕಿರೊಟ್ಟಿ, ಚಟ್ನಿ ಮಾಡಿ ನೀಡಿದರು. ಆಹಾರ ತೆಗೆದುಕೊಂಡಿದ್ದೇ ನಿದ್ರೆ ಎಳೆಯಿತು. ರಾತ್ರಿ ಮಲಗಿದವನಿಗೆ ಎಚ್ಚರವಾದದ್ದೇ ಬೆಳಿಗ್ಗೆ. ಆಯಾಸದ ಕಾರಣ ಆವರಿಸಿತ್ತು ಗಾಢವಾದ ಸುಖನಿದ್ರೆ.

ಬೆಳಿಗ್ಗೆಯೆದ್ದು ನಾವು ಮೂವರು, ದಾರಿತೋರಿಸಲು ಆ ಮನೆಯವರೊಬ್ಬರು ಹೀಗೆ ನಾಲ್ಕುಜನ ಚಾರಣಕ್ಕೆ ಶುರುವಿಟ್ಟೆವು. ಮನೆಯಿಂದ ನೂರಾರು ಮೀಟರುಗಳಲ್ಲೇ ಕಡಿದಾದ ಗುಡ್ಡದ ಇಳಿಜಾರಿನಲ್ಲಿ ಕಾಲುದಾರಿ ಪ್ರಾರಂಭ. ಕೊಳೆತ ತರಗಲೆಯ ಜಾರುಹಾದಿಯಿದು. ಜಾರಿದರೆ ಕಂದರಕ್ಕೆ. ಗಿಡಗಂಟೆಗಳನ್ನು ಹಿಡಿದುಕೊಂಡು ಏರುತ್ತ ಸಾಗಬೇಕು. ಏನೋ ಹರಟುತ್ತಾ, ಏದುಸಿರು ಬಿಡುತ್ತಾ, ನಿಲ್ಲುತ್ತಾ ನಮ್ಮ ಪ್ರಯಾಣ ಸಾಗಿತ್ತು. ಸ್ವಲ್ಪ ದೂರ ಹೋಗುವುದರಲ್ಲಿ ನನ್ನ ಮುಂದಿದ್ದ ಶಿಕ್ಷಕರು ಕಾಣುತ್ತಿಲ್ಲ. ನೋಡಿದರೆ ಜಾರಿ ಬಿದ್ದದ್ದರು. ಸಾವರಿಸಿಕೊಂಡ ಎದ್ದ ಅವರೇ ನಮಗೆ ಜಾಗೃತೆಯಿಂದ ನಡೆಯಲು ಸೂಚನೆ ನೀಡುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ನಾನು ಬಿದ್ದೆ. ಎರಡು ವಿಕೆಟ್ ಪತನ ಎಂದು ಹಾಸ್ಯ ಮಾಡುತ್ತ ಸಾಗುತ್ತಿದ್ದೆವು. ನನ್ನ ಹಿಂದೆ ಬರುತ್ತಿದ್ದ ಸ್ನೇಹಿತರು ಜೋಕ್ಸ್ ಹೇಳುತ್ತ ಆಯಾಸ ಅರಿವಿಗೆ ಬಾರದಂತೆ ಮಾಡುತ್ತಿದ್ದವರು ಒಮ್ಮೆಲೆ ಮಾತನಾಡುವುದನ್ನು ನಿಲ್ಲಿಸಿದರು. ಆಯಾಸವಾಗಿರಬೇಕೆಂದು ನಾನು ಭಾವಿಸಿದೆ. ಆದರೆ ಹತ್ತಾರು ಮೀಟರ್ ಹೋದಮೇಲೆ ಸಂಶಯದಿಂದ ತಿರುಗಿ ನೋಡಿದರೆ, ಮೂರನೆ ವಿಕೆಟ್ ಬಿದ್ದಿತ್ತು!

ಗುಡ್ಡದ ಕೊನೆ, ಕೊನೆಗೆ ಹೋದಂತೆ ತಂಪು ಪ್ರದೇಶ. ಒಂದೆರಡು ಮಳೆ ಬೇರೆ ಬಿದ್ದಿತ್ತು. ನಮ್ಮ ವಾಸನೆ ಹಿಡಿದ ಜಿಗುಣೆಗಳು ಹಸಿದ ಹುಲಿಯಂತೆ ರಕ್ತ ಹೀರಲು ಕಾಯುತ್ತಿದ್ದವು. ಇಲ್ಲಿಂದ ಮುಂದಿನ ಹಾದಿಯಲ್ಲಿ ನಾವು ಜಿಗಣೆಯಿಂದ ತಪ್ಪಿಸಿಕೊಳ್ಳಲು ನಾಟ್ಯಮಾಡುತ್ತ (ಜಿಗಿಯುತ್ತ) ಸಾಗಬೇಕಾಯಿತು. ಈ ಮಧ್ಯೆ ದಾರಿಯಲ್ಲಿ ನಮಗೆ ಮಾರ್ಗದರ್ಶಕರಾಗಿ ಬಂದವರು ಚಿರತೆ, ಕಾಡುಹಂದಿ ಇನ್ನಿತರ ಪ್ರಾಣಿಗಳ ಓಡಾಟದ ಕುರುಹನ್ನು ತೋರಿಸುತ್ತ ಬಂದರು. ಅಂತೂ-ಇಂತು ಮೂರು ಗಂಟೆಯ ಚಾರಣದ ನಂತರ ಹಿರೇಮನೆ ತಲುಪಿದೆವು. ಹತ್ತಾರು ಎಕರೆ ಬಯಲು ಪ್ರದೇಶದ ಸುತ್ತ ಅಡವಿಯ ಸೆರಗು. ಶಾಂತ ಪರಿಸರದ ಬಯಲಿನ ಮಧ್ಯೆ ನಾಲ್ಕಾರು ಮನೆಗಳ ಸುಂದರ ಪರಿಸರವದು. ಯಾವ ಆಡಂಬರವಿಲ್ಲದೆ, ಆಧುನಿಕತೆಯ ಸೋಂಕಿಲ್ಲದ ಸರಳ ಬದುಕು ನಡೆಸುತ್ತಿದ್ದ ಅಲ್ಲಿನ ಜನರು, ನಮ್ಮನ್ನು ಕಂಡಿದ್ದೇ ಪ್ರೀತಿಯಿಂದ ಸ್ವಾಗತಿಸಿದರು. ಇಲ್ಲಿ ಯಾರೂ ಬರುವುದಿಲ್ಲ, ನೀವು ಬಂದಿರಿ ಎಂದು ಸಂಭ್ರಮ ಪಟ್ಟರು. **ಊರಿನ ಕುರಿತು** : “ವನವಾಸದ ಸಂದರ್ಭದಲ್ಲಿ ಪಾಂಡವರು ಇಲ್ಲಿಗೆ ಬಂದಿದ್ದರು. ಆ ಕಾರಣಕ್ಕಾಗಿ ಇಲ್ಲಿ ಸೀಮೆ ಎಣ್ಣೆ ದೀಪ ಉರಿಸುವಂತಿಲ್ಲ. ಉರಿಸಿದರೆ ಊರಿಗೆ ಕೇಡು. ಕೇವಲ ಹರಳೆಣ್ಣೆ, ಎಳ್ಳೆಣ್ಣೆ ದೀಪ ಮಾತ್ರ ಉರಿಸಬಹುದು.” ಎಂದು ಊರಿನ ಮುಖಂಡ ಫಾಲ್ಗುಣ ಗೌಡ ಹಿರೇಮನೆಯ ಪರಿಚಯ ಪ್ರಾರಂಭಿಸಿದರು. ಊರೆಲ್ಲ ಸುತ್ತಾಡಿಸಿದರು. ಅಲ್ಲೊಂದು ಅಡಕೆಯ ತರಹದ ಗಿಡ ಕಾಣಿಸಿತು. ಅದಕ್ಕೆ ಚಿಕ್ಕ, ಚಿಕ್ಕ ಅಡಕೆ ಹಣ್ಣುಗಳಾಗಿತ್ತು. ಅದು ಭೀಮನ ಅಡಕೆಯಂತೆ. ವನವಾಸಕ್ಕೆ ಭೀಮ ಬಂದಾಗ ಇದನ್ನು ನೆಟ್ಟು ಹೋಗಿದ್ದ ಎಂಬ ಪ್ರತೀತಿ.

ಇನ್ನು ಊರಿಗೆ ಯಾವುದೇ ಮೂಲ ಸೌಕರ್ಯವಿಲ್ಲ. ಇವರು ನಡೆದದ್ದೇ ದಾರಿ, ಇಲ್ಲಿಗೆ ಕಚ್ಚಾ ರಸ್ತೆಯೂ ಕೂಡ ಇಲ್ಲ. ಇರುವ ಒಂದೇ ಸವಲತ್ತೆಂದರೆ ರೇಶನ್ ಕಾರ್ಡ. ಆದರೆ ರೇಶನ್ ತರಲು ೨೫-೨೬ಕಿ.ಮೀ ದೂರದ ಹಟ್ಟಿಕೇರಿಗೆ ನಡೆದೇ ಬರಬೇಕು. ಇನ್ನು ಕೈಗಾ ಎನ್ಪಿಸಿಯವರು ವಿದ್ಯುತ್ ಕೊಡುತ್ತೇವೆಂದು ಸರ್ವೇ ಮಾಡಿಕೊಂಡು ಕೆಲವು ವರ್ಷಗಳೇ ಉರುಳಿದರೂ ವಿದ್ಯುತ್ ಬಂದಿಲ್ಲ. ಟಿ.ವಿ. ಟೇಪರಿಕಾರ್ಡ್, ಮೊಬೈಲ್ ಯಾವೊಂದು

ಆಧುನಿಕ ವಸ್ತುವನ್ನೂ ಕೇಳಬೇಡಿ. ಮನೋರಂಜನೆಗೆ ಇರುವ ಏಕೈಕ ಸಾಧನ ರೇಡಿಯೋ. ಅದರ ಹೊರತಾಗಿ ಅವರ ಜನಪದ 'ಗುಮಟೆಪಾಂಗು' ಅಷ್ಟೇ.

ಇಲ್ಲಿನ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂದು ತೆರೆದ ಇಜಿಎಸ್ ಕೇಂದ್ರ, ಎರಡು ವರ್ಷ ಅದು ನಡೆಯಿತು. ನಂತರ ಮಕ್ಕಳ ಕೊರತೆಯಿಂದ ಸ್ಥಗಿತವಾಯಿತು. ಮನೆಗೆ ಹೆಂಚು ಕೂಡ ಕೆಲ ವರ್ಷದ ಹಿಂದಿನ ವರೆಗೆ ಇದ್ದಿಲ್ಲ. ಈಗ ಇಲ್ಲಿನ ಎರಡು ಮನೆಗೆ ಹೆಂಚು ಹೊದೆಸಲಾಗಿದೆ. ೧೫ ಕಿ.ಮೀ. ದೂರದ ದೇವಳ ಮಕ್ಕಿಯಿಂದ ತಲೆಹೊರೆಯ ಮೇಲೆ ಹೆಂಚು ತರಲಾಗಿದೆ. ಅಂತಹ ಸದೃಢ ಕಾಯದವರಿಗೂ ಹೊರಲಾಗುವ ಹೆಂಚು ಒಂದು ಬಾರಿಗೆ ಕೇವಲ ೫ಮಾತ್ರ. ಅಷ್ಟು ಕಡಿದಾದ ಬೆಟ್ಟದ ದಾರಿಯದು.


ಇವರು ತಮಗೆ ಬೇಕಾದಷ್ಟೇ ಧಾನ್ಯವನ್ನು ಬೆಳೆದುಕೊಳ್ಳುತ್ತಾರೆ. ಹೆಚ್ಚಿಗೆ ಬೆಳೆದರೆ ಮಾರಾಟ ಕೊಂಡೊಯ್ಯುವ ವೆಚ್ಚವೇ ಬೆಲೆಗಿಂತ ಜಾಸ್ತಿಯಾಗುತ್ತದೆ. ತಮಗೆ ಬೇಕಾದ ಅಕ್ಕಿಯನ್ನು, ಅವಲಕ್ಕಿಯನ್ನು ಒನಕೆಯಿಂದ ಕುಟ್ಟಿ ಮಾಡಿಕೊಳ್ಳುತ್ತಾರೆ. ಹಿಟ್ಟನ್ನು ಬೀಸಿ ಮಾಡಿಕೊಳ್ಳುತ್ತಾರೆ. ತಮಗೆ ಬೇಕಾದ ಬುಟ್ಟಿ, ಸಲಕೆ ಇನ್ನಿತರ ಸಾಮಗ್ರಿಗಳನ್ನು ಅವರೇ ತಯಾರಿಸಿಕೊಳ್ಳುತ್ತಾರೆ. ಇನ್ನು ಬೇಳೆ, ಚಹಾಪುಡಿ, ಸಕ್ಕರೆ ಮುಂತಾದ ಇಲ್ಲಿ ತಾವೇ ಸಿದ್ಧಪಡಿಸಿಕೊಳ್ಳಲಾಗದ, ಇಲ್ಲಿ ಸಿಗದ ವಸ್ತುಗಳನ್ನು ಕೊಂಡು ತರುತ್ತಾರೆ. "ಇದಕ್ಕೆ ಹಣಬೇಕಲ್ಲ, ಇದಕ್ಕೇನು ಮಾಡುತ್ತೀರಿ?" ಎಂದು ಕೇಳಿದರೆ ಪೇಟೆ ಸಮೀಪದ ತಮ್ಮ ಸಂಬಂಧಿಕರ ಮನೆಯಲ್ಲಿ ಕೆಲ ದಿನ ಉಳಿದು ಕೂಲಿ ಕೆಲಸಕ್ಕೆ ಹೋಗುತ್ತಾರಂತೆ. ಇದರಿಂದ ಬಂದ ಸಂಪಾದನೆಯಿಂದ ಈ ವಸ್ತುಗಳನ್ನು ಖರೀದಿ ಮಾಡಿ ತರುತ್ತಾರಂತೆ. ಇನ್ನುಳಿದಂತೆ ಇವರು ತಮ್ಮ ಊರುಬಿಟ್ಟು ಹೋಗುವುದಿಲ್ಲ. ಅನಾರೋಗ್ಯ ಬರುವುದೇ ಇಲ್ಲ. ಬಂದರೆ ಬೇರು, ವನಸ್ಪತಿ ಔಷಧ ಮಾಡುತ್ತೇವೆ ಎನ್ನುತ್ತಾರೆ.

ಹೀಗೆ ಆಧುನಿಕತೆಯಿಂದ ಹೊರತಾದ ಸರಳ, ಪ್ರಾಮಾಣಿಕ, ಸಂತೃಪ್ತ ಜೀವನ ಇವರದ್ದು. ಆದರೆ ಬೇರೆಯವರ ಕುರಿತು ಯೋಚಿಸದೇ ಎಲ್ಲ ಸೌಲಭ್ಯವನ್ನು ಧಾರಾಳವಾಗಿ ಬಳಕೆ ಮಾಡಿಕೊಳ್ಳುತ್ತಿರುವ ನಾವು, "ನಿಮಗಾಗಿ ಏನು ಕೊಡಲು ಆಗುತ್ತಿಲ್ಲ, ಮೊದಲೇ ತಿಳಿದಿದ್ದರೆ ಏನಾದರು ಮಾಡುತ್ತಿದ್ದೆವು" ಎಂದು ಚಡಪಡಿಸುವ ಇಂತಹವರ ಎದುರಿಗೆ ತೀರ ಕುಬ್ಜರಾಗಿ ಹೋಗುತ್ತೇವೆ ಅಲ್ಲವೇ?

***

## 28. ನೃತ್ಯ ಮಯೂರಿ


– ಗಂಗಾಧರಸ್ವಾಮಿ ಎಸ್



ನೃತ್ಯ ಮಯೂರಿಯೇ, ನೃತ್ಯ ಶಿರೋಮಣಿಯೇ,
ಕಲೆಯನೆ ಜೀವಂತಿಕೆಯಾಗಿ ಮೈಗೂಡಿಸಿಕೊಂಡವಳೆ,
ಇಚ್ಛಿಸಿದಂತೆ ಹೊರಳಾಡುವ ಅಂಗಾಂಗ ಉಳ್ಳವಳೆ,
ನೃತ್ಯದಲ್ಲಿಯೇ ಧರ್ಮದರ್ಶನವ ಮಾಡಿಸಿದವಳೆ
ಶಿವನ ಲೀಲೆಯ ಕೊಂಡಾಡಿದವಳೆ
ನಯನಗಳ ಅಂಚಲ್ಲಿಯೇ ನೋಡುಗರ ಮನಸೆಳೆದವಳೆ,
ಭರತ ನಾಟ್ಯ ಪ್ರವೀಣೆ,
ಏನೆಂದು ಬಣ್ಣಿಸಲಿ, ನಾ ಹೇಗೆ ಬಣ್ಣಿಸಲಿ,
ನಿನ್ನ ಬಣ್ಣಿಸಲೋ, ನಿನ್ನ ನೃತ್ಯವ ಬಣ್ಣಿಸಲೋ,
ನೋಟದಲೆ ನೋಡುಗರ ಕೊಲ್ಲುವ
ಆ ನಿನ್ನ ಕಂಗಳ ಬಣ್ಣಿಸಲೋ,
ಹಕ್ಕಿಯ ರೆಕ್ಕೆಯಂತೆ ಹಾರಾಡುತಿರುವ
ಆ ನಿನ್ನ ಕೈಗಳ ಬಣ್ಣಿಸಲೋ,
ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತಿರುವ
ಆ ನಿನ್ನ ಕಾಲ್ಗಳ ಬಣ್ಣಿಸಲೋ,
ಬಣ್ಣಿಸಲೊಲ್ಲೆನು ನಾನು,
ನಿನ್ನ ಬಣ್ಣಿಸಲು ಪದಗುಚ್ಛಗಳ
ಹುಡುಕ ಹೊರಟಿಹೆನು ನಾನು, ಹೊರಟಿಹೆನು ನಾನು .

## 29. ಮರೆಯದಿರಿ ಈ ಹಸ್ತಾಕ್ಷರ

- ಸಂತೋಷಕುಮಾರ ದಿಕ್ಸಂಗಿ



ವಿದ್ಯಾರ್ಥಿಗಳಾಗಿರುವಾಗ ಒಂದು ನಿರ್ದಿಷ್ಟ ಹಂತ ಮುಗಿಯುವ ಸಂದರ್ಭದಲ್ಲಿ ಪರಸ್ಪರರ ಆಟೋಗ್ರಾಫ್ ಪಡೆಯುವುದು ಒಂದು ಔಪಚಾರಿಕ ಹವ್ಯಾಸ. ಎಸ್. ಎಸ್. ಎಲ್. ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಹೀಗೆ ವಿವಿಧ ಹಂತಗಳು ಮುಗಿಯುವ ದಿನಗಳು ಹತ್ತಿರವಾಗಿರುವಂತೆ ಆಟೋಗ್ರಾಫ್ ಪಡೆಯುವ ಭರಾಟೆ ಹೆಚ್ಚುತ್ತದೆ. ಅದರಲ್ಲಿ ಬಹುತೇಕರು ಕೊಡುವ ಆಟೋಗ್ರಾಫಗಳು ಸುಮ್ಮನೆ ಅವರ ನೆನಪಿಗಾಗಿ ಎಂಬಂತಿರುತ್ತವೆ. ಆದರೆ ಕೆಲವು ಮಾತ್ರ ನಾವು ಮತ್ತೆ ಮತ್ತೆ ಮೆಲಕು ಹಾಕುವಂತಿರುತ್ತವೆ. ನಾನು ಹಾಗೆ ಪದೇ ಪದೇ ಮೆಲಕು ಹಾಕುವ ಮತ್ತು ನನ್ನ ಬದುಕಿಗೆ ಅದನ್ನು ಅನ್ವಯಿಸುಕೊಳ್ಳುವ, ಒಂದು ಆಟೋಗ್ರಾಫ್ ಜೊತೆಗಿನ ಹೇಳಿಕೆಯೆಂದರೆ **"ಶಾಂತ ಸಮುದ್ರ ಶ್ರೇಷ್ಠ ನಾವಿಕರನ್ನು ಸೃಷ್ಟಿಸಲಾರದು"** ಎಂಬುದು.

ಈ ಒಂದು ಹೇಳಿಕೆ ಏನೆಲ್ಲ ಅರ್ಥಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿದೆ ಎಂದರೆ ಇದರ ಮೇಲೆ ಒಂದು ಪುಸ್ತಕವನ್ನೇ ಬರೆಯಬಹುದು. ಆದರೆ ಮಿತವಾಗಿ ಅದನ್ನು ಅರ್ಥೈಸುವುದಾದರೆ ಬದುಕೆಂಬ ಸಾಗರದಲ್ಲಿ ಪ್ರತಿಯೊಬ್ಬನೂ ತನ್ನ ದೋಣಿಯನ್ನು ಮುನ್ನಡೆಸಲೇಬೇಕು. ಈ ದೀರ್ಘ ಅವಧಿಯ ಪಯಣದಲ್ಲಿ ಎಲ್ಲರೂ ಬಯಸುವುದು ತಮ್ಮ ದೋಣಿ ಯಾವುದೇ ತೊಂದರೆಯಿಲ್ಲದೆ ದಡ ಸೇರಲಿ ಎಂಬುದು. ಅಂದರೆ ಯಾರೂ ಕಷ್ಟಗಳನ್ನು ಬಯಸುವುದಿಲ್ಲ.ಇನ್ನೂ ಸರಳವಾಗಿ ಹೇಳಬೇಕೆಂದರೆ ಎಲ್ಲರೂ ಶಾಂತವಾದ ಸಮುದ್ರದಲ್ಲಿ ದೋಣಿ ನಡೆಸಲು ಬಯಸುತ್ತಾರೆಯೇ ಹೊರತು ಕದಡಿದ ಸಮುದ್ರದಲ್ಲಲ್ಲ. ಆದರೆ ನಿಸರ್ಗ ನಿಯಮದಂತೆ ಸಮುದ್ರ ಯಾವಾಗಲೂ ಶಾಂತವಾಗಿರುವುದಿಲ್ಲ. ಹಾಗೇಯೆ ಬದುಕು ಕೂಡ. ಪದವಿ ವ್ಯಾಸಂಗ ಮುಗಿಯುವವರೆಗ ಬಹುತೇಕರು ಕಷ್ಟವಿಲ್ಲದೆ ಬೆಳೆದಿರುತ್ತಾರೆ.ಅಲ್ಲಿಯವರೆಗೆ ಕೌಟುಂಬಿಕ ಕಷ್ಟಗಳು ಮನೆಯ ಹಿರಿಯರ ಜವಾಬ್ದಾರಿಗಳಾಗಿರುತ್ತವೆ. ಹಾಗಾಗಿ ಅದರ ಬಿಸಿ ನಮಗೆ ತಟ್ಟಿರುವುದಿಲ್ಲ. ಆದರೆ ಪದವಿ ನಂತರ ನಿಜ ಬದುಕು ಏನೆಂಬುದು ಗೊತ್ತಾಗಲಾರಂಭಿಸುತ್ತದೆ. ಎಲ್ಲರಿಗೂ ಕಷ್ಟ ಪಡದೆ ಒಳ್ಳೆಯ ನೌಕರಿ ಸಿಗಬೇಕೆಂಬ ಅಪೇಕ್ಷೆ ಇದ್ದೇ ಇರುತ್ತದೆ. ಆದರೆ ನಿಜ ಸ್ಥಿತಿ ಹಾಗಿಲ್ಲ. ಶ್ರಮ ಹಾಕಲೇಬೇಕು, ಕಷ್ಟಪಡಲೇಬೇಕು. ಹಾಗಿದ್ದೂ ನಮಗೆ ಬೇಕಾದದ್ದು ದೊರೆತೇ ಬಿಡುತ್ತದೆ ಎಂಬ ಭರವಸೆಯಿಲ್ಲ. ಸೋಲಾದಾಗ ಕುಗ್ಗುವುದು ಮನುಷ್ಯನ ಸಹಜ ಸ್ವಭಾವ. ಆದರೆ ಕುಗ್ಗಿದರೆ ಮುನ್ನಡೆಯಲಾಗುವುದಿಲ್ಲ. ಮುನ್ನಡೆಯಬೇಕಾದರೆ, ನಮ್ಮ ಗುರಿಯನ್ನು ತಲುಪಬೇಕಾದರೆ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಸಾಮರ್ಥ್ಯ ಹೆಚ್ಚಾದಷ್ಟೂ ಕೆಲಸಗಳು ಹೆಚ್ಚು ಸರಳವಾಗುತ್ತವೆ. ಕಷ್ಟಗಳು ಕಷ್ಟಗಳಾಗಿ ಉಳಿಯುವುದಿಲ್ಲ. ಇದು ಕದಡಿದ ಸಮುದ್ರ ನಾವಿಕನೊಬ್ಬನಿಗೆ ಕಲಿಸುವ ಪಾಠ. ಒಟ್ಟು ಮಾನವ ಸಮಾಜ, ನಾಗರಿಕತೆ ಇಂದಿನ ಈ ಉನ್ನತ ಸ್ಥಿತಿಗೆ ತಲುಪಲು ಕಾರಣ ಬದುಕೆಂಬ ಸಮುದ್ರ ಆಗಾಗ ಕದಡಿದ್ದರಿಂದಲೇ ಶ್ರೇಷ್ಠ ನಾವಿಕರು ಹುಟ್ಟಿದರು. ಅಲೆಗಳಿಗೆ ಹೆದರುವವರು ಸೋಲುತ್ತಾರೆ.

ಸ್ನಾತಕೋತ್ತರ ಪದವಿ ಮುಗಿಯುವ ಸಂದರ್ಭದಲ್ಲಿ ನನ್ನ ಆಟೋಗ್ರಾಫ್ ಪುಸ್ತಕದಲ್ಲಿ ಬರೆದಿರುವ ಈ ಒಂದು ಪುಟ್ಟ ಸಾಲು **"ಶಾಂತ ಸಮುದ್ರ ಶ್ರೇಷ್ಠ ನಾವಿಕರನ್ನು ಸೃಷ್ಟಿಸಲಾರದು"** ಎಂಬ ನುಡಿಯು ಇಷ್ಟೊಂದು ಅರ್ಥ ನೀಡುತ್ತದೆ ಎಂದು ನನಗೆ ಆ ಸಂದರ್ಭದಲ್ಲಿ ಕಿಂಚಿತ್ತೂ ಅನ್ನಿಸಿರಲಿಲ್ಲ. ದಿನ ಕಳೆದಂತೆ ಅದರ ಅರ್ಥ ಬದುಕಿನಲ್ಲಿ ಒಂದು ಭಾಗವಾಗಿ ಬಿಟ್ಟಿದೆ.

***

## 30. Probiotics: The technological Development of Food as a Medicine

-Sachinkumar Salakki

Probiotics are the microorganisms that benefits our health on consuming perpetually in adequate amounts. These are generally consumed in the form of pills, powders and foods that comprises various bacteria and yeast which are beneficial for the host they colonize,

Benefits Of probiotics

- These microbe's dependence on food made them to affiliate with host's gastro enteric region, thereby replacing harmful microbes in those regions.
- Intestinal infection are not very uncommon to children. Disease attacks for infants occur due to colonization of bacteria like E.Coli, Clostridium, Shigella, Campylobacter, Pseudomonas, and Enterococcus. Probiotics drastically reduces the risk that may confer due to colonization of these pathogens. This is one of the reasons for recommending the compulsion of breast feeding for infants.
- Probiotics that contains Lactobacillus proved effective in reducing diarrhea associated with Retrovirus. Lactobacillus Competes with viruses for receptors on immune cells. This reduces invasiveness of the virus particles.
- Probiotics triggers immune response and promotes IgA (Antibodies) Secretion. It activates T-Cells that produces gamma interferon which inhibits Chloride (Salt) secretion; hence it stops diarrhea.

- Probiotics can tackle the problems associated with antibiotic usage; mainly antibiotic and drug associated diarrhea and dysentery.
- Probiotics inhibit growth of bacteria H.Pylori- which is responsible for gastritis, peptic ulcers and gastric cancers subsequently.
- Probiotics are being effectively used for treating allergies like lactose in-tolerance and other allergies.

Foods that are Rich in Probiotics

Milk and milk productswhich are traditionally used as foods has good number of Probiotic bacteria and yeast.
Along with many traditional food's number of commercial foods are available that has defined good proportions of probiotics which are listed below.

Yakult: is the first commercialized fermented milk that contain probiotic called as Lactobacillus casei Shirota.

Yogurt: is a fermented milk product produced from lactic acid bacteria such as Lactobacillus dulbreckii sub.sp bulgaricus and other bacteria like Streptococcus thermophiles and Bfidobacteria. Lactic Bacteria produces Lactic acid which transforms milk proteins into some other byproduct to give yogurt.

Kefir: is a fermented product of milk and cereals prepared by probiotic bacteria and yeast.

Kimchi: is a fermented vegetable dish prepared by cabbage, radish and cucumber.

Saurkraut: is cabbage fermented by various lactic acid bacteria.


Other Producers: Pickles, Cheese, Bulgarican milk, Appam, Dhokla, vegetable, vegetable Sauce and many other products that vare prepared in different regions of the world.

Probiotics are the best example for the approach "Foods as medicine".

## 31.ಮರೀಚಿಕೆ

**– ಸುದರ್ಶನ**

ನೀ ಮಾಯೆಯೋಳಗೋ, ಮಾಯೆ ನಿನ್ನೊಳಗೋ.....ನೀ ದೇಹದೊಳಗೋ, ದೇಹ ನಿನ್ನೊಳಗೋ.........
ನೀ ಕನಸಿನೊಳಗೋ, ಕನಸು ನಿನ್ನೊಳಗೋ..., ನೀ ಅಮಲಿನೊಳಗೋ, ಅಮಲು ನಿನ್ನೊಳಗೋ........
ಮನಸೂ ದೇಹಗಳೆರಡೂ ಸೆಳೆಯುವ ಸುಳಿಯಂತಿರುವ ಪ್ರೇಮದೊಳಗೋ....



ಅವನು ಮನೆಯಲ್ಲಿ ಮದುವೆಗೆ ಹೊರಡಲು ತಯಾರಾಗುತ್ತಿದ್ದ, ಜೊತೆಗೆ ಬರುವ ಸ್ನೇಹಿತರಿಗಾಗಿ ಕಾಯುತ್ತಿದ್ದ. ಹೊಸದಾಗಿ ಕೊಂಡ ಕಾರಿನಲ್ಲಿ ಒಬ್ಬನೇ ಕುಳಿತ, ಒಂದು ವಾರದ  ಹಿಂದಷ್ಟೇ ಆ ಕಾರಿನಲ್ಲಿ ಅವನ ಹುಡುಗಿಯ ಜೊತೆ ಪಯಣಿಸಿದ ಖುಷಿಯ ನೆನಪು: ಏತಕ್ಕಾಗಿ ಆ ಪಯಣ? ಇನ್ನೇನಿದ್ದೀತು ಮದುವೆಗೆ ಎಲ್ಲರನ್ನೂ ಆಮಂತ್ರಿಸಲು ಈ ಕಾರಿನಲ್ಲಿಯೇ ಹೋ ಗಿದ್ದರು.... ಅವಳೂ ಸಹ ಮದುವೆ ಮನೆಯಲ್ಲಿ ವಧುವಿನ ಉಡುಗೆಯಲ್ಲಿ ಕಂಗೊಳಿಸುತ್ತಿದ್ದಳು. ಅವಳ ಮನೆಯವರ ಖುಷಿ, ಸಂಭ್ರಮಕ್ಕೆ ಪಾರವೇ ಇರಲಿಲ್ಲ,ಅವಳ ತಂದೆ,ತಾಯಿ ಅಣ್ಣ ಎಲ್ಲರೂ ಬಂಧು–ಬಳಗದವರನ್ನು ಸ್ವಾಗತಿಸಿ ಉಪಚರಿಸುವುದರಲ್ಲಿ ಉತ್ಸುಹಕರಾಗಿದ್ದರು.

ಇತ್ತ ಸ್ನೇಹಿತರ ಬರುವಿಕೆಯ ನಿರೀಕ್ಷೆಯಲ್ಲಿ ಕಾದುಕುಳಿತಿದ್ದ ಅವನಿಗೆ ಎಲ್ಲೋ ಒಂದೆಡೆ ನೋವಿನ ಭಾವ, ಒಂದೆಡೆ ಖುಷಿ, ಯಾರ ಮದುವೆಗೆ? ಎಲ್ಲಿಗೆ ಹೊರಟಿರುವೆ? ಯಾಕೀ ತಯಾರಿ? ಹಾ!! ಅವಳಿಗಾಗಿ, ಅವಳ ಬದುಕಿನ ಖುಷಿಗಾಗಿ, ತಾನೇ ಮುಂದಾಗಿ ನನ್ನಲ್ಲಿನ ಪ್ರೀತಿಯ ಬೀಜವನ್ನು ಬಿತ್ತಿ ಹಸಿರಾಗಿಸಿದವಳಿಗಾಗಿ, ನಾನೇ ಬದುಕು, ನೀನು ಇರಲೇ ಬೇಕು ಎಂದು ಹಂಬಲಿಸಿದವಳಿಗಾಗಿ, ನನ್ನನ್ನು ಪ್ರೀತಿಸಿದವಳಿಗಾಗಿ. ಅವನು ನಿಧಾನವಾಗಿ ನೆನಪಿನಂಗಳಕ್ಕೆ ಜಾರಿದ.....

ಧವನ್ ಎರಡನೇ ವರ್ಷದ ಪದವಿ ಅಭ್ಯಸಿಸುತ್ತಿದ್ದ ವಿದ್ಯಾರ್ಥಿ. ಆಗ ತಾನೇ ಬಂದ ಮೊದಲನೇ ವರ್ಷದ ವಿದ್ಯಾರ್ಥಿಗಳ ಬಗ್ಗೆ ಈತ ಹೆಚ್ಚಾಗಿ ಗಮನಹರಿಸುತ್ತಿರಲಿಲ್ಲ ಆದರೂ ಸ್ನೇಹಿತರು ಅವರ ಬಗ್ಗೆ ಮಾತಾಡಿಕೊಳ್ಳುವುದನ್ನು ಕೇಳಿಸಿಕೊಂಡಿದ್ದ. ಈತನಿಗೆ ಇವನದೇ ಆದ ಒಂದು ಗೆಳೆಯ, ಗೆಳತಿಯರ ಗುಂಪಿತ್ತು. ಸ್ನೇಹದ ವಿಚಾರವಾಗಿ ಮೊದಲು ನಿಲ್ಲುತ್ತಿದ್ದ ಎಲ್ಲರನ್ನೂ ಕಾಳಜಿ ಮಾಡುತ್ತಿದ್ದ ಈತನ ಗುಣದಿಂದಲೇ ಎಲ್ಲರಿಗೂ ಹತ್ತಿರವಾಗಿದ್ದ. ಹೀಗಿರುವಾಗ ವಾರಕ್ಕೊಮ್ಮೆ ಸೀನಿಯರ್, ಜೂನಿಯರ್ ವಿದ್ಯಾರ್ಥಿಗಳಿಗಾಗಿ ಇದ್ದ ಅಣಬೇ ಕೃಷಿ ತರಗತಿಯಲ್ಲಿ ಮೊದಲ ಬಾರಿಗೆ ಜೂನಿಯರ್ ವಿದ್ಯಾರ್ಥಿಗಳನ್ನು ಭೇಟಿಮಾಡಿ, ಎಲ್ಲರ ಪರಿಚಯಮಾಡಿಕೊಂಡ, ಸಾಕಷ್ಟು ಸ್ನೇಹಿತರೂ ಆದರು. ಆ ಜೂನಿಯರ್ ಹುಡುಗಿಯರ ಗುಂಪಿನಲ್ಲಿ ಇವಳೂ ಸಹ ಇದ್ದಳು. ಹೆಸರು ವಸುಧ. ಮುಕ್ತ ಹಾಗೂ ಮುಗ್ದ ಮನಸಿನ ಹುಡುಗಿ ಆಕೆ. ಸ್ನೇಹಜೀವಿಯೂ ಆಗಿದ್ದಳು,ಅಷ್ಟೇ ಸೂಕ್ಷ್ಮತೆಯೂ ಅವಳಲ್ಲಿತ್ತು.

ಇವರಿಬ್ಬರೂ ಸ್ನೇಹಿತರಾದರು,ತನ್ನ ಗುಂಪಿನ ಗೆಳೆಯರಿಗೂ ಧವನ್ ಅವಳ ಹಾಗೂ ಅವಳ ಸ್ನೇಹಿತರ ಪರಿಚಯ ಮಾಡಿಸಿದ. ಕಾಲಕಳೆದಂತೆ ವಸುಧಳಿಗೆ, ಧವನ್ ಬಗ್ಗೆ ಒಂದು ಭಾವನೆ ಹುಟ್ಟಲಾರಂಭಿಸಿತು, ಆತನ ಕಾಳಜಿ, ಮಾತು, ಕಲ್ಮಶವಿಲ್ಲದ ಮನಸ್ಸು, ಅವನ ಗುಣ ಇವಳಲ್ಲಿ ಪ್ರೀತಿಯನ್ನು ಹುಟ್ಟುವಂತೆ ಮಾಡುವಲ್ಲಿ ಪ್ರಮುಖಪಾತ್ರ ವಹಿಸಿದವು. ಹೇಳಬೇಕೆಂದರೆ ಅವನೇನು ಸುಂದರ ಹುಡುಗನಲ್ಲ, ಹೇಳಿಕೊಳ್ಳುವ ದೈಹಿಕ ಚರ್ಯೆಯೂ ಇರಲಿಲ್ಲ. ಆದರೂ ತನ್ನಂತೆ ತಾನು ಇರುವ, ಎಲ್ಲರನ್ನೂ ಪ್ರೀತಿಸುವ, ಗೌರವಿಸುವ ಗುಣ ಅವನದು, ಈ ಅಂಶ ಸಾಕಿತ್ತು ಅವಳಲ್ಲಿ ಪ್ರೀತಿಯ ಚಿಗುರೊಡೆಯಲು.

ಹೃದಯವಿದ್ದರೂ ಭಾವನೆಗಳಿಲ್ಲದೇ ಜೀವಂತ ಗೊಂಬೆಯಂತಿದ್ದ ಆಕೆಯ ಮನಸ್ಸಿನಲ್ಲಿ ಅವನ ಕಾರಣದಿಂದ ಭಾವಗಳ ಹೂವು ಅರಳಿತು, ಅವನ ಪ್ರೀತಿಗಾಗಿ ಹಂಬಲಿಸ ತೊಡಗಿತು. ಮೊಬೈಲ್ ಎಂಬ ಮಾಂತ್ರಿಕವಸ್ತು ಇವರ ಸಂದೇಶಗಳಿಗೆ ಸಾಕ್ಷಿಯಾಗಿತ್ತು. ಧವನ್ ಅವಳನ್ನು ಉತ್ತಮ ಸ್ನೇಹಿತೆ ಎಂದು ತಿಳಿದುಕೊಂಡಿದ್ದ.
ಒಂದು ದಿನ ಅವಳು ತನ್ನ ಪ್ರೀತಿಯ ವಿಚಾರವನ್ನು ಆತನಿಗೆ ಸಂದೇಶದ ಮೂಲಕ ತಿಳಿಸಿದಳು, ಆದರೆ ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದ ಇವನಿಗೆ ಒಬ್ಬರಿಗಾಗಿ ಮುಡಿಪಾಗುವ, ಅವರಿಗಾಗಿಯೇ ಬದುಕುವ, ಸ್ವಾರ್ಥಕ್ಕೆ ನೂಕುವ ಪ್ರೇಮದ ಬಗ್ಗೆ ಆಸಕ್ತಿ ಇರಲ್ಲಿಲ್ಲ, ಅದರ ಶಕ್ತಿಯ ಬಗೆಗೂ ಅರಿವಿರಲಿಲ್ಲ, ಆದ್ದರಿಂದ ಅವಳ ನಿವೇದನೆಗೆ ಈತ ಸಾವಧಾನವಾಗಿಯೇ ತಿರಸ್ಕಾರದ ಉತ್ತರವನ್ನು ಸೂಕ್ಷ್ಮವಾಗಿಯೇ ನೀಡಿದ್ದ. ಕೊನೆಯವರೆಗೂ ಒಳ್ಳೆಯ ಸ್ನೇಹಿತರಾಗಿ ಇರುವ ಎಂಬ ಮಾತನ್ನು ಸಹ ಹೇಳಿದ್ದ.

ಅವನ ಮಾತಿನ ಹಿಂದೆ ಇದ್ದ ಯೋಚನೆ ಎಂದರೆ ಇದು ಕೇವಲ ಸಾಂದರ್ಭಿಕ ಆಕರ್ಷಣೆ, ಕಾಲಕಳೆದಂತೆ ಅದು ಮಾಯವಾಗುವುದೆಂದು ಅವನು ಭಾವಿಸಿ ಆಕೆಗೆ ಆ ಮಾತನ್ನು ಹೇಳಿ ಸಮಾಧಾನಪಡಿಸಿದ್ದ. ಅವನಿಗೆ ತಿಳಿದಿತ್ತು ನಿಜವಾದ ಪ್ರೀತಿ ಕಾಲದೊಂದಿಗೆ ಬದಲಾಗುವುದಿಲ್ಲ, ಇವಳದು ಈಗಿನ ಭಾವನೆಯಷ್ಟೇ ಎಂದು ಪರಿಗಣಿಸಿದ್ದ. ಅದು ಅಲ್ಲಿಯೇ ನಿಂತು ಸಹಜವಾದ ಗೆಳೆತನ ಸಾಗಿತ್ತು, ಅದರೊಡನೆ ಸಂದೇಶಗಳ ವಿನಿಮಯ, ಮಾತುಕತೆ, ಸ್ನೇಹಿತರ ಜೊತೆ ಪ್ರವಾಸ ಹೀಗೆ ನಡೆದಿತ್ತು, ಹೀಗೆ ಎರಡು ವರ್ಷ ಕಳೆದು ಈತ ಪದವಿ ಮುಗಿಸುವ ಹಂತಕ್ಕೆ ಬಂದ,ಅವಳು ಕೊನೆಯ ವರ್ಷದ ಪದವಿಯಲ್ಲಿದ್ದಳು.
ಈ ವರ್ಷಗಳಲ್ಲಿ ಅವರ ಮಧ್ಯೆ ಉತ್ತಮ ಸ್ನೇಹ ಸಂಬಂಧ ಬೆಳೆದಿತ್ತು, ಎಲ್ಲಾ ರೀತಿಯ ವಿಚಾರಗಳ ವಿನಿಮಯ ಅವರ ನಡುವೆ ನಡೆಯುತಿತ್ತು, ಪರೀಕ್ಷೆಗೆ ತಯಾರಿ ಆಗುವ ಬಗೆಗೂ, ಓದುವ ವಿಚಾರದ ಬಗೆಗೂ, ಕುಟುಂಬದ ವಿಚಾರದ ಬಗೆಗೂ ಮಾತನಾಡುತಿದ್ದರು. ಆಕೆಯ ತಂದೆ ಎಷ್ಟು ಕಷ್ಟದ ಪರಿಸ್ಥಿತಿಯಲ್ಲಿಯೂ ಅವರ ಮಕ್ಕಳನ್ನು ಬೆಳೆಸಿದ ಬಗ್ಗೆ ಹೇಳಿಕೊಂಡು ಹೆಮ್ಮೆಪಡುತಿದ್ದಳು. ಇಬ್ಬರ ಕುಟುಂಬದ ಬಗೆಗೂ ಗೌರವವಿತ್ತು.

ಈ ಸಹಜ ಸ್ನೇಹದ ಮಧ್ಯೆಯೂ ಆಕೆಯಲ್ಲಿ ಅವನ ಬಗ್ಗೆಯಿದ್ದ ಪ್ರೀತಿ ಹಾಗೆಯೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಳು, ಇದು ಅವನನ್ನು ಇವಳ ಪ್ರೀತಿಯ ಮುಂದೆ ಸೋಲುವಂತೆ ಮಾಡಿತು. ಅವಳ ನಿಜವಾದ ಪ್ರೀತಿ, ಮುಗ್ದತೆ, ಮಗುವಿನ ಮನಸ್ಸು, ಸ್ನೇಹದ ಗುಣ, ಹುಂಬತನ, ನಗು-ಅಳು ಎಲ್ಲವನ್ನೂ ಪ್ರೇಮದ ಚೌಕಟ್ಟಿನಲ್ಲಿ ನೋಡುವಂತೆ ಪ್ರೇರೇಪಿಸಿತು. ಅವನಿಗಾಗಿ ಇವಳು ಜೀವನದ ಎಲ್ಲಾ ಖುಷಿಯನ್ನೂ ಮುಡುಪಾಗಿಡಲು ತಯಾರಿದ್ದಳು. ನಿಜವಾಗಿ ಅವನು ಅವಳ ಪ್ರೀತಿಯ ಮುಂದೆ ಸೋತಿದ್ದ, ಅವಳನ್ನು ಮನಸಾರೆ ಪ್ರೀತಿಸ ತೊಡಗಿದ.

ಅವರಿಬ್ಬರ ಪ್ರೀತಿ ಪಾರ್ಕ್‌ಗಳಲ್ಲಿ, ಸಿನಿಮಾ-ಕಾಫಿಶಾಪ್‌ಗಳಲ್ಲಿ, ಇಬ್ಬರೇ ಗುಟ್ಟಾಗಿ ಓಡಾಡುವ, ನೈಜ ಭಾವನೆಗಳಿಲ್ಲದೇ ದೈಹಿಕ ಆಕಾಂಕ್ಷೆಗಳಿಗೆ ಸೋಲುವ, ಇತರೆ ಸಾಮಾನ್ಯ ಪ್ರೇಮಿಗಳಂತೆ ಇರಲಿಲ್ಲ. ಅವರೆಲ್ಲೇ ಭೇಟಿಯಾದರೂ ಅವರೊಡನೆ ಇಬ್ಬರ ಸ್ನೇಹಿತರ ಗುಂಪಿರುತಿತ್ತು, ಪ್ರವಾಸದಲ್ಲಿ, ಸಿನಿಮಾದಲ್ಲಿ, ಬೇಟಿಯ ಸಂದರ್ಭದಲ್ಲಿ ಯಾವಾಗಲೂ ಜೊತೆಗೆ ಗೆಳೆಯರು ಇರಬೇಕು. ಏಕೆಂದರೆ ಇಬ್ಬರ ಜೀವನದಲ್ಲಿಯೂ ಸ್ನೇಹಕ್ಕೆ ಅಷ್ಟು ಮಹತ್ವವನ್ನು ನೀಡುತ್ತಿದ್ದರು.

ಧವನ್ ಉನ್ನತ ವ್ಯಾಸಂಗಕ್ಕಾಗಿ ಸ್ವಲ್ಪದೂರದ ಊರಿಗೆ ಹೋದರೂ ವಾರದಲ್ಲಿ ಒಮ್ಮೆಯಾದರೂ ಬೇಟಿಯಾಗುವ ಅವಕಾಶಕ್ಕಾಗಿ ಕಾಯುತ್ತಿದ್ದರು, ಸಿಕ್ಕಾಗ ಮನಸಾರೆ ಮಾತನಾಡುತ್ತಾ ಸುಖ-ದುಃಖಗಳನ್ನು ಹಂಚಿಕೊಳ್ಳುತ್ತಿದ್ದರು, ಜಗಳ, ಕೋಪ, ಕಾಯಿಸುವಿಕೆ, ಕಾಯುವಿಕೆ, ರೇಗಿಸುವುದು ಇವೆಲ್ಲವೂ ಹಾಗೆಯೇ ಸಾಗಿತ್ತು. ಅವನಿಗೆ ಇವಳು ಪುಟ್ಟ ಮಗುವಿನಂತೆ ಭಾಸವಾಗುತ್ತಿದ್ದಳು. ಅವರಿಬ್ಬರ ಪ್ರೀತಿಯನ್ನು ಅಳೆಯುವ ಮಾಪನವೇ ಇರದಾಗಿತ್ತು. ೪ ವರ್ಷಗಳ ಕಾಲಹೀಗೆಯೇ ಕಳೆದಿತ್ತು. ಇಬ್ಬರ ಜೀವನ ಖುಷಿಖುಷಿಯಾಗೇ ಸಾಗಿತ್ತು.

ಧವನ್.......ಯಾರೋ ಕರೆದಂತಾಯಿತು ಈತ ವಾಸ್ತವಕ್ಕೆ ಬಂದ, ಸುತ್ತಲೂ ಸ್ನೇಹಿತರು ನಿಂತಿದ್ದರು. ಹೊರಡೋಣವೇ ಮಹೂರ್ತಕ್ಕೆ ತಡವಾಗುತ್ತದೆ, ಎಲ್ಲರೂ ಕಾಯುತ್ತಿದ್ದಾರೆ. ಹಾ..ಹೊರಡೋಣ ಎಂದ ಈತ. ಸುಮಾರು ಒಂದೂವರೆ ತಾಸಿನ ಪಯಣ, ಮನಸ್ಸಿನಲ್ಲಿ ಹೇಳಿಕೊಳ್ಳಲಾಗದ ನೋವು, ನಗುಮುಖದ ಮುಖವಾಡ, ತನ್ನ ಹುಡುಗಿಯ ಹೆಸರು ಹೇಳುತ್ತ ರೇಗಿಸುತ್ತಿರುವ ಗೆಳೆಯರು, ಜೊತೆಯಲ್ಲಿದ್ದ ತಂಗಿಯೂ ಒಮ್ಮೆ ಕೇಳಿದಳು ಅಣ್ಣ ಅವಳನ್ನು ಎಲ್ಲಿ ಕೊನೆಯದಾಗಿ ಬೇಟಿಯಾದೆ...? ಭೇಟಿ? ಮುಖದಲ್ಲಿ ಸಣ್ಣ ನಗುವೊಂದು ಮೂಡಿ ಮಾಯವಾಯಿತು.

ಒಂದು ವಾರದ ಹಿಂದೆ....ಅವಳು ತನ್ನ ಮದುವೆಯ ಆಮಂತ್ರಣ ಪತ್ರಿಕೆ ನೀಡಲು ನನ್ನ ಮನೆಗೆ ಬಂದಾಗ............!!! ಹೇಳಿ ಮತ್ತೆ ಸುಮ್ಮನಾದ.

ಕಾರು ಚಲಿಸುತ್ತಿತ್ತು, ಬೀಸುತ್ತಿದ್ದ ಬಿಸಿಗಾಳಿಗೆ ಹಾರಿಬಂದ ಧೂಳು ಇವನ ಕಣ್ಣಿನಲ್ಲಿ ಬಿದ್ದು ಕಣ್ಣುಜ್ಜುತ್ತಾ ನೋಡಿದ, ಅವಳ ಮನೆಯದಾರಿ, ಎರಡು ತಿಂಗಳ ಹಿಂದೆ ಅವಳನ್ನು ತನ್ನ ಬೈಕಿನಲ್ಲಿ ಅಲ್ಲಿಗೆ ಬಿಟ್ಟು ಹೇಳಿದ್ದ. ಸರಿ ನಿನ್ನ ಇಚ್ಛೆಯಂತಲೇ ಆಗಲಿ... ನಿನ್ನ ಬದುಕಿನ ಖುಷಿಗಾಗಿ, ಎಲ್ಲಕ್ಕಿಂತ ಹೆಚ್ಚಾಗಿ ನಿನ್ನ ತಂದೆ-ತಾಯಿ, ಕುಟುಂಬದ ಗೌರವ ನಮ್ಮ ಪ್ರೀತಿಯ ತ್ಯಾಗವನ್ನು ಬಯಸುವುದಾದರೆ ನಾನು ಅದಕ್ಕೆ ತಯಾರಿದ್ದೇನೆ. ನಿನ್ನ ಒಳ್ಳೆಯ ಗೆಳೆಯನಾಗಿಯೇ ಉಳಿಯುತ್ತೇನೆ.

ಆಗಿದ್ದೇನೆಂದರೆ, ಈ ಸ್ನೇಹ-ಪ್ರೀತಿಯ ತುಂಬಿದ ಎರಡು ಜೀವಗಳ ಬದುಕಿನಲ್ಲಿ ಸಂದರ್ಭಗಳು ವಿರುದ್ಧವಾಗಲು ಪ್ರಾರಂಭವಾಗಿತ್ತು. ವಸುಧಾಳ ಪ್ರೀತಿಯ ವಿಚಾರ ಅವಳ ತಾಯಿಗೆ ತಿಳಿದು ಅವರು ಅದನ್ನು ವಿರೋಧಿಸಿದರು. ಏಕೆಂದರೆ ಇಲ್ಲಿ ಜಾತಿಯ ವಿಚಾರ ಪ್ರಮುಖವಾಗಿತ್ತು, ಅಮ್ಮ ಒಪ್ಪಿದರೂ, ಅದನ್ನು ತಂದೆಯ ಬಳಿ ಹೇಳುವಷ್ಟ ಧೈರ್ಯ ಅಮ್ಮ-ಮಗಳು ಇಬ್ಬರಿಗೂ ಇರಲಿಲ್ಲ. ಏಕೆಂದರೆ ಅವರು ಈ ವಿಚಾರವನ್ನು ಹೇಗೆ ತೆಗೆದುಕೊಳ್ಳುತ್ತಾರೋ, ಅದರಿಂದ ತಾಯಿಗೆ, ವಸುಧಳಿಗೆ ಯಾವ ತೊಂದರೆ ಆಗುವುದೋ ಎಂಬ ಭಯ ಇಬ್ಬರಿಗೂ ಕಾಡಿತ್ತು. ಇದು ಆಗದ ಕೆಲಸವೆಂದೇ ಭಾವಿಸಿ ಆ ನಿರ್ಧಾರಕ್ಕೆ ಬಂದಿದ್ದರು. ಒಮ್ಮೆ ಧವನ್‌ಗೆ ವಸುಧಾಳು ಅಪ್ಪನ ಬಳಿ ಹೋಗಿ ಕೇಳು ಎಂದರೂ, ಮರುಕ್ಷಣದಲ್ಲಿ ಅವರ ಪ್ರತಿಕ್ರಿಯೆಗೆ ಹೆದರಿ ಕೇಳದೆ ಸುಮ್ಮನಿರುವುದೇ ಒಳಿತು ಎಂದು ತಡೆಯುತ್ತಿದ್ದಳು. ಇದರಿಂದ ಆತ ಸಾಕಷ್ಟ ಗೊಂದಲವನ್ನು ಎದುರಿಸಿದ,ಧವನ್‌ಗೆ ಮನೆಯಕಡೆ ಅಂತಹ ಸಮಸ್ಯೆ  ಏನೂ ಇರಲಿಲ್ಲ ಆದರೆ ಅವನು ಕೆಲಸಕ್ಕೆ ಸೇರುವವರೆಗೂ ಅವಳ ಮನೆಯಲ್ಲಿ ಈ ವಿಚಾರವನ್ನು ಹೇಳಲು ಹೋಗುವುದು ಸೂಕ್ತವಲ್ಲ ಎಂಬ ಭಾವನೆಯಿಂದ ಸುಮ್ಮನಿದ್ದ, ಈ ಮಧ್ಯೆ ಅವನಿಗೆ ಕೆಲಸವೂ ದೊರಕಿತು. ಇನ್ನೇನು ಮುಂದಿನ ತಿಂಗಳಲ್ಲಿ ಅವರ ಮನೆಯಲ್ಲಿ ಈ ವಿಚಾರವನ್ನು ಹೇಳಬೇಕೆಂದು ಅಂದುಕೊಳ್ಳುವಾಗಲೇ, ಈ ಎಲ್ಲಾ ಘಟನೆಗಳನ್ನು ನೋಡಿ ವಸುಧ ಒಮ್ಮೆ ನಿನ್ನೊಡನೆ ಬರುವೆ ಮನೆಬಿಟ್ಟು ಎಂದರೂ, ಮತ್ತೊಮ್ಮೆ ತಾನು ಮನೆಯವರಿಗಾಗಿ ತನ್ನ ಪ್ರೀತಿಯನ್ನು ತೊರೆಯುವುದೇ ಸರಿ ಎಂದು ನಿರ್ಧರಿಸಿದಳು, ಧವನ್‌ನ ಬಳಿ ನಾವಿಬ್ಬರೂ ಸ್ನೇಹಿತರಾಗಿಯೇ ಇರೋಣ ಎಂಬ ಮಾತನ್ನು ಹೇಳಿದಳು.

ತನ್ನನ್ನು ಅಷ್ಟು ಪ್ರೀತಿಸಿದ ಜೀವ, ನನಗಾಗಿ ಪ್ರೀತಿಯನ್ನು ನೀಡಿದ, ನನ್ನಲ್ಲಿ ಪ್ರೇಮದ ಹಸಿರನ್ನು ಚಿಗುರಿಸಿದ ಆ ಹೃದಯವೇ ಈಗ ಈ ನಿರ್ಧಾರಕ್ಕೆ ಬಂದಿದೆ ಎಂದರೆ ಅದರ ಹಿಂದೆ ಇದ್ದ ಚಿಂತನೆಗಳನ್ನು ಅವನು ಅವಲೋಕಿಸಿದ. ಅವಳ ತಂದೆಯ ಪರಿಶ್ರಮ, ಅವರು ಬದುಕಿನಲ್ಲಿ ಎದುರಿಸಿದ ಕಷ್ಟಗಳು, ಮಕ್ಕಳನ್ನು ಈ ಹಂತಕ್ಕೆ ತಂದು, ಬೆಳೆಸಿದ ಅವರನ್ನು ಸಮಾಜದ ಮುಂದೆ, ಅವರ ಸಂಬಂಧಿಕರ ಮುಂದೆ ಸಣ್ಣವರಾಗಿಸಲು ಈ ಜೀವಗಳು ಸಿದ್ಧರಿರಲಿಲ್ಲ. ಅವರ ಪ್ರೀತಿ-ತ್ಯಾಗದ ಮುಂದೆ ನಮ್ಮ ಪ್ರೀತಿ ಏನೂ ಅಲ್ಲ ಎಂಬ ಭಾವನೆ ಕಾಡಿತು. ಯಾವುದೇ ವಿಚಾರಗಳ ಮೂಲಕ ಚಿಂತಿಸಿದರೂ ಈ ಪ್ರೀತಿಯ ಗೆಲುವು, ಬೆಳೆಸಿದವರ ನೋವಿನ ಅಡಿಪಾಯದ ಮೇಲೆ ನಿಲ್ಲುವುದಾದರೆ ಅಂತಹ ಗೆಲುವಿನ ಕೆಟ್ಟಖುಷಿ ನಮಗೆ ಬೇಡವೆಂಬ ಚಿಂತನೆಗೆ ಬಂದು, ಮುಂದುವರಿಯುವ ವಿಚಾರವನ್ನು ಬಿಟ್ಟು ಧವನ್ ಅವಳ ಮಾತಿಗೆ, ಅದಕ್ಕಿಂತ ಹೆಚ್ಚಾಗಿ ಅವರ ಹೆತ್ತವರ ಖುಷಿಗಾಗಿ ತನ್ನ ಪ್ರೀತಿಯ ತ್ಯಾಗಕ್ಕೆ ತಯಾರಾಗಿದ್ದ.

ಹಾಗೆಯೇ ಈ ವಿಚಾರವನ್ನು ಯಾರಿಗೂ ಹೇಳದೇ, ಇವರಿಬ್ಬರಲ್ಲಿಯೇ ಉಳಿಸಿಕೊಂಡರು. ಸಹಜವಾಗಿಯೇ ಇದ್ದರು ಯಾವುದೇ ಸ್ನೇಹಿತರಿಗೆ ಅವರಬಗ್ಗೆ ಈ ನಿರ್ಧಾರಗಳ ಬಗ್ಗೆ ಸಣ್ಣ ಸುಳಿವೂ ಇರಲ್ಲಿಲ್ಲ, ಯಾಕೆಂದರೆ ಎಂದಿಗೂ ಅವರ ಕಣ್ಣಿಗೆ ಇವರು ಪ್ರೇಮಿಗಳ ಹಾಗೆ ಕಂಡಿರಲಿಲ್ಲ. ಇದಾಗಿ ಸ್ವಲ್ಪದಿನದಲ್ಲಿಯೇ ಅವಳ ಮನೆಯಲ್ಲಿ ಒಬ್ಬ ಹುಡುಗನನ್ನು ಅವಳಿಗೆ ಮದುವೆ ನಿಶ್ಚಯಿಸಲು ನೋಡಿದರು. ಅವಳು ಧವನ್‌ನ ಬಗ್ಗೆ ಇದ್ದ ಮೊದಲಿನ ಭಾವನೆಗಳಿಂದ ಹೊರಬಂದಿದ್ದಳು. ಮನೆಯವರ ಮಾತಿನಂತೆ, ಅವರ ತಾಯಿ ಅವಳನ್ನು ಅದಕ್ಕಾಗಿ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದರು.ಆಗಿನಿಂದ ಅವರ ಮಧ್ಯೆಗಿನ ಸಂದೇಶಗಳ ವಿನಿಮಯವೂ ನಿಂತಿತ್ತು.
 ವಾರದ ಹಿಂದೆ ಅವಳು ಆಕೆಯ ತಾಯಿಯೊಡನೆ ಧವನ್‌ನ ಮನೆಗೆ ಮದುವೆಯ ಪತ್ರಿಕೆ ನೀಡಲು ಬಂದಿದ್ದಳು. ಧವನ್‌ನ ತಂದೆ–ತಾಯಿಯ ಕಾಲಿಗೆ ಬಿದ್ದು ಆಶೀರ್ವಾದ ತೆಗೆದುಕೊಳ್ಳುವಾಗ ಈತನ ಮನದಲ್ಲಿ ಭಾವನೆಗಳ ಸಾಗರವೇ ಹರಿದಿತ್ತು ಈ ಮನೆಗೆ ಸೊಸೆಯಾಗಿ ಬರಬೇಕಾದವಳು ಹೀಗೆ ಅತಿಥಿಯಾಗಿ ಬಂದಿರುವವಳಲ್ಲ ಎಂದು. ಮನೆಯಿಂದ ಹೊರಬಂದಾಗ ಆಕೆಯ ತಾಯಿ ಧವನ್‌ಗೆ ಧನ್ಯವಾದಗಳನ್ನು ಹೇಳಿದರು. ನಿನಗೆ ನನ್ನ ಮಗಳಿಗಿಂತ ಒಳ್ಳೆಯ ಹುಡುಗಿ ಸಿಗುತ್ತಾಳೆ ಎಂದರು. ನಿನ್ನಂತ ಮಗನನ್ನು ಹೆತ್ತವರು ನಿಜವಾಗಿಯೂ ಪುಣ್ಯವಂತರು ಎಂದರು. ವಸುಧಳನ್ನು ಕಳೆದುಕೊಳ್ಳುತಿರುವ ಆ ಸಂದರ್ಭದಲ್ಲಿ ಅವರ ಮಾತು ಇವನಿಗೆ ಯಾವುದೇ ಹೆಮ್ಮೆ ಎನಿಸಲ್ಲಿಲ್ಲ. ಅವರನ್ನು ತನ್ನ ಕಾರಿನಲ್ಲಿಯೇ ಮನೆಗೆ ತಲುಪಿಸಿದ್ದ. ಈಗ ಅವೆಲ್ಲವೂ ಬರಿ ನೆನಪು. ಪುನಃ ವಾಸ್ತವಕ್ಕೆ ಬಂದ.

ಕಾರು ಮದುವೆ ಮಂಟಪದ ಮುಂದೆ ಬಂದು ನಿಂತಿತ್ತು. ಧವನ್ ಕಾರಿನಿಂದ ಇಳಿಯುವಾಗ ಮಂಗಳವಾದ್ಯಗಳ, ಗಟ್ಟಿಮೇಳದ ಸದ್ದು ಕೇಳಿಬಂತು. ಅವನು ಅಲ್ಲಿಯೇ ನಿಂತ ಸ್ನೇಹಿತರು ಒಳಗೆ ಹೋಗಲು ಕರೆದರು. ತನ್ನ ಜೇಬಿನಿಂದ ಅವಳಿಗಾಗಿ ತಂದಿದ್ದ ಚಿನ್ನದ ಸರದ ಉಡುಗೊರೆಯನ್ನು ತೆಗೆದು ಮಂಟಪದ ಒಳಗೆ ಕಾಲಿಟ್ಟ ಮಧುಮಗಳ ಉಡುಗೆಯಲ್ಲಿ ಕಂಗೊಳಿಸುತ್ತಿದ್ದ ಆಕೆಯನ್ನು ಕಂಡು ಈತನ ಮುಖದಲ್ಲಿ ಸಣ್ಣ ನಗು.ಆದರೆ ಎದೆಯೊಳಗೆ ಹೇಳಲಾಗದ ಹಿಂಸೆ. ವಸುಧಳ ತಾಯಿಯ ಬಳಿಹೋಗಿ ಅವನು ತಂದ ಉಡುಗೊರೆಯನ್ನು ಅವರ ಕೈಗೆ ನೀಡಿ ಅವಳಿಗೆ ಕೊಡಲು ಹೇಳಿದ, ಅಷ್ಟರಲ್ಲಿ ಸ್ನೇಹಿತರು ಸ್ಟೇಜ್‌ನ ಮೇಲೆ ಉಡುಗೊರೆ ನೀಡಲು ಕರೆದರು. ಇವನು ಒಲ್ಲದ ಮನಸ್ಸಿನಿಂದಲೇ ಹೋದ, ವಸುಧ ತನ್ನ ಗಂಡನಿಗೆ ಈತನ ಪರಿಚಯಮಾಡಿಸಿದಳು. ಆತನ ಮುಖವನ್ನು ನೋಡಿ ಒಂದು ಸಣ್ಣ ಮುಗುಳ್ನಗೆಯನ್ನು ನೀಡಿ, ಅವಳಿಗೆ ಹಾರೈಸುವಾಗ, ಸ್ನೇಹಿತರು ಪೋಟೊಗೆ ನಿಲ್ಲಲ್ಲು ಕರೆದರು, ಆದರೆ ಧವನ್ ಅಲ್ಲಿ ನಿಲ್ಲದೇ ಕೆಳಗೆ ಇಳಿದುಬಂದ,

ಆ ಕ್ಷಣ ಅವನ ಪ್ರೀತಿಯ ಶವ ಚಿತೆಯೇರುತ್ತಿರುವಂತೆ ಅವನಿಗೆ ಭಾಸವಾಗುತ್ತಿತ್ತು. ಅವನ ಹೃದಯವು ತನ್ನ ಗೆಳತಿಯನ್ನು ಈ ಜನುಮಕೆ ಕೊನೆಯಾಗಿಸಿಕೊಳ್ಳುವ ದುಃಖದಿಂದ ಚೀರುತ್ತಿತ್ತು.ಆದರೆ ಹೊರಗಿನ ಜಗತ್ತು ಆ ಸಂಭ್ರಮದಲ್ಲಿ ಮುಳುಗಿತ್ತು, ಇವನ ಮುಖದಲ್ಲಿ ಭಾವಗಳೇ ಇಲ್ಲದೆ ನಿಧಾನವಾಗಿ ಹೊರಬಂದ, ಅಲ್ಲಿ ವಸುಧಳ ತಂದೆ ಬಂಧುಗಳ ಜೊತೆ ಹರಟೆಹೊಡಿಯುತ್ತಿದ್ದುದನ್ನು, ತಾಯಿ ಎಲ್ಲರನ್ನೂ ಉಪಚರಿಸುವುದನ್ನು, ಆಕೆಯ ಅಣ್ಣ ತನ್ನ ಸ್ನೇಹಿತರ ಜೊತೆ ಓಡಾಡುವುದನ್ನು ಕಂಡ, ಅವರ ಖುಷಿ, ಸಂತಸ ಸಡಗರವನ್ನು ನೋಡಿ ಮನದಲ್ಲಿ ಅಂದುಕೊಂಡ ಈ ಖುಷಿಗೆ ಎಲ್ಲೊ ಒಂದೆಡೆ ನಾನು ಕಾರಣವಾಗಿರಬಹುದೇ......... ಮತ್ತದೇ ಮುಗುಳ್ನಗು, ಅದೇ ಮೌನ,

ಕಾರಿನ ಬಳಿಬಂದು ನಿಂತ ಅವನ ಬಳಿ ಎಲ್ಲ ಸ್ನೇಹಿತರೂ ಬಂದರು, ಅವರೆಲ್ಲರಿಗೂ ಇವರ ವಿಚಾರವಾಗಿ ತಿಳಿದಿತ್ತು. ಕೆಲವರಂತು ದುಃಖಿತರಾಗಿ ಹೇಳಿದರು. ನಿನ್ನಷ್ಟು ಗಟ್ಟಿ ಮನಸ್ಸು, ಇರುವ ಸನ್ನಿವೇಶವನ್ನು ಹಾಗೆ ತೆಗೆದುಕೊಳ್ಳುವ ಸಾಮರ್ಥ್ಯ ನಿಜವಾಗಿಯೂ ನಮ್ಮಲ್ಲಿಲ್ಲ, ಅವರ ಖುಷಿಗಾಗಿ ನಿನ್ನ ಬದುಕಿನ ಸಂತೋಷವನ್ನು ತ್ಯಾಗಮಾಡಿದ ನೀನು ನಮ್ಮ ದೃಷ್ಟಿಯಲ್ಲಿ ಬಹಳ ಎತ್ತರದ ಸ್ಥಾನದಲ್ಲಿರುವೆ ಎಂದರು.... ಧವನ್ ಪ್ರತಿಕ್ರಿಯೆ ನೀಡಲಿಲ್ಲ. ಒಂದು ಹನಿಯೂ ಕಣ್ಣಿನಿಂದ ಜಾರಲಿಲ್ಲ.

ವೇದಿಕೆಯ ಮೇಲೆ ಬಂಧುಗಳಿಂದ ಶುಭಾಷಯಗಳನ್ನು ಪಡೆದು, ಖುಷಿಯಾಗಿದ್ದ ವಸುಧಳನ್ನು ಕಂಡು ದೂರದಿಂದಲೇ ಅವಳ ಜೀವನ ಹೀಗೆ ಸಂತಸಮಯವಾಗಿರಲಿ, ಜಗತ್ತಿನ ಎಲ್ಲಾ ಖುಷಿಗಳು ಅವಳಿಗೆ ಸಿಗಲಿ ಎಂದು ಹಾರೈಸಿದ, ಅವಳ ಸುಖಮಯ ಜೀವನಕ್ಕಾಗಿ ದೇವರಲ್ಲಿ ಪ್ರಾರ್ಥಿಸಿದ. ನನ್ನ ಮುಂದಿನ ಬದುಕಿಗೆ ಅವಳ ಜೊತೆ ಕಳೆದ ಕೆಲದಿನಗಳ ನೆನಪುಗಳು ಸಾಕು, ಅದರಲ್ಲೇ ಬದುಕುವೆ ಎಂದು ಮನದಲ್ಲಿಯೇ ಹೇಳಿಕೊಂಡು ಭಾರವಾದ ಹೃದಯದಿಂದ ಆ ಜಾಗಕ್ಕೆ ನೋವಿನ ವಿದಾಯ ಹೇಳಿದ.

ತನ್ನ ಮರುಭೂಮಿಯಂತಹ ಬದುಕಿನಲ್ಲಿ ಪ್ರೀತಿಯ ತಂಗಾಳಿಯನ್ನು ತಂದ ಆಕೆ, ಕೊನೆಯಲ್ಲಿ ಮರೀಚಿಕೆಯಾದಂತಹ ಅನುಭವ ಇವನಿಗೆ ಗಾಢವಾಗಿ ಕಾಡಿತ್ತು.
ತನ್ನ ಹೃದಯದ ಗೋಡೆ ಮೇಲೆ ಅವನು ಕೊನೆಯದಾಗಿ ಬರೆದ ವಾಕ್ಯ– ಪ್ರೀತಿ, ಕೆಲವು ದಿನಗಳ ಗೆಳೆಯ.

**Cool clicks**



# Bayalu Coordinators:

| Sl. No. | Name | Mail id |
|---|---|---|
| 1 | Raghavendra Herle G. | raghavendra.herle@azimpremjifoundation.org |
| 2 | Showrish Kudkuli | showrish.kudkuli@azimpremjifoundation.org |
| 3 | Ramachandra Bhat | brbhat@azimpremjifoundation.org |
| 4 | Benny Mathews | benny.mathews@azimpremjifoundation.org |
| 5 | Chikkaveeresha S. V. | chikkaveeresha.v@azimpremjifoundation.org |
| 6 | Lakshmidevi | lakshmidevi@azimpremjifoundation.org |
| 7 | Gopalakrishna Induguli | gopalakrishna@azimpremjifoundation.org |
| 8 | Yathiraj Sharma | yathiraj.sharma@azimpremjifoundation.org |

| | | |
|---|---|---|
| 9 | Naganand GV | naganandа.gv@azimpremjifoundation.org |
| 10 | Dinesh SK | dinesh.sk@azimpremjifoundation.org |
| 11 | Ravi B T | ravi@azimpremjifoundation.org |
| 12 | Harish Shetty | harish.shetty@azimpremjifoundation.org |
| 13 | Sudharshan | sudharshan.k@azimpremjifoundation.org |
| 14 | Shivaji | shivaji.ganpatrao@azimpremjifoundation.org |
| 15 | Lohit | lohitashwa.chamanoor@azimpremjifoundation.org |
| 16 | Giridhar Vaidya | giridhara.vaidya@azimpremjifoundation.org |
| 17 | Muzamimml | muzammil.mahaldar@azimpremjifoundation.org |
| 18 | Shivakumara Swamy | shivakumara.swamy@azimpremjifoundation.org |
| 19 | Shivukumar | shivukumar@azimpremjifoundation.org |
| 20 | Gangadhar.Swamy | gangadhar.swamy@azimpremjifoundation.org |
| 21 | Pradeep.Kumar | pradeep.kumar@azimpremjifoundation.org |
| 22 | Swathi Subramanya | swathi.subramanya@azimpremjifoundation.org |
| 23 | Ravi B. T | ravi@azimpremjifoundation.org |
| 24 | Gundappa Katekar | gundappa.katekar@azimpremjifoundation.org |